Minister's Statement *re* : leather industry at Doddasiddavvanahalli.

Sri H. M. CHANNABASAPPA (Minister for Industries).—Sir, the other day I had promised Sri Bheemappa Naik to give a certain clarification with regard to the leather industry at Doddasiddavvanahalli. I would like to submit for the information of this House and Sri Bheemappa Naik that at Doddasiddavvanahalli, leather industry was starred on 5th January 1956 and eight students are being trained there.

---

1 P.M.

House Committee Elections.

Mr. DEPUTY SPEAKER.—The Chair desires to announce that as the number of candidates that have signified their intention to stand for election to the House Committee is equal to the number of places to be filled up, the following members are declared elected:

Sriyuts—

T. G. Thimme Gowda
Mudduramiah,
U. M. Madappa
P. M. Swamidurai
B. Chikkanna
Shivananje Gowda.

Under sub-rule (2) of Rule 175 of the Rules of Procedure and Conduct of Business in the Mysore Legislative Assembly, the Deputy Speaker of the Assembly will be the Chairman of the Committee.

Elections to the Public Health Board.

Mr. DEPUTY SPEAKER.—The Chair desires to announce that till the last hour fixed for the receipt of candidature applications two candidates had signified their intention to stand for election to the Public Health Board. As the number of candidates is equal to the number of places to be filled up by election, the following members are declared elected :—

Sri C. H. Linga Devaru
Sri A. Muniyappa.

BUDGET FOR 1956-57—DEMANDS FOR GRANTS.

Mr. DEPUTY SPEAKER.—The House will now take up Financial business. Demands Nos. 19, 20 and 23, relating to Medical, Public Health and Rural Development. If the House has no objection, I will move Demand No. 19 but Demand No. 20 also may be discussed. Is that agreeable?

HON'BLE MEMBERS.—Yes.

DEMAND NO. 19—MEDICAL.

38. MEDICAL.

Mr. DEPUTY SPEAKER.—Motion moved:

"That a sum not exceeding Rs. 1,21,76,000 be granted to the Government to defray the charges which will come in course of payment during the year ending 31st day of March 1957, in respect of 'Medical'."

We will have two hours for these two Demands up to lunch, and reassembling after lunch at 3-30, we will have one hour and a half the Rural Development Demand. Is that agreeable?

HON'BLE MEMBERS.—Yes.

Sri B. NARAYANASWAMY (Mysore South).—Sir, on Demand No. 19, I have tabled three cut motions, one relating to the retention of the Ayurvedic and Unani College at Mysore, second regarding the reasons that led to the abolition of the Medical School in Bangalore and third, regarding the deputation of medical men to foreign countries for higher studies. Sir, I will take one by one.

Sir, regarding the abolition of the Medical School at Bangalore, I will be satisfied if the Government would let me know the reasons. Sir, the Medical School has been in existence for the last several years, and Government without giving any inkling as to the abolition of the Medical School, all of a sudden announced the abolition of the Medical School in Bangalore. I would like to know whether the main

object in abolishing the Medical School is to convert it into a Medical College. If that is so, I am satisfied.

Secondly, as regards the deputation of Medical men in Government service, there is a good deal of discontent and many of the senior medical men are complaining that their chances are becoming fewer and they are being deprived of their opportunities by deputing junior men to foreign countries for higher studies. The aim of sending or deputing medical men to higher studies is very obvious. We want medical men in our country to be very efficient and we want the best of services that are needed. As such, I request the Hon'ble Minister to kindly clarify the policy of the Government regarding this question of deputation of medical men to foreign countries for higher studies.

Sir, the third cut motion in which I am very much interested and which has affected me and to some extent upset me also, is regarding the transfer of the Ayurvedic College from Mysore to Bangalore. I hope the Hon'ble Minister will kindly bear with me. As Hon'ble Members are aware the Ayurvedic College is an institution that has been in Mysore for the last several years. It has come up due to the donation of a philonthropist and Ayurvedic Pandit Sri Gundlu Pandit Lakshmanachar who in 1928 donated a sum of Rs. 15,000 for the construction of an Ayurvedic College and later in 1930 donated another Rs. 6,000 for the construction of a dispensary, and Government have equally donated similar sums as a result of which today we are having the Ayurvedic College and also the dispensary attached to that college at Mysore. Sir, this news of transfering the Ayurvedic College from Mysore to Bangalore came to me like a bolt from the blue. Last year the Hon'ble Minister was good enough to reply to some of our questions that the Ayurvedic College would not be transferred from Mysore to Bangalore. I do not know what reasons came in the way of Government retaining that institution in Mysore. Sir, certain reasons that have been given for this by the Government, in my opinion, do not appear to be good reasons. That much I will say. The main reason for the Government deciding to transfer the Ayurvedic College from Mysore to Bangalore seems to be the agitation that is being carried on by students that they are not getting necessary facilities and as such that Institution may be transferred to Bangalore. I would like to ask the Government whether this is a good reason for transfering the Ayurvedic College which has been a gift—a munificent gift of a philanthropist. Sir, what pains me most is that the Hon'ble Minister in some other place has stated certain things which are not palatable particularly to the citizens of Mysore City and the representatives of the Mysore City. Sir, this news of transfer of the Ayurvedic College from Mysore to Bangalore has affected me and also my Hon'ble friend Sri T. Mariappa in whose constituency this College is situated. I would earnestly appeal to the Health Minister who has been very good to us, to kindly revise the decision and see that Mysore City is not made an "Economic Sahara."

Sri V. M. MASCARENHAS (St. John's Hill).—Sir, I would first like to refer to the observation made by my friend Sri Narayanaswamy. He seems to think that colleges, institutions and things like that, should be given on the basis of constituencies.

Mr. DEPUTY SPEAKER.—Hon'ble Member need not dilate on that point; he may give his own suggestions.

Sri V. M. MASCARENHAS.—Very well, Sir. Attention of Government has repeatedly been drawn and repeated representations have been made about the poor and unsatisfactory conditions of hospitals, particularly, in the City of Bangalore. All along our big hospitals were very bright. But, now unfortunately we find that the number of patients has enormously increased but there is no corresponding increase in the medical or in the accommodation side. Particularly, the nursing staff has been put to very severe strain in these hospitals so much so not only they suffer but the patients are also put to considerable inconvenience. Every year,

(SRI V. M. MASCARENHAS.)

every member, particularly members from Bangalore, have been impressing upon the Government the need for increased accommodation and increased medical facilities. If Government want to run hospitals, let them run them on first-class lines; otherwise, let them say that accommodation in the hospitals is limited and no further patients could be admitted.

But, as long as we are very generous to take in whosoever that comes in, let not the Government forget that in every hospital there should be not only fair accommodation but also adequate medical and nursing staff.

Next, Sir, for the last two years I having been bringing to the notice of the Government that the Tuberculosis Hospital on the Old Madras Road is generally catering to the needs of the poor people of Civil area. I have been requesting the Government to increase the bed strength by at least 20 beds. Last year, the Hon'ble Minister promised me that 20 more beds would be added in this hospital. I must, with great regret, say that till to-day Government have not taken any action in the matter. May I once again request, Sir, that immediate steps be taken to see that in this Hospital the bed strength is increased by at least 20 so that the poor people of Bangalore City may derive the benefit.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಔಷಧಿಗಳು ಮತ್ತು ಆಸ್ಪತ್ರೆಗಳನ್ನು ಒದಗಿಸುವಾಗ ನಮ್ಮ ಮೈಸೂರು ಸರ್ಕಾರದವರು ಗ್ರಾಮಾಂತರದ ಹಿತದೃಷ್ಟಿಯನ್ನು ಹೆಚ್ಚಾಗಿಟ್ಟುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈ ಹೊತ್ತಿನ ದಿವಸ ಸರ್ಕಾರದ ಒಂದು ಗುರಿ ಸಿಟಿಗಳು ಮತ್ತು ಜಿಲ್ಲಾ ಹೆಡ್‌ಕ್ವಾರ್ಟರುಗಳ ಮೇಲಿದೆಯೇ ವಿನಾ ತಾಲ್ಲೂಕು ಹೆಡ್‌ಕ್ವಾರ್ಟರುಗಳ ಕಡೆಗೆ ಅವರ ಗಮನ ಅಷ್ಟಾಗಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಕಾರಣ ಇಷ್ಟೆ. ಜಿಲ್ಲಾ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ತಮ್ಮ ಕೋಟಾ ಕೊಡಬೇಕು. ಎಲ್. ಎಫ್. ಡಿಸ್ಪೆನ್ಸರಿಗಳು ಪ್ರತಿಯೊಂದು ತಾಲ್ಲೂಕುಗಳಲ್ಲೂ ಇವೆ. ಅವಕ್ಕೆ ಇಂಥ ಕೋಟಾ ಬರಬೇಕು, ಇಲ್ಲದಿದ್ದರೆ ಸರ್ಕಾರ ಗ್ರಾಂಟೇ ಕೊಡುವುದಿಲ್ಲ ಎಂಬ ಭಾವನೆಯಿದೆ. ಅನೇಕ ವರ್ಷಗಳಿಂದ ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮುನಿಸಿಪಾಲಿಟಿಯಿಂದ ಕೋಟಾ ಬಂದಿಲ್ಲ, ಅದನ್ನು ಸರ್ಕಾರದವರೇ ಕೊಡುತ್ತಿದ್ದಾರೆ. ಸರ್ಕಾರ ಇದಕ್ಕೆ ಒಂದು ಏರ್ಪಾಡು ಮಾಡಬೇಕು. ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳೇನಾದರೂ ಅವುಗಳ ಕೋಟಾ ಕೊಡದಿದ್ದರೆ ಸರ್ಕಾರದವರು ತಾವಾಗಿಯೇ ಕೊಡಬೇಕಾದ್ದನ್ನು ಛಾರ್ಜ್ ಮಾಡಿ ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ಕಲ್ಪನೆ ಮಾಡಬೇಕು. ಹಾಗಾದರೆ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಔಷಧಿಗಳನ್ನೊದಗಿಸುವುದಕ್ಕೆ ಮತ್ತು ಆಸ್ಪತ್ರೆಗಳನ್ನು ಮೈಂಟೈನ್ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಗಮನಕ್ಕೆ ತರುತ್ತೇನೆ.

ಇನ್ನೊಂದು ವಿಷಯ. ಸಿಟಿಗಳಲ್ಲಿರುವ ಆಸ್ಪತ್ರೆಗಳಿಗೆ ಹೆಚ್ಚು ಸೌಲಭ್ಯಗಳಿವೆ, ಸಲಕರಣೆಗಳಿವೆ. ಈಗ ಎಕ್ಸ್‌ರೇ ತೆಗೆಯಬೇಕಾದರೆ ಮತ್ತು ಕೆಲವು ಟೆಸ್ಟ್ ಮಾಡಬೇಕಾದರೆ ರೋಗಿಗಳು ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೆ ಬರಬೇಕು. ಕಾಲು ಮುರಿದರೆ ತಕ್ಷಣ ಅಲ್ಲಿಗೆ ಬರಬೇಕು, ಬರುವುದಕ್ಕೆ ಅವಕಾಶವಾದರೂ ಆಗಬಹುದು ಅಥವಾ ದಾರಿಯಲ್ಲೇ ಸಾಯಬಹುದು. 40 ಮೈಲಿಗಳಿಂದ ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೆ ಬರುವುದಕ್ಕೆ ಬದಲಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೇ ಎಕ್ಸ್‌ರೇ ಮುಂತಾದುವುಗಳಿಗೆ ವ್ಯವಸ್ಥೆ ಮಾಡಬೇಕು. ಇಂಥ ಸಂದರ್ಭದಲ್ಲಿ ಸರ್ಕಾರದವರೇ ಮುನಿಸಿಪಾಲಿಟಿ ಕೋಟಾ ಅಪೇಕ್ಷೆ ಮಾಡದೆ ತಾವೇ ಒಂದು ಗ್ರಾಂಟು ಕೊಟ್ಟು ಏರ್ಪಾಡೇನಾಗಬೇಕೋ ಅದನ್ನು ಮಾಡಬೇಕಾದದ್ದು ಬಹಳ ಆವಶ್ಯಕವೆಂದು ಒತ್ತಾಯಮಾಡುತ್ತೇನೆ.

ಈ ವಿಚಾರದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ವಾರ್ಡುಗಳಲ್ಲಿ ಹೆಂಗಸರು ಮತ್ತು ಗಂಡಸರಿಗೆ ಸ್ಥಳ ಒದಗಿಸಿರುವುದು ತಾಲ್ಲೂಕುಗಳಲ್ಲಿರುವ ಸಬ್ ಜೈಲಿನೋಪಾದಿಯಲ್ಲಿದೆ. ಚಾಮರಾಜನಗರಕ್ಕೆ ಸುಮಾರು ಒಂದು ತಿಂಗಳ ಹಿಂದೆ ಮೆಡಿಕಲ್ ಆಫೀಸರು ಬಂದು ಆಸ್ಪತ್ರೆಯನ್ನು ಅಜಮಾಯಿಷಿ ಮಾಡಿದರು. ಅದು ನರಕವಿದ್ದ ಹಾಗಿತ್ತು, ಸುಣ್ಣ ಸಹ ಬಳಿದಿರಲಿಲ್ಲ, ಮಲಗಿಕೊಳ್ಳುವುದಕ್ಕೆ ಅಲ್ಲಿ ಹಾಸಿಗೆಯಾಗಲಿ ಅಥವಾ ಮಂಚವಾಗಲಿ ಇರಲಿಲ್ಲ, ರೋಗಿಗಳಿಗೆ ನೊಣ ಮುತ್ತುತ್ತಿರುವುದನ್ನು ನೋಡಲು ವ್ಯಥೆಯಾಗುತ್ತಿತ್ತು. ಈ ರೀತಿಯಿರುವುದರಿಂದ ಅಲ್ಲಿರುವ ರೋಗಿಗಳು ಅನುಭವಿಸುವ ರೋಗಗಳು ಹರಡುತ್ತವೆಯೋ ಏನೋ ಎಂಬ ಭಯವುಂಟಾಗುತ್ತಿದೆ. ಅಲ್ಲಿ ಹಾಸಿಗೆ ವಗೈರೆ ಏಕಿಲ್ಲವೆಂದು ಕೇಳಿದರೆ ಮುನಿಸಿಪಾಲಿಟಿ ಕೋಟಾ ಬರುತ್ತಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ತಮ್ಮ ಕೋಟಾ ಕೊಡಬೇಕಾದದ್ದು ಮುನಿಸಿಪಾಲಿಟಿಯ ಆಬ್ಲಿಗೇಟರಿ ಡ್ಯೂಟಿ ಎಂದು ಮಾಡಿ ಸಕಾಲದಲ್ಲಿ ಕೋಟಾ ಒದಗಿಸುವಂತೆ ಮಾಡಬೇಕು. ಈಗಿರುವ ಪರಿಸ್ಥಿತಿಗೆ ಅವಕಾಶವಾಗಬಾರದು, ಆದ್ದರಿಂದ ಇಂಥ ಆಸ್ಪತ್ರೆಗಳ ಸೂಪರ್‌ವಿಷನ್ ಬಹಳ ಚೆನ್ನಾಗಿ ನಡೆದು ಅಲ್ಲಿನ ನ್ಯೂನತೆಗಳು ಕೂಡಲೆ ಪರಿಹಾರವಾಗಲು ತಕ್ಕ ಕ್ರಮ ಕೈಕೊಳ್ಳಬೇಕು. ಮುನಿಸಿಪಾಲಿಟಿ ಸರಬರಾಯಿ ಸರಿಯಾಗಿ ಬಾರದಿದ್ದರೂ "found correct and kept clean" ಎಂದು ಬರೆದರೆ ಪ್ರಯೋಜನವಿಲ್ಲ. ನಿಜವಾಗಿಯೂ ಕ್ಲೀನ್ ಆಗಿರಬೇಕು. ಯಾವರೀತಿ ವ್ಯವಸ್ಥೆಯಿದೆ, ಔಷಧಿ ಸರಿಯಾಗಿ ಸರಬರಾಯಾಗುತ್ತದೆಯೆ ಎಂಬುದನ್ನು ನೋಡಬೇಕು. ಸಾಧಾರಣವಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಉಪ್ಪು ಸಹ ಸಿಕ್ಕುತ್ತಿಲ್ಲ. ಇದನ್ನು ತಕ್ಷಣ ಒದಗಿಸಿ ಸಿಕ್ಕುವುದಕ್ಕೆ ಅವಕಾಶ ಕೊಡಬೇಕು.

ಇನ್ನೊಂದು ಡಾ॥ ಮೋದಿಯವರ ವಿಷಯವನ್ನು ಸರ್ಕಾರ ಈ ಸಾರಿ ಕೈಬಿಟ್ಟಿರುವುದು ವಿಷಾದಕರ, ಅವರು ಕಳೆದ ವರ್ಷ ದೇಶಾದ್ಯಂತ ಸಂಚಾರ ಮಾಡಿ ಕಣ್ಣಿಗೆ ಔಷಧಿ ಹಾಕಿ ಆಪರೇಷನ್ ಮಾಡುವುದಕ್ಕೆ ಅವ

ಕಾಶವಿತ್ತು. ಈ ವರ್ಷ ಆ ರೀತಿ ಮುಂದಾದರೂ ಅವಕಾಶ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಮೊಬೈಲ್ ಡಿಸ್ಪೆನ್ಸರಿ ವ್ಯಾನ್ ಇದೆ ಮತ್ತು ಒಂದು ಆಂಬುಲೆನ್ಸ್ ವ್ಯಾನ್ ಇದೆ. ಎರಡು ವರ್ಷಗಳಲ್ಲಿ ಸುಮಾರು ಎರಡು ಮೂರು ಸಲಕ್ಕಿಂತಲೂ ಜಾಸ್ತಿಯಾಗಿ ಅವು ಕೆಟ್ಟು ಹೋಗಿವೆ. ಹೀಗೆ ಕೆಟ್ಟು ಹೋದ ಕಾಲದಲ್ಲಿ ಹಳ್ಳಿಗಳಲ್ಲಿ ರೋಗಿಗಳು ಖಾಯಿಲೆಗೆ ಔಷಧಿ ಪಡೆಯಲು ವ್ಯಾನ್ ಬರುತ್ತದೆಂದು ಕಾದು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ವ್ಯಾನು ಬಾರದೆ ನಿರಾಶರಾಗಿ ಮನೆಗೆ ಹೋಗಿದ್ದಾರೆ. ಹೀಗೆ ಅನೇಕ ಗ್ರಾಮಗಳಲ್ಲಿ ಕಾದು ಕಾದು ಸಾಕಾಗಿದ್ದಾರೆ. ಈ ವ್ಯಾನ್ ಅನೇಕ ದಿವಸ ಬಾರದೆ ವ್ಯಾನ್ ಕೆಟ್ಟು ಹೋಗಿದೆಯೆಂಬ ವರ್ತಮಾನ ತಿಳಿಯದೆ ಅನೇಕರು ಬಹಳ ತೊಂದರೆ ಪಟ್ಟಿದ್ದಾರೆ. ಆದ್ದರಿಂದ ಈ ವ್ಯಾನ್ ಕೆಟ್ಟು ಹೋಗಿದ್ದ ಪಕ್ಷದಲ್ಲಿ ಅದನ್ನು ಗ್ರಾಮಾಂತರಗಳಿಗೆ ತಿಳಿಸಿ ಇಷ್ಟು ದಿವಸಗಳ ಕಾಲ ವ್ಯಾನ್ ಬರುವುದಿಲ್ಲವೆಂದು ಹೇಳಬೇಕು. ಹಾಗೆ ಮಾಡಿದರೆ ರೋಗಿಗಳನ್ನು ಬೇರೆ ಕಡೆಗಾದರೂ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಈ ವ್ಯಾನುಗಳು ಆಗಾಗ್ಗೆ ಕೆಟ್ಟುಹೋಗದಿರುವಂತೆ ನೋಡಿಕೊಳ್ಳಬೇಕು. ಕೆಟ್ಟು ಹೋದ ವ್ಯಾನುಗಳನ್ನು ಬೇಗ ರಿಪೇರಿ ಮಾಡುವುದಕ್ಕೆ ಗ್ರಾಮದ ಅಧಿಕಾರಿಗಳಿಗಾದರೂ ಅಧಿಕಾರ ಕೊಟ್ಟು ಸ್ಥಳದಲ್ಲೇ ಯಾವುದಾದರೂ ಕಾರ್ಖಾನೆಗಳಿದ್ದರೆ ಅಲ್ಲಿ ಸಣ್ಣ ಪುಟ್ಟ ರಿಪೇರಿಗಳನ್ನು ಮಾಡಿಸುವುದಕ್ಕಾದರೆ ಅದನ್ನು ಮಾಡಿಸಬೇಕು. ದೊಡ್ಡ ರಿಪೇರಿಯಾಗಬೇಕಾದರೂ ಸಹ ಬೇಗ ರಿಪೇರಿ ಮಾಡುವುದಕ್ಕೆ ಸರ್ಕಾರ ಹಣ ಮಂಜೂರು ಮಾಡಿ ಜಾಗ್ರತೆ ಈ ವ್ಯಾನು ಸರಿಯಾಗಿ ಕೆಲಸಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಈಗ ಒಂದು ಡಿಸ್ಟ್ರಿಕ್ಟಿಗೆಲ್ಲಾ ಒಂದೇ ಮೊಬೈಲ್ ಡಿಸ್ಪೆನ್ಸರಿ ವ್ಯಾನ್ ಇರುವುದು. ಅದು ಸಾಕಾಗುವುದಿಲ್ಲ. ಈ ವಿಚಾರವನ್ನು ಕೂಡ ಸರ್ಕಾರ ಆಲೋಚಿಸಬೇಕಾದದ್ದು ಆದ್ಯಕರ್ತವ್ಯವೆಂದು ಹೇಳುತ್ತೇನೆ.

ಈಗ ಇರತಕ್ಕ ಒಂದು ವ್ಯಾನ್ ನೂರಾರು ಮೈಲಿಗಳನ್ನು ತಿರುಗಿಕೊಂಡು ಬಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಅಥವಾ ಹೋಬಳಿ ಗ್ರಾಮಗಳಲ್ಲೋ ನಿಲ್ಲಬೇಕಾಗಿರುತ್ತದೆ. ಗ್ರಾಮಗಳಲ್ಲಿ ನಿಲ್ಲಲು ಅವಕಾಶವಿಲ್ಲ. ಚಿಕ್ಕಮಗಳೂರು ಜಿಲ್ಲೆಗೆ ಒದಗಿಸಿರುವ ಒಂದು ವ್ಯಾನ್ ಖಂಡಿತ ಸಾಲದು. ಆಜಿಲ್ಲೆಗೆ ತಾವು ಇನ್ನೂ ಒಂದು ಮೊಬೈಲ್ ವ್ಯಾನನ್ನೂ ಮತ್ತು ಇನ್ನೊಂದು ಆಂಬುಲೆನ್ಸ್ ವ್ಯಾನನ್ನೂ ಸಹ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಚಿಕ್ಕಮಗಳೂರಿನಲ್ಲಿ ಶ್ರೀ ಮಲ್ಲೇಗೌಡ ಜನರಲ್ ಆಸ್ಪತ್ರೆ ಎಂದು ಒಂದು ಆಸ್ಪತ್ರೆಯಿದೆ. ಅದಕ್ಕೆ ಮಾನ್ಯ ಆರೋಗ್ಯಮಂತ್ರಿಗಳೂ ಸಹ ಭೇಟಿ ಕೊಟ್ಟಿದ್ದಾರೆ. ಹಾಗೆ ಇವರು ಭೇಟಿಕೊಟ್ಟಿದ್ದಾಗ ಅಲ್ಲಿನ ಜನರೂ, ಪುರಪ್ರಮುಖರುಗಳೂ ಆ ಆಸ್ಪತ್ರೆಯ ಅನೇಕ ಕುಂದುಕೊರತೆಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಆ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಾಕಷ್ಟು ಮಂಚ ಮತ್ತು ಹಾಸಿಗೆಗಳಿಲ್ಲ. ಈಗ ಅವರು ನೆಲದಮೇಲೇ ಮಲಗುತ್ತಿದ್ದಾರೆ. ಈರೀತಿ ಮಲೆನಾಡಿನಲ್ಲಿ ರೋಗಿಗಳು ನೆಲದಮೇಲೆ ಮಲಗಿದರೆ ರೋಗ ಇನ್ನೂ ಪ್ರಬಲವಾಗುತ್ತದೆ; ಹೀಗೆ ಮಾಡುವುದು ತುಂಬಾ ಅನಾರೋಗ್ಯಕರವಾದದ್ದು. ಆದಕಾರಣ ಸರ್ಕಾರದವರು ಕೂಡಲೆ ಹೆಚ್ಚು ಹಾಸಿಗೆಗಳನ್ನೂ ಮತ್ತು ಹೆಚ್ಚು ಮಂಚಗಳನ್ನೂ ಒದಗಿಸಲು ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟೇ ಅಲ್ಲದೆ ಇತ್ತೀಚೆಗೆ ಆ ಆಸ್ಪತ್ರೆಗೆ ಔಷಧಿಗಳು ಕೂಡ ಕಡಮೆ ಮಟ್ಟದಲ್ಲಿ ಸರಬರಾಯಿ ಆಗುತ್ತಿವೆಯೆಂದು ಕೇಳುತ್ತಿದ್ದೇನೆ. ಆದುದರಿಂದ ತಾವು ಅಲ್ಲಿಗೆ ಇನ್ನೂ ಹೆಚ್ಚಿನ ಔಷಧಿಗಳನ್ನೂ ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅಲ್ಲಿರತಕ್ಕ ಹೆರಿಗೆ ಆಸ್ಪತ್ರೆಗೂ ಕೂಡ ಸಾಕಷ್ಟು ಹಾಸಿಗೆಗಳೂ ಮತ್ತು ಮಂಚಗಳೂ ಇಲ್ಲ ಅವುಗಳನ್ನು ಮಂಜೂರುಮಾಡಬೇಕೆಂಬುದಾಗಿ ಅಲ್ಲಿನ ಡಾಕ್ಟರಿಂದ ಶಿಫಾರ್ಸು ಬಂದಿರುತ್ತದೆಯೆಂದು ಕೇಳುತ್ತೇನೆ. ಅದನ್ನು ತಾವು ಬೇಗ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನಲ್ಲಿ ಅನೇಕ ಕಡೆ ಡಾಕ್ಟರಿದ್ದರೆ ಔಷಧಿ ಇರುವುದಿಲ್ಲ, ಔಷಧಿಯಿದ್ದರೆ ಡಾಕ್ಟರಿರುವುದಿಲ್ಲ ಇದನ್ನು ಸರಿಪಡಿಸಬೇಕು.

* ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ ತಾಲ್ಲೂಕು).—ಸ್ವಾಮಿ, ಈ ದಿವಸ ಸರ್ಕಾರದವರು 19ನೆಯ ಡಿಮ್ಯಾಂಡ್ ಮನವಿಯ ಬಗ್ಗೆ 1,21,76,000 ರೂಪಾಯಿಗಳನ್ನು ಮತ್ತು ಡಿಮ್ಯಾಂಡ್ ನಂಬರ್ 20ರ ಮನವಿಯ ಬಗ್ಗೆ 52,73,000 ರೂಪಾಯಿಗಳನ್ನು ಖರ್ಚುಮಾಡಲು ಈ ಸಭೆಯ ಮಂಜೂರಾತಿಯನ್ನು ಕೇಳಿಕೊಂಡಿದ್ದಾರೆ. ಆದರೆ ನಾನು ಈ ಎರಡು ಡಿಮ್ಯಾಂಡುಗಳ ಬಗ್ಗೆಯೂ ಹೆಚ್ಚಿನ ಸಂಖ್ಯೆಯಲ್ಲಿ ಖೋತಾ ಸೂಚನೆಗಳನ್ನು ಕಳುಹಿಸಿರುತ್ತೇನೆ.

ಉಪಾಧ್ಯಕ್ಷರು.—ಆದಾಗ್ಯೂ ತಮಗೆ ಮಾತನಾಡಲು ಅವಕಾಶ ಸಿಕ್ಕುವುದು ಮಾತ್ರ ಒಂದೇ ಸಲ. You need not read the cut motions.

Sri A. V. NARASIMHA REDDY.—My difficulty is, if I don't read them, I will not be able to cover all these matters in my speech.

Mr. DEPUTY SPEAKER.—You know what subjects you have tabled by way of cut-motions. You may cover all those points in your speech.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ದಿವಸ ವಿಕ್ಟೋರಿಯ ಆಸ್ಪತ್ರೆಯಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಡಿಗ್ರಿ ಪ್ರಶಸ್ತಿ ಪಡೆದು, ಪದವೀಧರರಾದಂಥವರು ಆರು ತಿಂಗಳಕಾಲ ಹೋಂ ಸರ್ಜನ್ ಆಗಿ ಕೆಲಸಮಾಡಬೇಕೆಂಬ ನಿಯಮ ಇದೆ. ಆದರೆ ಇದು ಎಷ್ಟೋ ದೊಡ್ಡ ಕೋರ್ಸ್ ಮತ್ತು ಇದಕ್ಕಾಗಿ ಐದು ವರ್ಷಕಾಲ ಆ ವಿದ್ಯಾರ್ಥಿಗಳ ತಂದೆತಾಯಿಗಳು ಎಷ್ಟು ಹಣವನ್ನು ಖರ್ಚುಮಾಡಿಕೊಂಡಿರುತ್ತಾರೆ ಎಂಬುದನ್ನು ನಾನು ಹೆಚ್ಚು ವರ್ಣಿಸಬೇಕಾದ್ದಿಲ್ಲ. ಹೀಗಿರುವಾಗ ಇಂಥ ಜನರಿಂದ ಸರ್ಕಾರದವರು ಅವರಿಗೆ ಯಾವ ಒಂದು ಪ್ರತಿಫಲವನ್ನೂ ಕೊಡದಹಾಗೆ ಅವರಿಂದ ಯಾವ ಸೇವೆಯನ್ನೂ ಇವರು ನಿರೀಕ್ಷಿಸಬಾರದು. ಆದರೆ ಈ ದಿವಸ ಹಾಗೆ ಹೋಂ ಸರ್ಜನ್ ಆಗಿ ಕೆಲಸ ಮಾಡತಕ್ಕಂಥ ಕೆಲವು ವಿದ್ಯಾರ್ಥಿಗಳಿಗೆ 70-75 ರೂಪಾಯಿಗಳನ್ನು ಒಂದು ಸ್ಟೈಫಂಡ್ಸ್ ರೀತಿ ಕೊಡುತ್ತಿದ್ದಾರೆ. ಈ ದಿವಸ ಎಷ್ಟುಮಂದಿ ಹುಡುಗರು ಆರೀತಿ ಪದವೀಧರರಾಗಿ ಈಚೆಗೆ ಬರು

(ಶ್ರೀ ಎ. ವಿ. ನರಸಿಂಹರೆಡ್ಡಿ)

ತ್ತಾರೋ ಮತ್ತು ಎಷ್ಟು ಜನರನ್ನು ಸರ್ಕಾರದವರು ಹಾಗೆ ಹೋಂ ಸರ್ಜನ್‌ಗಳನ್ನಾಗಿ ಆರಿಸಿಕೊಳ್ಳು ತ್ತಾರೋ ಅಂಥ ಪ್ರತಿಯೊಬ್ಬರಿಗೂ ಕೂಡ ಸರ್ಕಾರ ದವರು ಈ ಸ್ಟೈಪೆಂಡ್ಸ್‌ನ್ನು ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಈ ದಿವಸ ಸರಬರಾಯಿ ಆಗುತ್ತಿರುವ ಹಾಲು ಮತ್ತು ಅಲ್ಲಿ ರೋಗಿಗಳಿಗೆ ಕೊಡಲಾಗುತ್ತಿರುವ ಆಹಾರ ಇವು ಉತ್ತಮ ದರ್ಜೆಯಲ್ಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ನಾನು ಈ ದಿವಸ ಆ ಆಸ್ಪತ್ರೆಯ ಪಕ್ಕದಲ್ಲೇ ವಾಸ ಮಾಡುತ್ತಿದ್ದೇನೆ. ಈ ವಿಚಾರವನ್ನು ಅಲ್ಲಿ ಅನೇಕ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಈ ಹೊತ್ತು ಆ ಆಸ್ಪತ್ರೆಗೆ ಸರಬರಾಯಿ ಆಗುತ್ತಿರುವ ಹಾಲು ಇತ್ಯಾದಿ ಸಾಮಾನುಗಳ ಬಗ್ಗೆ ಆಸ್ಪತ್ರೆಯವರು ಯಾವ ಒಂದು ಟೆಂಡರ್ ಇತ್ಯಾದಿಗಳನ್ನು ಕರೆಯದೆ ಹಾಗೇ ಯಾರಿಗೋ ಆ ಕೆಲಸವನ್ನೊಪ್ಪಿಸಿರುತ್ತಾರೆಂದು ಕೇಳುತ್ತಿದ್ದೇನೆ. ಅಂತೂ ಹೀಗಾಗಿ ಈ ದಿವಸ ಆ ಆಸ್ಪತ್ರೆಗೆ ಒಳ್ಳೆಯ ಹಾಲು ಸರಬರಾಯಿ ಆಗುತ್ತಿಲ್ಲ ವೆಂದು ತಿಳಿದುಬಂದಿದೆ. ಇದನ್ನು ಸರ್ಕಾರದವರು ಕೂಡಲೇ ಸರಿಪಡಿಸಬೇಕೆಂದು ಕೋರುತ್ತೇನೆ.

ಇನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ವಸತಿ ಸೌಕರ್ಯ ಸಾಲದೆಂದು ನಾವು ಈ ಹಿಂದೆ ಮೈಸೂರು ಅಧಿವೇಶನಕ್ಕೆ ಹೋಗಿದ್ದಂಥ ಕಾಲದಲ್ಲಿ ಆ ಸ್ಥಳಕ್ಕೆ ಸಂಬಂಧಪಟ್ಟ ಮಾನ್ಯಮಂತ್ರಿಗಳನ್ನೇ ಕರೆದುಕೊಂಡು ಹೋಗಿ ತೋರಿಸಿ ಎಲ್ಲ ವಿಚಾರಗಳನ್ನೂ ಅರಿಕೆಮಾಡಿ ಕೊಂಡಿದ್ದೆವು. ಆ ಮೆಡಿಕಲ್ ಕಾಲೇಜನ್ನು ಅಲ್ಲಿ ಎಷ್ಟೋ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಅಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ವಸತಿ ಸೌಕರ್ಯಗಳಿಲ್ಲದಿದ್ದರೆ ಅವರು ತಮ್ಮ ವಿದ್ಯಾಭ್ಯಾಸವನ್ನು ನಿರಾತಂಕವಾಗಿ ನಡೆಸಲು ಹೇಗೆ ಸಾಧ್ಯವಾಗುತ್ತದೆ? ಇಲ್ಲಿಯತನಕ ಸರ್ಕಾರ ದವರ ಆಲೋಚನೆಯಲ್ಲಿ ಮೈಸೂರಿನಲ್ಲಿರತಕ್ಕ ಮೆಡಿಕಲ್ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸ ಬೇಕೆಂಬುದಾಗಿತ್ತು. ಆದರೆ ಈಗ ಆ ಅಭಿಪ್ರಾಯ ವನ್ನು ಸರ್ಕಾರದವರು ಬದಲಾಯಿಸಿ ಆ ಕಾಲೇಜನ್ನು ಅಲ್ಲೇ ಉಳಿಸಲು ಒಪ್ಪಿಕೊಂಡಿದ್ದಾರೆಂದು ತಿಳಿದುಬರು ತ್ತಿದೆ. ಈ ಕಾರಣದಿಂದ ಸರ್ಕಾರದವರು ಮುಂದಿನ ಸಾಲಿನಲ್ಲಿ ಆದರೂ ಆ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಕರ್ಯವನ್ನೂ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ದಿವಸ ಅಲ್ಲಿರತಕ್ಕ ನಾನ್ ವೆಜಿ ಟೇರಿಯನ್ ಹಾಸ್ಟಲಿನ ಪಕ್ಕದಲ್ಲೇ ಬೇಕಾದಷ್ಟು ಜಾಗ ಇದೆ. ಆದರೂ ಅಲ್ಲಿ ಈ ಕಟ್ಟಡದ ವ್ಯವಸ್ಥೆ ಮಾಡದೆ ಆ ಸ್ಥಳವನ್ನು ರೋಟರಿ ಕ್ಲಬ್ಬಿನವರಿಗೆ ಬಿಟ್ಟುಕೊಟ್ಟಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಾಲದಲ್ಲಿ ಎಷ್ಟರಮಟ್ಟಿಗೆ ತೊಂದರೆಯಾಗು ತ್ತಿದೆ ಎಂಬ ಅಂಶವನ್ನು ನಾವು ಆ ಮೈಸೂರಿನಲ್ಲಿ ಅಧಿ ವೇಶನ ನಡೆಯುತ್ತಿದ್ದ ಕಾಲದಲ್ಲಿ ನಮ್ಮನ್ನು ಅಲ್ಲಿಗೆ ಆ ವಿದ್ಯಾರ್ಥಿಗಳು ಕರೆದುಕೊಂಡುಹೋಗಿ ತೋರಿಸಿದ್ದರು, ಆಗ ಆ ವಿಚಾರಗಳೆನ್ನೆಲ್ಲಾ ನಾವು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ಅಲ್ಲೇ ತಂದಿ ದ್ದೆವು. ಆದರೆ ಆ ಬಗ್ಗೆ ಸರ್ಕಾರದವರು ಇನ್ನೂ ನಿಗಾ ಕೊಟ್ಟಿರುವುದಿಲ್ಲ. ಈಗಲಾದರೂ ಸರ್ಕಾರದವರು ಆ ವಿದ್ಯಾರ್ಥಿಗಳಿಗೆ ಏನೇನು ಸೌಕರ್ಯಗಳು ಬೇಕೋ ಅವು ಗಳನ್ನೂ ಕೂಡಲೆ ಒದಗಿಸಲು ಸೂಕ್ತ ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ಬೆಂಗಳೂರು ರೂರಲ್ ತಾಲ್ಲೂಕಿನಲ್ಲಿ ಕೆಲವು L.F. ಡಿಸ್ಪೆನ್ಸರಿಗಳಿರುತ್ತವೆ. ಇವುಗಳಿಗೆ ಶಿಬ್ಬಂದಿಯಾಗಲೀ ಅಥವಾ ಔಷಧಿಗಳ ಸರಬರಾಯಿ ಆಗಲೀ ಸರಿಯಾಗಿ ಆಗುತ್ತಿಲ್ಲ. ಅಲ್ಲಿಂದ ಒಬ್ಬ ಡಾಕ್ಟರ್ ವರ್ಗವಾದರೆ ಮತ್ತೊಬ್ಬ ಡಾಕ್ಟರು ಎಷ್ಟೋ ದಿನಗಳಾದರೂ ಬರುವುದಿಲ್ಲ. ಆಸ್ಪತ್ರೆಗಳನ್ನೇ ಮುಚ್ಚಿ ಬಿಟ್ಟಿರುತ್ತಾರೆ. ಇಂಥಾದ್ದನ್ನೆಲ್ಲಾ ಸರಿಪಡಿಸಬೇಕೆಂದು ಸೂಚಿಸುತ್ತೇನೆ.

ಇನ್ನು ನಾನು ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಚಾರವಾಗಿ ಅನೇಕ ವಿಷಯಗಳನ್ನು ತಿಳಿಸಬೇಕಾ ದ್ದಿತ್ತು. ಈ ದಿವಸ ಮೈಸೂರು-ಬೆಂಗಳೂರು, ಮತ್ತು ಸಂಸ್ಥಾನದ ಇತರ ಕಡೆಗಳಲ್ಲಿ ದೊಡ್ಡದೊಡ್ಡ ನಗರಗಳಲ್ಲಿ ಬೀದಿಗಳಲ್ಲೇ ಅಂಟುರೋಗಿಗಳು ಬಿದ್ದಿರುತ್ತಾರೆ. ಅವರನ್ನು ಹಾಗೆ ರಾಜಬೀದಿಗಳಲ್ಲಿ ಬಿದ್ದಿರಲು ಅವಕಾಶ ಕೊಡಬಾರದು. ಇದನ್ನು ಕೂಡಲೆ ತಪ್ಪಿಸಬೇಕೆಂದು ಹೇಳುತ್ತೇನೆ.

ಈಗ ಬೆಂಗಳೂರಿನ ಸುತ್ತಮುತ್ತಲೂ 10 ಮೈಲಿ ಫಾಸಲೆಯೊಳಗೆ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಇದಕ್ಕೆ ಮೂಲ ಕಾರಣ ಕಾರ್ಪೋರೇಷನ್ ಪ್ರದೇಶ ದಲ್ಲಿ ಹೊರಡತಕ್ಕ ಗಲೀಜು ನೀರನ್ನು ಊರು ಹೊರಗೆ ದೂರವಾಗಿ ಸಾಗಿಸುತ್ತಿರುವುದೇ ಆಗಿದೆ. ಈ ಬಗ್ಗೆ ಕಾರ್ಪೊರೇಷನವರಿಗೆ ಸೂಚನೆಕೊಟ್ಟರೂ ಅವರು ಡಿ.ಡಿ.ಟಿ. ಎರಚುವ ಪ್ರಯತ್ನ ಕೈಗೊಂಡಿಲ್ಲ. ಈ ಬಗ್ಗೆ ಸರ್ಕಾರದವರಾದರೂ ಈವರೆಗೆ ಏನೂ ಆಲೋಚನೆಮಾಡಿಲ್ಲ. ಕಾರ್ಪೊರೇಷನವರು ಈ ವಿಚಾರದಲ್ಲಿ ಜನಾರೋಗ್ಯ ಇಲಾಖೆಗೆ ತಿಳಿಸಿ ಎಂದು ಹೇಳುತ್ತಿದ್ದಾರೆ. ಈ ವಿಚಾರವನ್ನು ತಾವು ಕೂಡಲೇ ಸರಿಪಡಿಸಿ ಬೆಂಗಳೂರು ಸುತ್ತ 10 ಮೈಲಿ ಪ್ರದೇಶ ದೊಳಗಿರತಕ್ಕ ಎಲ್ಲಾ ಗ್ರಾಮಗಳಿಗೂ ಡಿ. ಡಿ. ಟಿ. ಸ್ಪ್ರೇ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

1-30 P.M.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಈ ಆರೋಗ್ಯ ಇಲಾಖೆಯ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ನಾನು ನಮ್ಮ ಮಲೆನಾಡಿನ ವಿಷಯದಲ್ಲಿ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಆಶಿಸುತ್ತೇನೆ. ಸ್ವಾಮಿ, 1947ರಲ್ಲಿ ಮಾನ್ಯ ಸಭೆಯ ಸದಸ್ಯರಾದ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗ ಮೂಡಿಗೆರೆ ತಾಲ್ಲೂಕು ಬಾಳೆಹೊಳೆ ಗ್ರಾಮದಲ್ಲಿ ಅಲ್ಲಿನ ಪ್ಲಾಂಟರ್ ಮಹನೀಯರೊಬ್ಬರು ಆಸ್ಪತ್ರೆ ಕಟ್ಟಡ ಮತ್ತು ಡಾಕ್ಟರು ವಾಸಮಾಡುವುದಕ್ಕೆ ಬಿಲ್ಡಿಂಗು ಕೊಟ್ಟರು. ಇನ್ನೇನು ಆಸ್ಪತ್ರೆ ಪ್ರಾರಂಭವಾಗುತ್ತದೆ ಎಂದು ಎಲ್ಲರೂ ತಿಳಿದುಕೊಂಡಿದ್ದರು ಆದರೆ ಆಮೇಲೆ ನೋಡುವಾಗ ಅಲ್ಲಿ ಹೆಲ್ತ್ ಯೂನಿಟ್ ಇರುವುದರಿಂದ ಆಸ್ಪತ್ರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು, ಇನ್ನೂ ಆಸ್ಪತ್ರೆ ಕೊಟ್ಟಿಲ್ಲ. ಅದು ಮಲೆನಾಡಿನ ಮೂಲೆ ಯಲ್ಲಿದೆ. ಹೆಂಗಸರಿಗೆ ಹೆರಿಗೆ ಕಾಲದಲ್ಲಿ ವೈದ್ಯಕೀಯ ಸಹಾಯ ದೊರಕದೆ ಅವರ ಕಷ್ಟ ಹೇಳತೀರದು. ಅದೇ ರೀತಿ ಹುಡುಗರು ಮಕ್ಕಳಿಗೂ ಕೂಡ ಖಾಯಿಲೆ ಬಂದು ಔಷಧಿಗಳು ಸಕಾಲಕ್ಕೆ ಸಿಕ್ಕದೆ ಬಹಳ ತೊಂದರೆ ಯಾಗಿದೆ ಎಂದು ಸರ್ಕಾರದವರ ಗಮನಕ್ಕೆ ಎಷ್ಟೋ ಸಾರಿ ತಂದರೂಕೂಡ ಪ್ರಯೋಜನವಾಗಿಲ್ಲ. ಈಗ ಲಾದರೂ ಸರ್ಕಾರದವರು ಈ ಆಸ್ಪತ್ರೆ ವಿಷಯದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ನಾನು ಹೇಳು ತ್ತೇನೆ.

ಶ್ರೀ ಚಿಕ್ಕನಂಜಪ್ಪನವರು ಮಲ್ಲೇನ ಹಳ್ಳಿಯಲ್ಲಿ ಒಂದು ಆಸ್ಪತ್ರೆ ಒದಗಿಸಬೇಕೆಂದು 30 ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಟ್ಟು 7-8 ವರ್ಷಗಳಾದವು ಅಲ್ಲಿ ಇನ್ನೂ ಆಸ್ಪತ್ರೆ ಕಟ್ಟಡ ಆಗಲಿಲ್ಲ. 20-25 ಮೈಲಿ ದೂರದವರೆಗೂ ಮಲ್ಲೇನಹಳ್ಳಿ ಯವರು ಆಸ್ಪತ್ರೆ ಔಷಧಿಗಳಿಗಾಗಿ ಅಲೆಯಬೇಕಾಗಿದೆ. ಅದನ್ನು ಜಾಗ್ರತೆ ಮಾಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಚಿಕ್ಕಮಗಳೂರು ಜನರಲ್ ಆಸ್ಪತ್ರೆಯ ವಿಷಯದಲ್ಲಿ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಾದರೆ ಅಲ್ಲಿ ಒಂದು ಮೊಬೈಲ್ ವ್ಯಾನು ಇದೆ. ಅದರ ಒಂದು ಚಕ್ರ ಮುರಿದುಹೋಗಿ ಸುಮಾರು ಎರಡು ವರ್ಷವಾಯಿತು. ಅದಕ್ಕೆ ಬೇಕಾದ ಸಾಮಾನು ತೆಗೆದುಕೊಳ್ಳಲು ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಗೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಈ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಎಷ್ಟು ಸಾರಿ ಬರೆದರೂ ಮಂಜೂರಾಗಿ ಬರುವುದಿಲ್ಲ. ಹೀಗಾಗಿ ಆ ಮೊಬೈಲ್ ವ್ಯಾನಿನಿಂದ ಜನಗಳಿಗೆ ಎಷ್ಟು ಸೌಲಭ್ಯ ಒದಗಬೇಕಾಗಿತ್ತೋ ಅಷ್ಟು ಒದಗದೆ ಬಹಳ ಕಷ್ಟವಾಗಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಜಾಗ್ರತೆ ಅದರ ಸೌಲಭ್ಯವನ್ನೂ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಅಲ್ಲಿನ ಜನರಲ್ ಆಸ್ಪತ್ರೆಗೆ ಅನೇಕ ಜನ ಗರ್ಭಿಣಿಯರು ಬರುತ್ತಾರೆ, ಮತ್ತು ರೋಗಿಗಳು ತುಂಬ ಜನ ಇದ್ದಾರೆ, ಅಷ್ಟು ಜನರನ್ನು ನೋಡಿಕೊಳ್ಳುವುದಕ್ಕೆ ಮೂರು ಜನ ಡಾಕ್ಟರುಗಳು ಮಾತ್ರ ಇದ್ದಾರೆ. ಅಷ್ಟು ಸಾಲದು. ಇನ್ನೂ ಹೆಚ್ಚು ಜನರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಳೆಗಾಲದಲ್ಲಿ ಬಹಳ ಶೀತ ಇರುವುದರಿಂದ ಮಲಗಿಕೊಳ್ಳುವುದಕ್ಕೆ ಮಂಚ ಹಾಸಿಗೆ ಇಲ್ಲದೆ ಬಾಣಂತಿಯರಿಗೆ ಮತ್ತು ಖಾಯಿಲೆಯವರಿಗೆ ಬಹಳ ತೊಂದರೆಯಾಗಿದೆ ಅದ್ದರಿಂದ ಇನ್ನೂ ಹೆಚ್ಚಿನ ಹಾಸಿಗೆ ಮತ್ತು ಮಂಚಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವೈದ್ಯ ಇಲಾಖೆಗೆ ಬೇಕಾದಷ್ಟು ದುಡ್ಡು ಖರ್ಚುಮಾಡುತ್ತಾ ಇದ್ದೀರಿ. ಆಸ್ಪತ್ರೆಯಲ್ಲಿ ಕೆಲಸಮಾಡತಕ್ಕ ಜವಾನರುಗಳಿಗೆ, ಗುಮಾಸ್ತರುಗಳಿಗೆ, ಬಡ ಉಪಾಧ್ಯಾಯರುಗಳಿಗೆ ಅವರೇನಾದರೂ ಖಾಯಿಲೆ ಬಿದ್ದು ಆಸ್ಪತ್ರೆಗೆ ಬಂದರೆ ಇಂಜಕ್ಷನ್ ಸಿಕ್ಕುವುದಿಲ್ಲ. ಆದ್ದರಿಂದ ಇಂಜಕ್ಷನ್ ಟ್ಯೂಬುಗಳನ್ನೂ ಸರಬರಾಯಿ ಮಾಡಬೇಕು. ಈರೀತಿ ಮಲೆನಾಡಿನವ ಕಷ್ಟಸುಖ ತಿಳಿದು ಈ ಆಸ್ಪತ್ರೆಗಳ ವಿಷಯದಲ್ಲಿ ಸರ್ಕಾರದವರು ಹೆಚ್ಚಿನನಿಗಾ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮದರಾಸು ಕಡೆಯಿಂದ ಬರತಕ್ಕ ತಮಿಳರು ಕೂಲಿಯವರು ಯಾರಿದ್ದಾರೆ ಅವರ ಮಕ್ಕಳ ಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಅವರು ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ. ಅಂಥವರಿಗಾಗಿಯೇ ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನು ತೆಗೆದರೆ ಒಳ್ಳೆಯದಾಗುತ್ತದೆ.

ಚಿಕ್ಕಮಗಳೂರಿನ ವಿಷಯ ಮಾತನಾಡುವಾಗ, ಯಾವಾಗಲೂ ಇದು ಸಣ್ಣ ಜಿಲ್ಲೆ ಎಂದು ಹೇಳಿ ಬಹಳ ನಿಕೃಷ್ಟವಾಗಿ ಕಾಣುತ್ತಿದ್ದಾರೋ ಏನೋ ಎಂದು ಅನುಮಾನವಾಗುತ್ತಾ ಇದೆ. ಇದರ ವ್ಯಾಪ್ತಿ ದೊಡ್ಡದುಮಾಡಿ ಎಂದರೆ ಅದನ್ನು ಕೂಡ ಮಾಡುವುದಿಲ್ಲ. ಚಿಕ್ಕಮಗಳೂರು ಜಿಲ್ಲೆ ಆಸ್ಪತ್ರೆಗಳ ವಿಷಯದಲ್ಲಿ ಬಹಳ ಹಿಂದುಳಿದಿದೆ ಇದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟು ಮಲೆನಾಡಿನ ಜನಗಳಿಗೆ ಸಹಾಯಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಸಭಾಪತಿಗಳೇ, ಆಸ್ಪತ್ರೆ ವಿಚಾರದಲ್ಲಿ ಹೋದ ವರ್ಷ ನಮ್ಮ ಮಾನ್ಯಮಂತ್ರಿಗಳು ಡಾಕ್ಟರ್ ಮೋದಿಯವರಿಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದುದು ಬಹಳ ಸಂತೋಷದ ಸಮಾಚಾರ. ಆದರೆ ಈ ಸಾರಿ ಅವರಿಗೆ ಏನೂ ಒದಗಿಲ್ಲ. ಏಕೆ ತೆಗೆದುಹಾಕಿದ್ದಾರೋ ಏನೋ ಗೊತ್ತಿಲ್ಲ. ಅವರು ಮಾಡುತ್ತಾ ಇರತಕ್ಕ ಸೇವೆಯನ್ನು ಪ್ರಶಂಸೆ ಮಾಡಬೇಕಾದ ಅಗತ್ಯವಿಲ್ಲ. ಏಕೆಂದರೆ ಇಡೀ ದೇಶವೇ ಹೊಗಳುತ್ತಾ ಇದೆ, ಅದನ್ನು ಎಲ್ಲರ ಬಾಯಿಂದಲೂ ನಾವು ಕೇಳಿದ್ದೇವೆ. ಅವರೇ ಬಂದು ಹಣ ಕೇಳಲಿ ಎಂದರೆ ನಿಜವಾಗಿಯೂ ಅವರು ಸ್ವತಃ ಬಂದು ಕೇಳುವವರಲ್ಲ. ಬಡಜನರಿಗೆ ಸಹಾಯ ಮಾಡುವವರು ಎಂದರೆ ಡಾಕ್ಟರ್ ಮೋದಿಯವರು ಎಂದು ಹೇಳಿ ಪ್ರಸಿದ್ಧಿಯಾಗಿದ್ದಾರೆ. ಮತ್ತಿನ್ನಾರೂ ಅಷ್ಟು ಶ್ರದ್ಧೆಯಿಂದ ಕೆಲಸಮಾಡುತ್ತಿರುವುದು ಕಾಣುವುದಿಲ್ಲ. ಅಂತಹವರಿಗೆ ಮಂಜೂರು ಮಾಡಿರುವ ಹಣವನ್ನು ಈ ವರ್ಷ ಏಕೆ ನಿಲ್ಲಿಸಿದ್ದಾರೋ ಗೊತ್ತಿಲ್ಲ. ಆದ್ದರಿಂದ ದಯವಿಟ್ಟು ಹೋದಸಾರಿ ಅವರಿಗೆ ಹಣ ಒದಗಿಸಿದ್ದಂತೆಯೇ ಈ ವರ್ಷವೂ ಒದಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯವೇನೆಂದರೆ ಈ ಹಿಂದೆ ಎರಡು ಮೂರು ಸಾರಿ ಕೇಳಿದ್ದಕ್ಕೆ ದಾವಣಗೆರೆಗೆ ಒಬ್ಬ ಡಾಕ್ಟರನ್ನು ಹಾಕಿದ್ದೀರಿ. ಅದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಆದರೆ ನರ್ಸುಗಳು ಮತ್ತು ಆಯಾಗಳಿಲ್ಲದೆ ಬಹಳ ತೊಂದರೆಯಾಗಿದೆ ಅದನ್ನು ಸರಿಪಡಿಸಬೇಕು. ಇನ್ನೂ ಸ್ವಲ್ಪ ಜನರನ್ನು ಅಲ್ಲಿಗೆ ಹಾಕಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ದಾವಣಗೆರೆಯಲ್ಲಿ ನೀರಿಗೆ ಬಹಳ ಅವಸ್ಥೆಯಾಗಿದೆ ; ಯಾವಾಗ ನೋಡಿದರೂ ಸರಿಯಾಗಿ ನೀರು ಸರಬರಾಜಾಗುವುದಿಲ್ಲ. ಒಂದು ಕೊಡ ನೀರು ಸಿಕ್ಕಬೇಕಾದರೂ ಬಹಳ ಕಷ್ಟ. ಜನರು ಇಷ್ಟು ತೊಂದರೆಪಡುತ್ತಾಯಿದ್ದರೂ ಕೂಡ ಯಾರೂ ಗಮನಕ್ಕೆ ತೆಗೆದುಕೊಳ್ಳದೆ ಬಹಳ ಉದಾಸೀನವಾಗಿ ಕಾಣುತ್ತಾ ಇದ್ದಾರೆ. ದಾವಣಗೆರೆ ನೀರಿನ ವ್ಯವಸ್ಥೆಗೆ ಒಂದು ಟ್ಯಾಂಕ್ ಕಟ್ಟಬೇಕಾಗಿದೆ. ಅದಕ್ಕೆ ಬೇಕಾದ ಸಾಮಾನು ಸಪ್ಲೈ ಆಗುವುದಕ್ಕೆ ಇನ್ನೂ ಮೂರು ವರ್ಷ ಆದರೂ ಬೇಕು ಎಂದು ಹೇಳುತ್ತಾರೆ. ಮೂರು ವರ್ಷಗಳವರೆಗೂ ಇದೇ ಪರಿಸ್ಥಿತಿ ನಡೆದುಕೊಂಡು ಹೋಗಬೇಕೇ ಎನ್ನುವುದನ್ನು ತಾವೇ ಆಲೋಚನೆ ಮಾಡಿ. ಆಸ್ಪತ್ರೆಗೆ ಹೋದರೆ ಯಾವಾಗಲೂ ಸ್ವಚ್ಛವಾಗಿರಬೇಕು. ಸ್ವಚ್ಛವಾಗಿಟ್ಟಿರುವುದಕ್ಕೆ ನೀರು ಬೇಕು. ಆ ಆಸ್ಪತ್ರೆಯಲ್ಲಿರುವ ನಲ್ಲಿಗಳಲ್ಲಿ ಒಂದು ತಂಬಿಗೆ ನೀರೂ ಕೂಡ ಬರುವುದಿಲ್ಲ. ಈ ರೀತಿ ಆದರೆ ಅವರೇನು ಮಾಡಬೇಕು ? ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ನೀರು ಯಾವಾಗಲೂ ಬರುವಹಾಗೆ ಮಾಡದಿದ್ದರೆ ರೋಗಗಳು ಹರಡುವುದಕ್ಕೆ ಇದೇ ಒಂದು ಕಾರಣವಾಗುತ್ತದೆ ಎಂದು ಹೇಳಿ ಕೂಡಲೇ ತಕ್ಕ ವ್ಯವಸ್ಥೆಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

*ಶ್ರೀ ಎಚ್.ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸಕಲೇಶಪುರ ತಾಲ್ಲೂಕು ಕೆಸ್ನೂರಿನಲ್ಲಿ ಡಾಕ್ಟರು ಇಲ್ಲದೆ ಜನರು ಬಹಳವಾಗಿ ಪೇಚಾಡುತ್ತಾ ಇದ್ದಾರೆ. ಅಲ್ಲಿಗೆ ಜಾಗ್ರತೆ ಡಾಕ್ಟರನ್ನು ಕಳುಹಿಸಿಕೊಡಬೇಕೆಂದು ಹೇಳುತ್ತೇನೆ. ಈ ಆಸ್ಪತ್ರೆಗಳಿಗೆ ಇಂಜಕ್ಷನ್ ಟ್ಯೂಬುಗಳು ವಗೈರೆ ಇಷ್ಟಿಷ್ಟು ಪ್ರಮಾಣದಲ್ಲಿ ಸರಬರಾಯಿ ಮಾಡಬೇಕೆಂದು

(ಎಚ್. ಕೆ. ಸಿದ್ದಯ್ಯ.)

ನಿಗದಿಯಾಗಿದೆ. ಮತ್ತು ಅವುಗಳನ್ನು ಬಡವರಿಗೆ ಮುಫತ್ತಾಗಿ ಕೊಡಬೇಕೆಂದಿದೆ. ಆದರೆ ಕೆಲವು ಆಸ್ಪತ್ರೆಗಳಲ್ಲಿ ಇವುಗಳು ಬಡವರಿಗೆ ಸಿಕ್ಕದೇ ಅವರೇ ದುಡ್ಡುಕೊಟ್ಟು ತೆಗೆದುಕೊಂಡು ಬರಬೇಕೆಂದು ಹೇಳುತ್ತಾ ಇದ್ದಾರೆ. ಇದನ್ನು ಸರ್ಕಾರದವರು ಕೂಡಲೆ ಪರಿಶೀಲನೆಮಾಡಿ, ಹಾಗೇನಾದರೂ ಲೋಪ ದೋಷಗಳು ನಡೆಯುತ್ತಾ ಇದ್ದರೆ ಅದನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಎಸ್ಲೂರಿನಲ್ಲಿ ಒಂದು ಆಸ್ಪತ್ರೆ ಇದೆ. ಈ ಆಸ್ಪತ್ರೆಯಲ್ಲಿ ಖಾಯಿಲೆಯವರು ಬಂದರೆ ಕುಳಿತುಕೊಳ್ಳುವುದಕ್ಕೆ ಸ್ಥಳವಸತಿಯನ್ನು ಕಲ್ಪಿಸಿದ್ದೀರಿ. ಆದರೆ ಅದು ಸಾಲದು. ಮತ್ತು ಇನ್ನೂ 8-10 ಹಾಸಿಗೆಗಳನ್ನು ಜಾಸ್ತಿಯಾಗಿ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಸನ ಡಿಸ್ಟ್ರಿಕ್ಟಿನ ಅನೇಕ ಪ್ರದೇಶಗಳಲ್ಲಿ ಆಸ್ಪತ್ರೆಗಳಿಲ್ಲದೆ ಬಹಳ ತೊಂದರೆಯಾಗಿದೆ. ಎಲ್ಲಿ ತೊಂದರೆ ಇದೆ ಎಂದು ತಮಗೆ ಮನವಿಗಳು ಬರುತ್ತವೆಯೋ ಆ ಪ್ರದೇಶಗಳಿಗೆ ಆದಷ್ಟು ಜಾಗ್ರತೆ ಆಸ್ಪತ್ರೆ ಸೌಕರ್ಯವನ್ನೊದಗಿಸಿ ಆ ತೊಂದರೆ ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಹಾಸನದ ಜನರಲ್ ಆಸ್ಪತ್ರೆಯಲ್ಲಿರತಕ್ಕ ಡಾಕ್ಟರುಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಾ ಇರುತ್ತಾರೆ. ಅವರ ವಿಚಾರದಲ್ಲಿ ತೆಗಳಬೇಕಾದ ವಿಷಯವೇನೂ ಇಲ್ಲ. ಆದರೆ ಆಸ್ಪತ್ರೆಗೆ ಬೇಕಾದ ಇನ್ನು ಅನೇಕ ಸೌಕರ್ಯಗಳು ಸಾಲದಾಗಿವೆ. ಆದ್ದರಿಂದ ಸರ್ಕಾರದವರು ಹಾಸನದ ಡಿಸ್ಟ್ರಿಕ್ಟ್ ಆಸ್ಪತ್ರೆ, ಸಕಲೇಶಪುರದ ಆಸ್ಪತ್ರೆ ಮತ್ತು ಬೇಲೂರು ಆಸ್ಪತ್ರೆಗಳಿಗೆ ಇನ್ನೂ ಹೆಚ್ಚಿನ ಹಾಸಿಗೆಗಳನ್ನು ಮತ್ತು ಇತರ ಉಪಕರಣಗಳನ್ನು ಒದಗಿಸಿಕೊಡಬೇಕೆಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1-30 P.M.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸಂಸ್ಥಾನದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಜವಾನರುಗಳ ಸಂಬಳ ಎಷ್ಟು ಎಂದರೆ, ಇಡೀ ಮೈಸೂರು ದೇಶದಲ್ಲೇ ಅವರಷ್ಟು ಕಡಮೆ ತೆಗೆದುಕೊಳ್ಳುವವರಿಲ್ಲವೆಂದರೆ ಎಲ್ಲರೂ ಒಪ್ಪಿಕೊಳ್ಳಬೇಕಾದ್ದೆ. ಅವರ ಕೆಲಸದಲ್ಲಿ ಮಟ್ಟಿಗೆ ಯಾವ ರೀತಿಯಾದ ನಿಯಮಗಳೂ ಇಲ್ಲ. ಕೆಲಸಕ್ಕೆ ಕಾಲ ನಿಗದಿಯೆಂಬುದಿದ್ದರೂ ಅದರ ಪ್ರಕಾರ ನಡೆಯುವುದಕ್ಕೂ ಆಗುವುದಿಲ್ಲ. ಏಕೆಂದರೆ ರೋಗಿಗಳ ಸೇವೆಯಲ್ಲಿ ಅವರು ಸರ್ವದಾನಿರತರಾಗಿರಬೇಕಾಗುತ್ತದೆ. ರೋಗಿಗಳ ಸೇವೆಯೆಂದರೆ ಮಾನವನು ಮಾಡುವ ಸೇವೆಗಳಲ್ಲಿ ಬಹಳ ದೊಡ್ಡಸೇವೆ. ಅದಕ್ಕಿಂತ ಹೆಚ್ಚಿನ ಸೇವೆ ಯಾವುದೂ ಇಲ್ಲ. ಆದ್ದರಿಂದ ಸರ್ಕಾರದವರು ಇಂಥ ಸೇವೆಯಲ್ಲಿ ನಿರತವಾಗಿರುವವರಿಗೆ ಹೆಚ್ಚಿನ ಸಹಾಯ ಮಾಡಬೇಕು. ಆಸ್ಪತ್ರೆಯಲ್ಲಿ ಪರಿಶುದ್ಧವಾಗಿರಬೇಕೆಂದು ಹೇಳುತ್ತಾರೆ. ಆದರೆ ಇವರಿಗೆ ಕೊಡುವುದು ಒಂದು ಜೊತೆ ಬಟ್ಟೆ ನೈರ್ಮಲ್ಯದ ದೃಷ್ಟಿಯಿಂದಲಾದರೂ ಅವರಿಗೆ ಇನ್ನೊಂದು ಜೊತೆ ಬಟ್ಟೆ ಕೊಡಬೇಕು. ಬೇರೆ ಎಲ್ಲಾ ಕಡೆಗಳಲ್ಲೂ ಅದೇ ರೀತಿ ಕೊಡುತ್ತಿದ್ದಾರೆ. Ward Boysಗೂ ಹಾಗೆಯೇ ಒಂದು ಜೊತೆ ಬಟ್ಟೆ. ಕೊಡಬೇಕು. ಮೇಲಾಗಿ ಅವರ ಮಕ್ಕಳಿಗೆ ಉಚಿತ ವಿದ್ಯಾಸೌಕರ್ಯವನ್ನೊದಗಿಸುವುದು ಅಗತ್ಯ.

ಇನ್ನೊಂದು ವಿಷಾದಕರ ವಿಷಯವೇನೆಂದರೆ, ಬೆಳ್ಳಗಿರುವ ನರ್ಸ್‌ಗಳಿಗೆ ಸಂಬಳ ಜಾಸ್ತಿಯಂತೆಯೂ ಕಪ್ಪಗಿರುವ ನರ್ಸ್‌ಗಳಿಗೆ ಸಂಬಳ ಕಮ್ಮಿಯಂತೆಯೂ ಮಾಡಿದ್ದಾರೆ. ಏಕೆ ಹೀಗೆ ಕಡಮೆ ಮಾಡಿದ್ದಾರೋ ಅರ್ಥವಾಗುವುದಿಲ್ಲ. ನಿನ್ನೆ ತಾವೇನೋ ಒಂದು ವಿಧದಲ್ಲಿ ನನಗೆ ಸಮಾಧಾನವಾಗುವ ರೀತಿಯಲ್ಲಿ ಒಂದು ಉತ್ತರ ಕೊಟ್ಟಿರಿ. ಆದರೆ ಒಂದು ವಿಷಯ ತಾವು ಯೋಚನೆ ಮಾಡಬೇಕು. ನಾನೀಗ ಸ್ವಲ್ಪ ಬೆಳ್ಳಗೆ ಇದ್ದೇನೆ, ತಾವು ಸ್ವಲ್ಪ ಕಪ್ಪಗಿದ್ದೀರಿ. ತಾವು ಕಪ್ಪಾಗಿರುವ ಮಾತ್ರಕ್ಕೆ Cabinet ನಲ್ಲಿ ಕಮ್ಮಿ ಸಂಬಳ ತಮಗೆ ಕೊಡುತ್ತಾರೆಯೇ? ಆದ್ದರಿಂದ ನಾನು ತಮ್ಮ ಗಮನಕ್ಕೆ ತರುವುದು ತಾವಿದನ್ನು ಸ್ವಲ್ಪ ಕೂಲಂಕಷವಾಗಿ ಪರಿಶೀಲಿಸಬೇಕು. 'ನಿನ್ನೆಯೆಲ್ಲಾ ಕಪ್ಪಗಿರುವ ನರ್ಸ್‌ಗಳೆಲ್ಲಾ ಮರದಕೆಳಗೆ ಕುಳಿತು ಅತ್ತಿದ್ದಾರೆ, ತಾವು ಕಪ್ಪಾಗಿ ಹುಟ್ಟಿದ್ದೇ ತಪ್ಪಾಯಿತೇ? ಎಂದು. ತಾವು ದಯವಿಟ್ಟು ಚರ್ಮದ ಮೇಲೆ ಸಂಬಳವನ್ನು ನಿಗದಿಮಾಡುವುದಕ್ಕೆ ಹೋಗಬೇಡಿ. ಬೆಳ್ಳಗಿರಲಿ, ಕಪ್ಪಗಿರಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ಸಂಬಳ ಕೊಡಿ. ಆಂಗ್ಲೊ ಇಂಡಿಯನ್ ಜಾತಿಯವರೆಂದು ಹೆಚ್ಚಿಗೆ ಕೊಡುವುದು ಉಚಿತವಲ್ಲ.

ನಮ್ಮ ದೇಶದಲ್ಲಿ ಬೌರಿಂಗ್ ಆಸ್ಪತ್ರೆ, ಸ್ಯಾನಿಟೋರಿಯಂ ಆಸ್ಪತ್ರೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರುಗಳು ನಿಜವಾಗಿಯೂ ರೋಗಿಗಳ ವಿಷಯದಲ್ಲಿ ಉತ್ತಮಸೇವೆ ಸಲ್ಲಿಸುತ್ತಿದ್ದಾರೆ. ಅವರೆಲ್ಲರಿಗಿಂತ ಹೆಚ್ಚಾಗಿ ಇಲಾಖಾ ಡೈರೆಕ್ಟರಾದ ಪೂಜ್ಯ ಡಾ॥ ವೆಂಕಟಸುಬ್ಬರಾಯರು ರೋಗಿಗಳಿಗಾಗಿ ಶ್ರಮಿಸುತ್ತಿದ್ದಾರೆಂದರೆ ತಪ್ಪಲ್ಲ. ಆದರೆ ಇವಿಷ್ಟರಿಂದಲೇ ರೋಗಿಗಳ ಕಷ್ಟನಿವಾರಣೆಯಾದಂತಾಗುವುದಿಲ್ಲ. ರೋಗಿಗಳು ಬಂದವರಿಗೆಲ್ಲಾ ಇಂಜಕ್ಷನ್ ಟ್ಯೂಬುಗಳನ್ನು ಬರೆದುಕೊಟ್ಟು ಬಿಟ್ಟರೆ ಆಯಿತೇ? ಆ ಬಡರೋಗಿಗಳು ಎಲ್ಲಿಂದ ತಂದುಕೊಡುವುದು, ಸರ್ಕಾರದವರು ಆಸ್ಪತ್ರೆಗಳಿಗೆ ಲಕ್ಷಾಂತರ ರೂಪಾಯಿಗಳ ಗ್ರಾಂಟನ್ನು ಏಕೆ ಕೊಡುತ್ತಿದ್ದಾರೆ? ಇತ್ತೀಚೆಗೆ ಆಸ್ಪತ್ರೆಗಳಲ್ಲಿ ಕೆಲವು ಜನಸೇರಿಕೊಂಡು ಯಾವ ಔಷಧಿಗಳೂ ಸಹ ನಿಜವಾಗಿ ಯಾವ patientsಗೆ ಸಲ್ಲಬೇಕೋ ಅವರಿಗೆ ಸಲ್ಲದಂತಾಗಿದೆ. ಶ್ರೀಮಂತ ರೋಗಿಗಳಿಗಾದರೋ ಉಚಿತವಾಗಿ ಎಲ್ಲವೂ ಸಿಕ್ಕುತ್ತದೆ, ಬಡರೋಗಿಗಳನ್ನು ಕೇಳುವವರಿಲ್ಲ. ಈ ಬಗ್ಗೆ ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಮಲ್ಲೇಶ್ವರ ಬಡಾವಣೆಯಲ್ಲಿ ಒಂದು ಜನರಲ್ ಆಸ್ಪತ್ರೆ ಅಗತ್ಯವಾಗಿ ಆಗಬೇಕಾಗಿದೆ. ಹೆಚ್ಚು ಜನ ಕಾರ್ಮಿಕರು ಆ ಭಾಗದಲ್ಲಿ ವಾಸ ಮಾಡುತ್ತಿದ್ದಾರೆ. ಸರ್ಕಾರದವರು ಈ ಬೇಡಿಕೆಯನ್ನು ಮನ್ನಿಸುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಅಧ್ಯಕ್ಷರೇ, ಈಗ ನಮ್ಮ ಮುಂದಿ ರತಕ್ಕ ಡಿಮ್ಯಾಂಡಿನ ಸಂಬಂಧದಲ್ಲಿ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂದೆರಡು ವಿಷಯಗಳನ್ನು ಮಾತ್ರ ನಾನು ಹೇಳಲಿಚ್ಛಿಸುತ್ತೇನೆ. ಹೊಸದುರ್ಗ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ—ಕೆರೆಯ ಆಸರೆಯ ಗ್ರಾಮಗಳಲ್ಲಿ ಮಲೇರಿಯಾ ಹಾವಳಿ ಹೆಚ್ಚಾಗಿದ್ದು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಗಮನಕ್ಕೆ ತಂದರೂ ಅವರು ಯಾವ ಪರಿಶೀಲನೆಯನ್ನೂ ಮಾಡದೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಆದ್ದರಿಂದ ಕೆರೆಯ ಆಸರೆ ಎಲ್ಲೆಲ್ಲಿದೆಯೋ ಅಲ್ಲಾದರೂ ಕೂಡ ಕೂಡಲೇ D.D.T. spray ಕೆಲಸವನ್ನು ಕೈಕೊಳ್ಳಬೇಕೆಂದ ನಾನು ಹೇಳುತ್ತೇನೆ.

ಎರಡನೆಯದಾಗಿ ಹೊಸದುರ್ಗ ಟೌನ್ ಪ್ರದೇಶದ ಎಲ್.ಎಫ್. ಡಿಸ್ಪೆನ್ಸರಿ ಮತ್ತು ಮೆಟರ್ನಿಟಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ವಸತಿ ಸೌಕರ್ಯವಿಲ್ಲದೆ ಬಹಳ ತೊಂದರೆಯಾಗಿದೆ. ರೋಗಿಗಳಿಗೆ ಅನುಕೂಲವಾಗಲೆಂದು ಹೇಳಿ ಯಾರೋ ಮಹಾತ್ಮರು ಒಂದು ವಾರ್ಡನ್ನು ಕಟ್ಟಿಕೊಟ್ಟಿದ್ದರೆ ಸರ್ಕಾರದವರು ಅದನ್ನಾದರೂ ಉಪಯೋಗಿಸಿಕೊಳ್ಳುವ ಯೋಚನೆಮಾಡಿಲ್ಲ. ಪುಣ್ಯಾತ್ಮರು ವಾರ್ಡ್ ಕಟ್ಟಿಸಿಕೊಟ್ಟರಲ್ಲ ಎಂದು ತೃಪ್ತಿಪಡದೆ, ಈಗ ಅವರನ್ನೇ ಅದರ ಬಗ್ಗೆ ಆಗುವ ಲೈಟಿಂಗ್ ಚಾರ್ಜನ್ನೂ ವಹಿಸಿಕೊಳ್ಳಬೇಕೆಂದು ಸರ್ಕಾರದವರು ಹೇಳುತ್ತಾ, ಈಗ ಆ ವಾರ್ಡನ್ನು ಉಪಯೋಗಿಸುತ್ತಿಲ್ಲ. ಸರ್ಕಾರದವರು ದಯವಿಟ್ಟು Recurring lighting ಚಾರ್ಜನ್ನು ವಹಿಸಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಇದುವರೆಗೂ ಸರ್ಕಾರದವರು ಇದಕ್ಕೊಪ್ಪದೇ ದಾನಿಗಳಾದ ನಾಗಪ್ಪಶೆಟ್ಟರೇ ಅದನ್ನೂ ವಹಿಸಿಕೊಳ್ಳಬೇಕೆಂದು ಹೇಳಿದುದರಮೇಲೆ, ಅವರು ಏನೂ action ತೆಗೆದುಕೊಳ್ಳದ ಕಾರಣ ಈಗ ಆ ವಾರ್ಡ್ ಉಪಯೋಗವಿಲ್ಲದೆ ನಿಂತಿದೆ. ಇವರ ಹಾಗೆಯೇ ಇನ್ನೊಬ್ಬರು ದಾನಿಗಳು ನಾಲ್ಕೈದು ಸಾವಿರ ರೂಪಾಯಿಗಳನ್ನು ಕೊಟ್ಟು ಆಸ್ಪತ್ರೆಯ ಕಟ್ಟಡಕ್ಕೆ ಸಹಾಯ ಮಾಡಲು ಮುಂದೆ ಬಂದಿದ್ದರು. ಅವರನ್ನು ಹಾಸಿಗೆ, ಮಂಚಗಳನ್ನು ಹೊಂದಿಸಿಕೊಡಬೇಕೆಂದು ಹೇಳಿದ್ದರಮೇಲೆ ಅದೂ ಹಾಗೆಯೇ ನಿಂತಿದೆ. ಇಂಥದನ್ನೆಲ್ಲಾ ಪರಿಶೀಲನೆಮಾಡಿ ಬೇಗ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೋದಸಾರಿ ಅರಿಕೆಮಾಡಿಕೊಂಡು 18 ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳಿ ಒಂದು ವರ್ಷ ಕಾದು ನೋಡಲಾಗಿದೆ. ಮೊನ್ನೆ ಮೊನ್ನೆಯೇನೋ ಒಂದು ತಿಂಗಳ ಹಿಂದೆ 9 ಜನ ಡಾಕ್ಟರುಗಳನ್ನು post ಮಾಡಿದೆಯೆಂದು ಡಿ.ಎಂ.ಓ.ರವರು ಹೇಳಿದರು. ಆದರೆ, ಇದುವರೆಗೂ ಅವರೊಬ್ಬರೂ ಬಂದಿಲ್ಲ. ಒಂದು ವರ್ಷವಾದರೂ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ! ಕಾಂಪೌಂಡರುಗಳಿಲ್ಲ ಎಂದರೆ ಹೇಗೆ? ಅಲ್ಲಿನ ಸ್ಥಿತಿ, ಆಸ್ಪತ್ರೆಯಿದೆ, ಡಾಕ್ಟರುಗಳಿಲ್ಲ—ಹೀಗಾಗಿದೆ. ಆದ್ದರಿಂದ ಮಲೆನಾಡು ಸರ್ವಿಸ್ ಎನ್ನುವುದನ್ನು ಪ್ರತಿಯೊಬ್ಬ ಡಾಕ್ಟರಿಗೂ ಐದು ವರ್ಷವಾದರೂ ಕಡ್ಡಾಯವಾಗಿರಬೇಕೆಂದು ಮಾಡಿದರೆ ಡಾಕ್ಟರುಗಳು ಬಂದೇ ಬರುತ್ತಾರೆ.

ಇನ್ನೊಂದು ನ್ಯೂನತೆಯಿದೆ ಈ ಮಲೆನಾಡಿನ ಆಸ್ಪತ್ರೆಗಳಲ್ಲಿ. ಕೆಲವುಕಡೆ ಆಸ್ಪತ್ರೆಗಳಲ್ಲಿ ಒಳ್ಳೆಯ ಡಾಕ್ಟರುಗಳಿರುತ್ತಾರೆ. ಅವರು ಅಲ್ಲಿ ಸಂತೋಷವಾಗಿ ಕೆಲಸಮಾಡುತ್ತೇವೆಂದು ಹೇಳಿದರೂ ವಿನಾ ಕಾರಣ ಅವರನ್ನು ವರ್ಗಾಮಾಡುತ್ತಾರೆ. ತಾವು ಮಲೆನಾಡಿನಲ್ಲೇ ಇರುತ್ತೇವೆಂದರೂ ಬೇಕೆಂತಲೇ ಮದ್ದೂರಿಗೋ ಕೋಲಾರಕ್ಕೋ ವರ್ಗಾಮಾಡುತ್ತಾರೆ.

ಒಬ್ಬ ಸದಸ್ಯರು.—ಹಾಗಾದರೆ ಇರತಕ್ಕ ರೂಲ್ಸನ್ನು ಬದಲಾಯಿಸಬೇಕೆಂದು ಹೇಳುತ್ತೀರಾ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರೂಲನ್ನು ಬದಲಾಯಿಸುವ ಪ್ರಶ್ನೆಯಿಲ್ಲ. ಜನರೇ ಬರದೆ ಇರುವಾಗ ಇರುವ ಡಾಕ್ಟರುಗಳನ್ನೂ ವರ್ಗಾಯಿಸಿ ಯಾರೂ ಇಲ್ಲದಂತೆ ಮಾಡುವುದು ಸರಿಯಲ್ಲ. ಹಾಲಿ ಇರುವ ಆಸ್ಪತ್ರೆಗಳಲ್ಲೇ 15 ಕಡೆಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳುವಾಗ, ಇರುವ ಆಸ್ಪತ್ರೆಗಳ ಡಾಕ್ಟರುಗಳನ್ನೂ ಹೊರಗೆ ಕಳುಹಿಸುವುದು ಇನ್ನೂ ಕಷ್ಟವನ್ನುಂಟುಮಾಡುತ್ತದೆ. ಈ ಕಷ್ಟದ ನಿವಾರಣೆಗಾಗಿ ಮಲೆನಾಡಿನ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸ್ಥಾನಗಳನ್ನು ಮೆಡಿಕಲ್ ಕಾಲೇಜುಗಳಲ್ಲಿ ಕೊಡಲಿ ಎಂದು ಕೇಳಿಕೊಂಡರೆ ಒಂದು ವರ್ಷಕ್ಕೆ ಇಬ್ಬರು-ಮೂವರು ವಿದ್ಯಾರ್ಥಿಗಳಿಗೂ ಸಿಕ್ಕುತ್ತಿಲ್ಲ. ಜೊತೆಗೆ ಮಲೆನಾಡಿನವರಾಗಿ ಶಿಕ್ಷಣ ಪಡೆದ ಹಲಕೆಲವು ಜನರನ್ನು ಇಲ್ಲಿ ಬೆಂಗಳೂರಿನಲ್ಲಿ ಸೇವೆಮಾಡುವುದಕ್ಕೆ ಹಾಕಿದ್ದೀರಿ. ಅಂಥವರಿಗೆ ವರ್ಗಾಮಾಡಿದರೆ ಅವರು ಮಲೆನಾಡಿನಲ್ಲಿ ಕೆಲಸಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಮಲೆನಾಡಿನವರಾಗಿ ಶಿಕ್ಷಣ ಪಡೆದಿರುವವರು ಯಾರಾದರೂ ತಮ್ಮ ಮಲೆನಾಡಿಗೆ ವರ್ಗಮಾಡಬೇಕೆಂದು ಕೇಳಿದರೆ ಅವರನ್ನು ವರ್ಗಮಾಡಿಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರು ನಗರವು ಅನೇಕ ಕಾರ್ಖಾನೆಗಳ ಕೇಂದ್ರ. ಹೀಗಿರುವ ಮೈಸೂರಿನ ಶಾಂತಿ ವಾತಾವರಣದಿಂದ, ವಿದ್ಯಾಭ್ಯಾಸಕ್ಕ ಅನುಕೂಲವಾಗಿರುವ ಸ್ಥಳದಿಂದ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದು ಸರಿಯಲ್ಲ. ಅಲ್ಲದೆ ಎಲ್ಲಾ ಇನ್ಸ್ಟಿಟ್ಯೂಷನ್‌ಗಳು, ವಿದ್ಯಾ ಸಂಸ್ಥೆಗಳು ಮತ್ತು ಕಾರ್ಖಾನೆಗಳನ್ನೂ ಬೆಂಗಳೂರಿನಲ್ಲಿಯೇ concentrate ಮಾಡುವ ಪದ್ಧತಿಯೂ ಸರ್ವಥಾ ಸರಿಯಲ್ಲ. ಮುಖ್ಯವಾಗಿ ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಒಳ್ಳೆಯ ವಾತಾವರಣವಿದೆ. ಹೆಚ್ಚಿನ ವ್ಯಾಮೋಹವಿರುವುದಿಲ್ಲ. ಬೆಂಗಳೂರಿನಲ್ಲಾದರೋ 35-40 ಸಿನಿಮಾ ಕೇಂದ್ರಗಳಿರುವುದರಿಂದ ವಿದ್ಯಾರ್ಥಿಗಳಿಗೆ ಸಿನಿಮಾಗಳ ಕಡೆ ಆಕರ್ಷಣೆ ಹೆಚ್ಚು. ಈ ಕಾರಣ, ಆಯುರ್ವೇದ ಕಾಲೇಜು ಮೈಸೂರಿನಲ್ಲಿರುವುದೇ ಉತ್ತಮ. ಹಾಗೂ ತಮಗೆ ಕಾಲೇಜನ್ನು upgrade ಮಾಡಬೇಕೆಂದು ಇಷ್ಟವಿದ್ದರೆ, ಇಲ್ಲಿ ಇನ್ನೊಂದು ಆಯುರ್ವೇದ ಕಾಲೇಜನ್ನು ಏರ್ಪಾಡುಮಾಡಿ. ಅಷ್ಟೇ ಹೊರತು ಮೈಸೂರಿನಲ್ಲಿ ಅನೇಕ ವರ್ಷಗಳಿಂದ ಇರುವುದನ್ನು ಬದಲಾಯಿಸುವುದು ಸರಿಯಲ್ಲ. ಆದ್ದರಿಂದ ಅಲ್ಲಿರುವ ಕಾಲೇಜನ್ನು ಅಲ್ಲಿಯೇ ಇಟ್ಟು, ಬೆಂಗಳೂರಿನಲ್ಲಿ ಅವಶ್ಯಕವಿದ್ದರೆ ಇನ್ನೊಂದು ಕಾಲೇಜನ್ನು ಪ್ರಾರಂಭಿಸಬಹುದೆಂದು ಹೇಳುತ್ತೇನೆ.

ವಿದ್ಯಾರ್ಥಿಗಳ ಸಂಖ್ಯೆಯನ್ನೇನಾದರೂ ಅಷ್ಟು ಹೆಚ್ಚು ಮಾಡುವುದಕ್ಕವಕಾಶವಿಲ್ಲವೆಂದು ಹೇಳುವುದಾದರೆ ಅಲ್ಲಿ 50 ಜನರಿಗೋ ನೂರು ಜನರಿಗೊ ಮಾತ್ರ ಅವಕಾಶ ಮಾಡಲಿ, ಅವರು ಅಲ್ಲಿ ಶಿಕ್ಷಣಪಡೆಯಲಿ, ಇನ್ನು ಮಿಕ್ಕವರು ಬೆಂಗಳೂರಿನಲ್ಲಿ ಪಡೆಯಲಿ, ಅಲ್ಲಿರುವುದನ್ನುಪಯೋಗಿಸಿಕೊಂಡು ಅಲ್ಲೇ ಮುಂದುವರಿಸಿ ಇಲ್ಲಿ ಬೇರೊಂದು ಕಾಲೇಜನ್ನು ಮಾಡಿ ಎಂದು ಸಲಹೆ ಮಾಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಆಯನೂರು, ಹೊಳಲೂರು ಗ್ರಾಮಗಳಿಗೆ ಹತ್ತಾರು ಮೈಲಿ ಸುತ್ತಮುತ್ತ ವೈದ್ಯಸಹಾಯ ದೊರಕುತ್ತಿಲ್ಲ. ಹತ್ತು ಸಾವಿರ ರೂಪಾಯಿ ಬೆಲೆ ಬಾಳುವ ಕಟ್ಟಡವನ್ನು ಆಯನೂರು ಗ್ರಾಮದವರು ಕೊಟ್ಟಿದ್ದಾರೆ ಮತ್ತು ಅಲ್ಲಿ ಹೆಲ್ತ್ ಸೆಂಟರ್ ಏರ್ಪಾಡುಮಾಡಿ ಎಂದು ನಾಲ್ಕೈದು ವರ್ಷಗಳಿಂದಲೂ ಕೇಳುತ್ತಿದ್ದಾರೆ. ಈ ಗ್ರಾಮಗಳಿಗೆ ಹೆಲ್ತ್ ಸೆಂಟರ್ ಏರ್ಪಾಡುಮಾಡಿ ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು—ಉತ್ತರ).—ಸ್ವಾಮಿ, ಸಂಸ್ಥಾನದ ಎಲ್ಲ ಜನರಿಗೂ ವೈದ್ಯಸಹಾಯ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಜನತೆಯಲ್ಲಿ ಶ್ರೀಮಂತರಾಗಲಿ, ಬಡವರಾಗಲಿ ಅವರಿಗೆ ಆರೋಗ್ಯ ಮುಖ್ಯ. ಬೆಂಗಳೂರಿನ ಸುತ್ತಮುತ್ತಿನ ಕೈಗಾರಿಕ ಕೇಂದ್ರಗಳು ಹೆಚ್ಚುತ್ತಿವೆ. ಇದರ

(ಶ್ರೀ ಕೆ. ಪಿ. ಬೈರೆಗೌಡ)

ಪರಿಣಾಮವಾಗಿ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ. ಬೆಂಗಳೂರು ನಗರದೊಳಗೆ ಕಾರ್ಪೊರೇಷನವರು ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರ ಪರಿಣಾಮವಾಗಿ ಇಲ್ಲಿ ಆರೋಗ್ಯ ಉತ್ತಮವಾಗಿದ್ದರೂ ನಗರದ ಸುತ್ತಮುತ್ತ ಹತ್ತು ಮೈಲಿ ಪ್ರದೇಶದಲ್ಲಿ ಇದೇರೀತಿ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ರೋಗಗಳು ಹರಡಿ ಎಷ್ಟು ಹಣವನ್ನು ಖರ್ಚುಮಾಡಿದರೂ ಪ್ರಯೋಜನವಿಲ್ಲದಂತಾಗುತ್ತದೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಿವೆ. ಅಲ್ಲಿ ದೇವರಜೀವನಹಳ್ಳಿ ಎಂಬ ಗ್ರಾಮವಿದೆ. ಅದನ್ನು ಮಂತ್ರಿಗಳು ನೋಡಿದ್ದಾರೆ. ಅಲ್ಲಿರುವ ಟ್ಯಾನರಿಯ ಬಳಿ ಜನ ಸಂಖ್ಯೆಯು ಒತ್ತಡ ಹೆಚ್ಚಾಗಿ ಆರೋಗ್ಯ ವ್ಯವಸ್ಥೆಯಿಲ್ಲದೆ ಅದೊಂದು ನರಕವಾಗಿದೆ. ಅಲ್ಲಿನ ಜನ ಹೇಗೆ ಜೀವನ ಮಾಡುತ್ತಿದ್ದಾರೆಂಬುದನ್ನು ಯಾರು ನೋಡಿದರೂ ನೊಂದುಕೊಳ್ಳುತ್ತಾರೆ. ಆ ಟ್ಯಾನರಿಯನ್ನು ಸರಿಯಾಗಿ ವ್ಯವಸ್ಥೆಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. ಅದನ್ನು ಮುಚ್ಚಿದರೂ ಚಿಂತೆಯಿಲ್ಲ. ಪ್ರತಿವರ್ಷವೂ ಅಲ್ಲಿ ಸಾಂಕ್ರಾಮಿಕರೋಗ ಬರುತ್ತಿದೆ. ಈ ರೋಗವಿಲ್ಲದ ವರ್ಷವೇ ಇಲ್ಲ. ಆ ಪ್ರದೇಶದಲ್ಲಿ Family Planning ಅಥವ ಕುಟುಂಬ ಯೋಜನೆಯನ್ನು ಜಾರಿಗೆ ತರದೇ ಹೋದರೆ ಬಹಳ ಕಷ್ಟ. ಆ ಜನರಿಗೆ ಹೇಳಿದರೆ, ಏನು ಮಾಡುವುದು ನಮಗಿರುವ ಸುಖ ಇದೊಂದೇ ಎಂದು ಹೇಳುತ್ತಾರೆ. ಅಲ್ಲಿ ಕೆಲಸ ಮಾಡತಕ್ಕ ಜನ ಹತ್ತು ಹನ್ನೆರಡು ಮಕ್ಕಳನ್ನು ಮರಗಳ ಕೆಳಗೆ ಮಲಗಿಸಿ ಕೆಲಸಕ್ಕೆ ಹೊರಟು ಹೋಗುತ್ತಾರೆ. ಕುಟುಂಬ ಯೋಜನೆಯ ಸಲಹೆ ಅವರಿಗೆ ಅಗತ್ಯವಾಗಿ ಬೇಕು. ಎಲ್ಲಿ ಸಲಹೆ ದೊರೆಯುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ. ಈ ಒಂದು ಅನುಕೂಲವನ್ನು ಕಲ್ಪಿಸಿದರೆ ನಿಜವಾಗಿಯೂ ಅವರಿಗೆ ಬಹಳ ಉಪಕಾರವಾಗುತ್ತದೆ.

ಯಲಹಂಕದಲ್ಲಿ ಶ್ರೀ ಮುನಿಯಪ್ಪ ಎಂಬುವರು ಕಂಬೈನ್ಡ್ ಆಸ್ಪತ್ರೆಗಾಗಿ ಒಂದು ಕಟ್ಟಡವನ್ನು ಕಟ್ಟಿದ್ದಾರೆ. ಈಗ ಆ ಕಟ್ಟಡದಲ್ಲಿ ದನಗಳೂ ಕತ್ತೆಗಳೂ ವಾಸಮಾಡುತ್ತವೆ. ಯಲಹಂಕ ರಸ್ತೆಯ ಪಕ್ಕದಲ್ಲೇ ಕಾಣುತ್ತದೆ. ಅದನ್ನು ಬೇಗ ಕಂಬೈಂಡ್ ಆಸ್ಪತ್ರೆಯಾಗಿ ಮಾಡಬೇಕು.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ surgical side ನಲ್ಲಿ ಯಾವುದೋ ವಾರ್ಡಿನಿಂದ ದುರ್ವಾಸನೆ ಬರುತ್ತಿದೆ. ಇದಕ್ಕೇನು ಕಾರಣವೊ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಹೀಗಿರಬಾರದು. ಆಸ್ಪತ್ರೆಗೆ ಸಾಕಷ್ಟು ಡಾಕ್ಟರುಗಳು ಸಲಕರಣೆಗಳನ್ನು ಕೊಡದೇ ಹೋದರೆ ಸರಿಯಾಗಿಡಲು ಸಾಧ್ಯವಾಗುವುದಿಲ್ಲ. ಹೆಚ್ಚು ಗಮನ ಕೊಡಬೇಕು.

ದೇವನಹಳ್ಳಿ ತಾಲ್ಲೂಕು ನಲ್ಲೂರಿನಲ್ಲಿ ಒಂದು ಆಸ್ಪತ್ರೆಯಾಗಬೇಕೆಂದು ಜಸ್ಟಿಸ್ ಬಾಳಿಪುರ ಸುಬ್ಬಣ್ಣನವರು ಮಧ್ಯರಾಷ್ಟ್ರದಲ್ಲಿ ಆಸ್ಪತ್ರೆಗೆ ಸ್ಥಳವನ್ನೂ ಡಾಕ್ಟರಿರುವುದಕ್ಕೆ ಕಟ್ಟಡವನ್ನೂ ಕೊಟ್ಟಿದ್ದಾರೆ. ಅಲ್ಲಿಗೆ ಆದಷ್ಟು ಬೇಗ ಆಸ್ಪತ್ರೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*Sri M. RAJASEKHARA MURTHY (Yelandur).—Sir, my friend Sri Narayanaswamy, while speaking on the Demand, made an eloquent speech as to why the Ayurvedic College should not be shifted from Mysore to Bangalore. He is a lawyer. Rou know sometimes that when cases are weak, arguments will be strong. Sri Narayanaswamy took up a weak case and made strong arguments. But he has not made out a case as to why it should not be shifted to Bangalore, and he has not mentioned the comparative advantages for not shifting the College to Bangalore. He has stated that the transfer of this College from Mysore to Bangalore came just like a bolt from the sky. But it is not so. The question is pending from a long time. Only recently Government took it up. Sir, there are certain disadvantages in Mysore City. The first one is: the building accommodation is very insufficient. Formerly the College was intended to train very few students, but of recent years, the strength has increased. I am a member on the Board and I have inspected the College. There are no waiting rooms either for boys or girls. There are no separate urinals. There is no room to keep dead bodies. Sometimes dead bodies are being eaten by crows and dogs. Therefore, it was thought better to shift the College from Mysore to Bangalore. Secondly, there is no bed strength in that College. There are only 12 beds and this number is small for the students to get trained. There is not even sufficient accommodation for the students of the College and the dispensary attached. There are only 12 beds which are insufficient. There is inadequacy of clinical materials. This is another reason why the College should be shifted from Mysore to Bangalore. Lastly, there is a research institute situated in Bangalore called the Sri Jayachamarajendra Institute of Indian Medicines. There are good number of beds, which will be convenient for the students to get more knowledge in several subjects. Therefore, for these reasons, the Government have thought it desirable to shift the college from Mysore to Bangalore. I welcome the move taken by the Government.

A Maternity Home was constructed in the year 1950 in Yelandur Taluk. It was due to the munificence of Sri Puttalingappa. Till now, no staff has been sanctioned to that hospital. The

building has almost become the bedroom for donkeys. I have to think that there is no sincerity on the part of the Government to give the staff. I request the Government to immediately provide the facilities required by the public.

2 P.M.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ಶ್ರೀಮಾನ್ ಬೈರೇಗೌಡರು Family Planning ವಿಚಾರವಾಗಿ ಆಗಲೇ ಮಾತನಾಡಿದ್ದರೂ ಸಹ ನಾನು ಅದನ್ನು ಪ್ರತಿಪಾದಿಸಿ ಮಾತನಾಡಬೇಕೆಂದಿದ್ದೇನೆ. ಕಾರಣ ಈಗ ನಮ್ಮ ಇಂಡಿಯಾ ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ನಾವು ಅನೇಕ ಯೋಜನೆಗಳನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಆ ಯೋಜನೆಗಳೆಲ್ಲ ಎಷ್ಟು ಅಗತ್ಯವೋ, ಎಷ್ಟು ಪ್ರಾಮುಖ್ಯವೋ, ಈ Family planning ಸಹ ಅಷ್ಟೇ ಪ್ರಾಮುಖ್ಯ, ಅಷ್ಟೇ ಅಗತ್ಯವೆಂದು ಕಂಡುಬರುತ್ತದೆ. ಇದನ್ನು ಇನ್ನೂ ಸ್ವಲ್ಪ ದೀರ್ಘವಾಗಿ ಪ್ರಸ್ತಾಪಮಾಡಬೇಕೆಂದು ಯೋಚಿಸುತ್ತಿದ್ದೇನೆ. ಈ ಸಂಬಂಧದಲ್ಲಿ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಆಸ್ಪತ್ರೆಗಳಲ್ಲಿ ವಾರಕ್ಕೆ ಒಂದೆರಡು ದಿವಸ Family Planning ವಿಚಾರದಲ್ಲಿ ಅಲ್ಲಿಗೆ ಬಂದವರಿಗೆಲ್ಲ ತಿಳಿವಳಿಕೆ ಕೊಡುವ ಬಗ್ಗೆ ವ್ಯವಸ್ಥೆ ಮಾಡಿದ್ದಾರೆಂದು ತಿಳಿದು ಬಂದಿದೆ. ಆದರೆ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿರತಕ್ಕ ಜನರು ವಿದ್ಯಾವಂತರು. ಇವರಿಗೆ Family Planning ವಿಚಾರದಲ್ಲಿ ನಂಬಿಕೆ ಇದೆ, ಮನವರಿಕೆಯಾಗಿದೆ. ಆದಕಾರಣದಿಂದ ಅವರು ಆಗಾಗ್ಗೆ ಹೋಗಿ cousult ಮಾಡಿ, ಅನೇಕರು ಅದನ್ನು ಆಚರಣೆಯಲ್ಲಿ ಸಹ ತರುತ್ತಿದ್ದಾರೆ. ಆದರೆ ಬಹು ಹೆಚ್ಚಾಗಿ ಪ್ರಜಾಸಂಖ್ಯೆ ಬೆಳೆಯುತ್ತಿರುವುದು ಹಳ್ಳಿಗಾಡಿನ ಭಾಗದಲ್ಲಿ. ಅಲ್ಲಿರತಕ್ಕ ಜನಗಳಿಗೆ ಇದರ ಅವಶ್ಯಕತೆ ಅಷ್ಟು ಚೆನ್ನಾಗಿ ಮನದಟ್ಟಾಗಿಲ್ಲ. ಜೊತೆಗೆ ಈ ಭಾವನೆ ಅವರಿಗೆ ಮನಸ್ಸಿಗೆ ಹೋಗುವುದಿಲ್ಲ. ಈ ರೀತಿ ಇರತಕ್ಕ ಹಳ್ಳಿಗಾಡಿನ ಪ್ರಾಂತದಲ್ಲಿ Family Planning ವಿಷಯದ ಪ್ರಚಾರ ಹೆಚ್ಚು ಅಗತ್ಯವಾಗಿದೆ, ಮತ್ತು ಇದನ್ನು ಜಾರಿಗೆ ತರತಕ್ಕ ಅವಶ್ಯಕತೆ ಇದೆ. ಈ ಕಾರಣದಿಂದ ಹಳ್ಳಿಗಾಡಿನ ಕಡೆ ಇರುವ ಎಲ್ಲ L.F. ಡಿಸ್ಪೆನ್ಸರಿಗಳಲ್ಲಿಯೂ ಸಹ ಈ ಬಗ್ಗೆ ಸಾಕಷ್ಟು ಪ್ರಚಾರವನ್ನು ಕೈಗೊಳ್ಳುವುದಕ್ಕೆ ಜರೂರಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಇದಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ. ಇದರ ಪ್ರಚಾರದ ಬಗ್ಗೆ ಎಷ್ಟು ಗಮನ ಕೊಡಬೇಕೋ ಅಷ್ಟನ್ನು ಕೊಟ್ಟರೆ ಮಾತ್ರ ಸಾಕಾಗಿದೆ. ಆದುದರಿಂದ ಈ ಯೋಜನೆಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಮತ್ತು ಚುರುಕಾಗಿ ಇದನ್ನು ಪ್ರಚಾರ ಮಾಡುವುದಕ್ಕೆ ಸಾಕಾದಷ್ಟು ಅವಶ್ಯಕತೆ ಇದೆ ಎಂಬುದನ್ನು ಸರ್ಕಾರದವರು ಮನಗಂಡು ಹೆಚ್ಚು ಪ್ರಭಾವಯುತರಾಗಿ ಮಾಡುವುದು ಅತ್ಯಾವಶ್ಯಕವಾಗಿದೆ. ಇದನ್ನು ಎಲ್ಲ ಭಾಗಗಳಲ್ಲಿಯೂ ಜಾರಿಗೆ ತರಬೇಕೆಂದು ಸೂಚನೆ ಕೊಡುತ್ತೇನೆ.

ಎರಡನೆಯದಾಗಿ ಎಲ್ಲ ಆಸ್ಪತ್ರೆಗಳಿಗೂ ಬಡಬಗ್ಗರಿಗೋಸ್ಕರ ಮುಫತ್ತಾಗಿ ಔಷಧಿಗಳನ್ನು ಕೊಡಲು ಹಣವನ್ನು ಹಂಚುತ್ತೀರಿ. ಹಾಗೆ ಹಂಚುತ್ತಿರುವುದರ ಅಂಕಿಅಂಶಗಳನ್ನು ನೋಡಿದರೆ ಬಹು ಹೆಚ್ಚು ಭಾಗದ ಹಣವನ್ನು ಮೈಸೂರು, ಬೆಂಗಳೂರು, ಮೊದಲಾದ ದೊಡ್ಡ ಪಟ್ಟಣಗಳಲ್ಲಿರುವ ಆಸ್ಪತ್ರೆಗಳಿಗೆ ಕೊಡುತ್ತಿದ್ದೀರಿ. ಅಲ್ಲಿ ಕಾಯಿಲೆಯವರ ಸಂಖ್ಯೆ ಜಾಸ್ತಿ ಅಲ್ಲಿ ಹೆಚ್ಚಾಗಿ ಕೊಡಬೇಕಾದದ್ದು ನ್ಯಾಯ. ಆದರೆ ಒಂದು ತತ್ವದಮೇಲೆ, ಒಂದು ಆದಾರದಮೇಲೆ ಕೊಡುತ್ತಿಲ್ಲವೆಂದು ಕಂಡುಬಂದಿದೆ. ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಇರುವ ಆಸ್ಪತ್ರೆಗಳಿಗೆ ಎಷ್ಟು ಜನ ಬಡಬಗ್ಗರು ಬರುತ್ತಾರೆ, ಇತರ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಎಷ್ಟು ಜನ ಬರುತ್ತಾರೆಂಬ ಲೆಕ್ಕ ತೆಗೆದುಕೊಂಡು, ಆಯಾ ಆಸ್ಪತ್ರೆಗಳಿಗೆ ಬರತಕ್ಕ ಬಡಬಗ್ಗರ ದಾಮಾಷಾ (proportion) ಪ್ರಕಾರ ಹಣವನ್ನು ಹಂಚಿದರೆ ಯಾರೂ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ರೀತಿಯಾದ ತತ್ವವನ್ನನುಸರಿಸದೆ ಮನಸ್ಸಿಗೆ ಬಂದ ರೀತಿಯಲ್ಲಿ ಹಣವನ್ನು ಕೊಡುತ್ತ ಇರುವುದರಿಂದ ಕೆಲವು ಡಿಸ್ಟ್ರಿಕ್ ಹೆಡ್‌ಕ್ವಾರ್ಟರುಗಳಲ್ಲಿರುವ ಆಸ್ಪತ್ರೆಗೆ ಬರತಕ್ಕ ಬಡವರಿಗೆ ಮುಫತ್ತಾಗಿ ಔಷಧಿಗಳನ್ನು ಕೊಡುವುದಕ್ಕೆ ಅವಕಾಶವಿಲ್ಲದೆ. ಕಾಯಿಲೆ ವಾಸಿಯಾಗದೆ ವಾಪಸು ಹೋಗತಕ್ಕ ಸನ್ನಿವೇಶಗಳಿವೆ. ಆದುದರಿಂದ ಈ ಹಣದ ಹಂಚಿಕೆ ವಿಚಾರದಲ್ಲಿ ನಾನು ಮೇಲೆ ಹೇಳಿದ ಸಲಹೆಯಂತೆ ಮಾಡುತ್ತಾರೆಂದು ನಂಬಿದ್ದೇನೆ.

ಒಂದೇ ಒಂದು ಸಣ್ಣ ಸೂಚನೆ. ಇತ್ತೀಚೆಗೆ ಎಲ್ಲ ಮುನಿಸಿಪಾಲಿಟಿಗಳಿಗೂ ಡಿ.ಡಿ.ಟಿ. ಸ್ಪ್ರೇ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಅದೇ ರೀತಿ ಹಾಸನದಲ್ಲಿಯೂ ಕೂಡ ವ್ಯವಸ್ಥೆ ಮಾಡಿದ್ದೀರಿ. ಆದರೆ ಡಿ.ಡಿ.ಟಿ. ಮನೆಗಳಿಗೆ ಹೊಡೆಯುವುದರಿಂದ ಮಾತ್ರವೇ ಸೊಳ್ಳೆಗಳು ಸಂಪೂರ್ಣವಾಗಿ ಹೋಗುವುದಿಲ್ಲ. ಸೊಳ್ಳೆಗಳು ಎಲ್ಲಿ ಮನೆ ಮಾಡಿಕೊಂಡು ಮರಿ (ಬ್ರೀಡ್) ಮಾಡುತ್ತವೆ ಅಂಥ ಸ್ಥಳಗಳಲ್ಲಿ ಸೊಳ್ಳೆಯ ಮರಿಗಳನ್ನು ಹೋಗಲಾಡಿಸತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ಡಿ.ಡಿ.ಟಿ. ಸ್ಪ್ರೇ ಮಾಡುವುದು ಯಶಸ್ವಿಯಾಗುವುದಿಲ್ಲ ; ಮತ್ತು ಸ್ಪ್ರೇ ಮಾಡಿದ 8-10 ದಿವಸದ ಮೇಲೆ ಸೊಳ್ಳೆಗಳು ಪುನಃ ಬರುತ್ತವೆ. ಆದುದರಿಂದ ಬ್ರೀಡಿಂಗ್ ಆಗುವ ಸ್ಥಳಗಳಲ್ಲೆಲ್ಲ ಸೊಳ್ಳೆಗಳನ್ನು ನಾಶಮಾಡಲು ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಸೊಳ್ಳೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ಕೊಡುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಆಸ್ಪತ್ರೆಗಳ ವಿಚಾರದಲ್ಲಿ ಹೇಳಬೇಕಾಗಿದ್ದರೆ ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಲ್ಲಿನ ದುರವಸ್ಥೆಯನ್ನು ಹೇಳಲು ಸಾಧ್ಯವಿಲ್ಲ. ಈ ಆಸ್ಪತ್ರೆಗಳಿಗೆ ಸಾಕಾದಷ್ಟು ಪ್ರಮಾಣದಲ್ಲಿ ಔಷಧಿಗಳು ಬರುತ್ತಿಲ್ಲ. ಡಿಸ್ಪೆನ್ಸರಿಗಳಲ್ಲಿಯೂ ಮತ್ತು ಜಿಲ್ಲಾ ಬೋರ್ಡ್ ಆಸ್ಪತ್ರೆಗಳಲ್ಲಿಯೂ ಒಂದೇ ತೆರನಾದ ಪರಿಸ್ಥಿತಿ ಇದೆ. ಒಂದು ವಾರಕ್ಕೆ ಆಗುವಷ್ಟು ಔಷಧಿಗಳು ಎಂದು ಕೊಟ್ಟಿರುವುದು ಮೂರು ದಿನಗಳಿಗೆ ಸಾಕಾಗುವುದಿಲ್ಲ. ಈಗ ಎಲ್ಲೆಲ್ಲೂ ಮಲೇರಿಯಾ ಕಾಯಿಲೆ ಪ್ರಾರಂಭವಾಗಿದೆ. ಇತ್ತೀಚೆಗೆ ಉಪಯೋಗಿಸುತ್ತಿರುವ ಡಿ.ಡಿ.ಟಿ.ಯಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಪುನಃ ಮಲೇರಿಯಾ ಕಾಯಿಲೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಉಪಯೋಗಿಸುತ್ತಿದ್ದ ಡಿ.ಡಿ.ಟಿ. ಬಹಳ ಚೆನ್ನಾಗಿತ್ತು. ಇಷ್ಟು ದುಡ್ಡು ಕೊಟ್ಟು ತರುವಾಗ ಒಳ್ಳೆಯ ಡಿ.ಡಿ.ಟಿ. ಪುಡಿಯನ್ನು ತರಿಸಬೇಕು. ಇಷ್ಟೊಂದು ಜನ ಡಾಕ್ಟರುಗಳು, ಹೆಲ್ತ್ ಆಫೀಸರುಗಳು ಇರುವಾಗ ಈ ಡಿ.ಡಿ.ಟಿ. ಒಳ್ಳೆಯದೇ ಕೆಟ್ಟದ್ದೇ ಎಂದು ಅಜಮಾಯಿಸಿ ಮಾಡಿ ತರಿಸಿ ನಂತರ ಉಪಯೋಗಿಸಬೇಕು. ಚೆನ್ನಾಗಿರುವ ಡಿ.ಡಿ.ಟಿ.ಯನ್ನು

(ಶ್ರೀ ಶಿವನಂಜೇಗೌಡ.)

ತರಿಸಿ ಉಪಯೋಗಿಸದೆ ಹೋದರೆ ಸುಮ್ಮನೆ ಹಣ ಖರ್ಚು, ಮತ್ತು ಹತ್ತಾರು ಜನ ಸಿಬ್ಬಂದಿ ಇಟ್ಟು ಕೆಲಸ ಮಾಡಿದ್ದಕ್ಕೆ ಏನು ಫಲ ಬಂದಹಾಗಾಯಿತು. ಈಗ ಮಾರ್ಚಿ ತಿಂಗಳು. ಮಲೇರಿಯಾ ಕಾಯಿಲೆ ಹೆಚ್ಚುವುದು ಈಗಲೇ. ಇದೇ ಕಾಲದಲ್ಲಿ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಆದುದರಿಂದ ಈ ವಿಚಾರದ ಕಡೆ ಸರ್ಕಾರದವರು ತಕ್ಷಣ ಗಮನ ಕೊಡಬೇಕು.

ಡಾಕ್ಟರುಗಳಿಗೆ ಮತ್ತು ಕಾಂಪೌಂಡರುಗಳಿಗೆ ಹಳ್ಳಿಗಾಡಿನಲ್ಲಿ ವಾಸಕ್ಕೆ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಇವರಿಗೆ ವಾಸದ ಮನೆಗಳಿಲ್ಲದೆ ಬಹಳ ತೊಂದರೆಯಾಗಿದೆ. ವಾಸ ಮಾಡಲು ಇವರುಗಳು ಪಟ್ಟಣಕ್ಕೆ ಹೋಗಬೇಕು. ಅಲ್ಲಿಂದ ಬಂದು ಹಳ್ಳಿಯಲ್ಲಿ ಕೆಲಸ ಮಾಡಬೇಕು. ಆದುದರಿಂದ ಸರ್ಕಾರದವರು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಡಾಕ್ಟರುಗಳಿಗೆ ಕಾಂಪೌಂಡರುಗಳಿಗೆ ಮತ್ತು ಇತರ ಸಿಬ್ಬಂದಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ.

ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನ ಬಗ್ಗೆ ಒಂದೆರಡು ಮಾತು. ಆಯುರ್ವೇದ ಶಿಕ್ಷಣಕ್ಕೆ ಮೈಸೂರು ಚೆನ್ನಾಗಿದೆ ಎಂದು ಒಬ್ಬ ಮಹಾನುಭಾವರು ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿದರು. ಅದು ಆಗಿನಿಂದ ಬೆಳೆದುಕೊಂಡು ಬಂದು ಅಭಿವೃದ್ಧಿಯಾಗಿ ಈಗ ಎಲ್ಲರೂ ಆಯುರ್ವೇದಕ್ಕೆ ಪ್ರಾಶಸ್ತ್ಯ ಕೊಡುತ್ತ ಅದರಲ್ಲಿ ಪರಿಶ್ರಮ ಹೊಂದಬೇಕು ಎಂದು ಬಹಳ ಜನ ಆಕಾಂಕ್ಷೆ ಪಡುತ್ತಿದ್ದಾರೆ. ಕಳೆದ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ಬದಲಾಯಿಸುವುದಿಲ್ಲವೆಂದು ಮಂತ್ರಿಗಳು ಹೇಳಿದ್ದರು. ಅಲ್ಲದೆ ನಾವು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡಾಗ ಕಾಲೇಜನ್ನು ಅಭಿವೃದ್ಧಿಪಡಿಸುತ್ತೇವೆಂದು ಸಹ ವಾಗ್ದಾನ ಮಾಡಿದ್ದವರು ಈಗಾಗಲೇ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ತರಬೇಕೆಂದು ಹೇಳುವುದು ಯಾವ ನ್ಯಾಯ ? ಒಳ್ಳೆಯ ಸರ್ಕಾರವೆಂದು ಜನರೆಲ್ಲ ಹೇಳುತ್ತ ಇರುವಾಗ ಈ ರೀತಿಯ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ನೋಡಿದರೆ ಯಾಕೆ ಹೀಗಾಯಿತು ಎಂದು ಆಶ್ಚರ್ಯವಾಗುತ್ತದೆ. ಮೈಸೂರು ಒಳ್ಳೆಯ ಪಟ್ಟಣ. ಬೆಂಗಳೂರು ಪಟ್ಟಣ ಕೆಟ್ಟದ್ದು ಎಂದು ಹೇಳುವುದಿಲ್ಲ. ಬೆಂಗಳೂರಿಗೆ ಬೇಕಾದರೆ ಬೇರೆ ಒಂದು ಕಾಲೇಜನ್ನು ಮಾಡಿಕೊಳ್ಳಿ. ಅದು ಬಿಟ್ಟು ಇರುವ ಕಾಲೇಜನ್ನು ಬದಲಾಯಿಸುವ ಗೋಜಿಗೆ ಯಾಕೆ ಹೋಗಬೇಕು? ಮೈಸೂರಿನಲ್ಲಿ ಈಗಿರುವ ಕಟ್ಟಡದಲ್ಲಿ ಸ್ಥಳಾವಕಾಶವಿಲ್ಲದೆ ಇದ್ದರೆ, ಪಕ್ಕದಲ್ಲಿಯೇ ರೈಲ್ವೆ ಆಫೀಸಿನ ಕಟ್ಟಡವಿದೆ. ಅದರಲ್ಲಿ ಎಷ್ಟೋ ಭಾಗ ಖಾಲಿ ಇದೆ. ಈಗಿರುವ ಕಟ್ಟಡದಲ್ಲಿಯೇ 100 ಹುಡುಗರಿಗೆ ವಿದ್ಯೆಯನ್ನು ಹೇಳಿಕೊಡುತ್ತಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳಿಗೆಲ್ಲ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿಯೇ ಉಳಿಸಿಕೊಡಬೇಕು. ಕಾಲೇಜನ್ನೇನಾದರೂ ಬೆಂಗಳೂರಿಗೆ ಬದಲಾಯಿಸಿದರೆ ಎಷ್ಟೋ ವಿದ್ಯಾರ್ಥಿಗಳಿಗೆ ಓದಲು ಬಹಳ ಅನಾನುಕೂಲವಾಗುತ್ತದೆ. ಹೋದವರ್ಷ ಕೊಟ್ಟ ವಚನವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಯಾತಕ್ಕೆ ಸರ್ಕಾರದವರು ಹೀಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿಲ್ಲವೋ ಗೊತ್ತಿಲ್ಲ. ಇದಕ್ಕೆ ಔಷಧಿ ಕೊಡುವವರು ಯಾರು ? ಇದಕ್ಕೆ ಜನಗಳೇ ಔಷಧಿ ಕೊಡಬೇಕು. ಹತ್ತಾರು ಲಕ್ಷ ಜನ ಆಯುರ್ವೇದ ಕಾಲೇಜು ಮೈಸೂರಿನಲ್ಲಿಯೇ ಇರಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ರೈಲ್ವೆ ಆಫೀಸು ಕಟ್ಟಡಗಳನ್ನು ಉಪಯೋಗಿಸಿಕೊಂಡರೆ 200-300 ವಿದ್ಯಾರ್ಥಿಗಳಿಗೆ ಬೇಕಾದರೂ ಅವಕಾಶವಾಗುತ್ತದೆ ಲಕ್ಷಾಂತರ ರೂಪಾಯಿಗಳ ಖರ್ಚಿನಲ್ಲಿ ಬೆಂಗಳೂರಿನಲ್ಲಿ ಒಂದು ಹೊಸ ಕಾಲೇಜು ಕಟ್ಟಡವನ್ನು ಕಟ್ಟುವುದಕ್ಕೆ ಬದಲು ಈಗ ಇರುವಂತೆ ಮೈಸೂರಿನಲ್ಲಿಯೇ ಉಳಿಸಿದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ.

ಒಟ್ಟಿನಲ್ಲಿ ಹಳ್ಳಿಗಾಡಿನಲ್ಲಿರುವ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳನ್ನು ಒದಗಿಸಿಕೊಡಬೇಕು ; ಡಾಕ್ಟರುಗಳು ಕಾಂಪೌಂಡರುಗಳು ಮುಂತಾದ ಸಿಬ್ಬಂದಿಯವರಿಗೆ ಹಳ್ಳಿಗಳಲ್ಲಿ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕು. ಡಿ.ಡಿ.ಟಿ. ಸ್ಪ್ರೇ ಮಾಡುವಾಗ ಉತ್ತಮವಾದದ್ದನ್ನು ಮತ್ತು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿಯೇ ಉಳಿಸಿಕೊಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

*Sri H. C. LINGA REDDY (Malur).—Sir, I rise to support the Demands. While so doing, I would like to bring certain facts to the notice of the Government. As many as eight members have tabled cut-motions about the necessity for making provisions of one lakh of rupees for Dr. Modi's camp which he has been carrying on in the State for the last few years. It is well known that Dr. Modi has been rendering yeoman service to the State in the matter of eradication of blindness and even the Government of India have recognised his services and have been pleased to confer the title of PADMASREE on him. When the Government of India have recognised his services, it is unfortunate that no provision has been made by the State for the treatment of eye defect which Dr. Modi has been doing in this State for the last three years. It is very unfortunate that numerous people suffer from this eye disease. Many people are blind. They have various kinds of defects.

Sir, we have been spending a crore and seventy five lakhs for Medical and Public Health. To make a provision of a lakh of rupees for Dr. Modi's camp should not be a difficult thing to Government, when we see the service that is being rendered by him to the country. He does all this without any remuneration. The special feature of his service is, he goes to the very doors of the patient. He travels through various districts and taluks and gets

the patients to the camp for treatment. It is very necessary on the part of our Government to give him as much help as possible to Dr. Modi.

Next, Sir, we have been urging upon Government, time and again, to open mobile dispensaries in each taluk with all the medical facilities so that it may save starting of dispensaries in taluk headquarters and districts. I consider, Sir, instead of having a number of hospitals in hobli headquarters, if there is a mobile van fully equipped, in each hobli headquarter, better service could be rendered because medical treatment would be taken to the very doors of the patients. Our village flock is illiterate and ignorant. They do not know that they should go to the hobli headquarter when they are ill and consult the Doctor and take treatment. When such is the condition of our society, instead of having hospitals in each hobli headquarter, it is far better and useful to have mobile hospitals. As my friend Sri G. Puttaswamy pointed out, the mobile vans in several places are not in good condition. For many of them repairs have got to be effected. Our Road Transport Department is working so well and the buses that go out of order are so speedily repaired and made fit to ply. I do not know where the mobile vans will have to undergo repairs when they go out of order. The mobile van in Chintamani was out of repair. As Sri G. Puttaswamy pointed out, that is the fate of many such vans. I do not know why they should not be got repaired expeditiously and made fit for service. The patients in the villages would be waiting for the van expecting that it would come and when the van does not come there, they will have to return disappointed. When the van is out of order and when it could not be taken to the scheduled place, at least intimation could be sent to that place so that they may not be made to wait unnecessarily. In the last Budget Government were saying that the L.F. hospitals would be converted into Health Units. If that is done, both the curative as well as preventive aspect could be tackled. With these Health Units and the Mobile Hospitals better medical service could be rendered.

About the hospital in Tekal Hobli, the Health Minister was pleased to sanction; but nothing has been done so far. There is a building belonging to Government. Recently, myself, the Medical Officer and the Executive Engineer visited the place. I was told that an estimate for Rs. 3,200 had been prepared. I request Government to sanction that amount and effect the repairs and start a hospital there.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ—ಅನುಸೂಚಿತ ಜಾತಿಗಳು).—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸೋಷಿಯಲ್ ವೆಲ್‌ಫೇರ್ ಸೆಂಟರ್ ಒಂದು ಪ್ರಾರಂಭವಾಗಿದೆ. ಇದಕ್ಕೆ ಸುಮಾರು 42 ಹಳ್ಳಿಗಳು ಸೇರಿವೆ. ಅಲ್ಲಿಯ ಜನರಿಗೆ ಅನುಕೂಲವೊದಗಿಸಲು ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆ ಡಾಕ್ಟರುಗಳು ಮತ್ತು ಖಾಸಗಿ ಡಾಕ್ಟರುಗಳು ಸಹ ವಾರಕ್ಕೆ ಎರಡು ಮೂರು ದಿನ ಬಂದು ರೋಗಿಗಳನ್ನು ಪರೀಕ್ಷೆಮಾಡಿ ಚಿಕಿತ್ಸೆ ಮಾಡುತ್ತಿದ್ದಾರೆ. ಆದರೆ ಅವರಿಗೆ ಸ್ವಂತವಾಗಿ ಕೈಯಿಂದ ಖರ್ಚಿಟ್ಟು ಔಷಧಕೊಟ್ಟು ಉಪಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಸರ್ಕಾರದವರು ಅಲ್ಲಿಗೆ ಹೋಗುವ ಡಾಕ್ಟರುಗಳಿಗೆ ಅಲ್ಲಿ ಹೋಗಿ ಸೇವೆ ಮಾಡುವುದಕ್ಕೆ ಅವಕಾಶಕೊಡಲು ಸುಮಾರು ಒಂದು ಲಕ್ಷ ರೂಪಾಯಿಗಳನ್ನಾದರೂ ಆ ಸೆಂಟರಿನಲ್ಲಿ ಒಂದು ಕಡೆ ಠೇವಣಿಯಾಗಿಟ್ಟು ಔಷಧಗಳನ್ನು ಒದಗಿಸಬೇಕು, ಅಲ್ಲದೆ ಒಂದು ವ್ಯಾನನ್ನು ಸಹ ಅವರಿಗೆ ಒದಗಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ದೇವನಹಳ್ಳಿ ತಾಲ್ಲೂಕು ವಿದ್ಯಾನಗರದಲ್ಲಿ ಒಂದು ಉಪಾಧ್ಯಾಯರ ಶಿಕ್ಷಣ ಕೇಂದ್ರವಿದೆ. ಅದು ಎಲ್ಲ ಕೇಂದ್ರಗಳಿಗಿಂತಲೂ ಬಹಳ ದೊಡ್ಡದಾಗಿದೆ. ಅಲ್ಲಿ ಬಹಳ ವರ್ಷಗಳಿಂದ ದಿನದಿನಕ್ಕೆ ಜನಸಂಖ್ಯೆ ಬೆಳೆಯುತ್ತಿದೆ. ಆದ್ದರಿಂದ ಅಲ್ಲಿಗೆ ಒಂದು ದೊಡ್ಡ ಆಸ್ಪತ್ರೆ ಬೇಕಾಗಿದೆ. ಈಗಿರುವ ಅಸ್ಪತ್ರೆಯಲ್ಲಿ ಔಷದಗಳನ್ನೊದಗಿಸಿರುವುದು ಸಾಲದು. ಬಹಳ ದಿವಸಗಳ ಹಿಂದಿದ್ದ ಸರ್ಜಿಕಲ್ ಇನ್‌ಸ್ಟ್ರುಮೆಂಟ್ಸ್ ಹಳೆಯವಾಗಿ ಈಗ ಉಪಯೋಗಕ್ಕೆ ಬಾರದಂತಾಗಿವೆ. ಆದ್ದರಿಂದ ಜಾಗ್ರತೆ ಇಲ್ಲಿಗೆ ಬೇಕಾದ ಸಹಾಯ ನೀಡಬೇಕು.

ಅಲ್ಲದೆ ದೇವನಹಳ್ಳಿ ತಾಲ್ಲೂಕು ಬಾಗಲೂರಿನಲ್ಲಿ ಒಂದು ಆಯುರ್ವೇದಿಕ್ ಡಿಸ್ಪೆನ್ಸರಿಯಿದೆ. ಅಲ್ಲಿ ಒಬ್ಬ ಸೂಲಗಿತ್ತಿಯ ಆವಶ್ಯಕತೆ ಬಹಳವಾಗಿದೆ. ಆ ಪ್ರದೇಶಕ್ಕೆ ಒಬ್ಬ ಸೂಲಗಿತ್ತಿಯನ್ನ ಕೂಡಲೇ ನೇಮಕಮಾಡಬೇಕು.

ಬೆಟ್ಟಹಲಸೂರಿಗೆ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಬೇಕು. ಅಲ್ಲಿ ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸ, ಅಡಲ್ಟ್ ಎಜುಕೇಷನ್‌ನವರು ನಡೆಸುತ್ತಿದ್ದಾರೆ. ಅಲ್ಲಿ ಜನಸಂಖ್ಯೆ ಹೆಚ್ಚಿದೆ. ಅಲ್ಲದೆ ಹೊಸದಾಗಿ ರೋಗಗಳು ಹೆಚ್ಚಿ ಜನರು ನರಳುತ್ತಿದ್ದಾರೆ. ಆದ್ದರಿಂದ ಆ ಸ್ಥಳಕ್ಕೆ ಹೊಸದಾಗಿ ಒಂದು ಲೋಕಲ್ ಫಂಡ್ ಆಸ್ಪತ್ರೆಯನ್ನು ಕಮ್ಯೂನಿಟಿ ಸೆಂಟರ್‌ಗೆ ಕೊಡಬೇಕು. ಅದು ಸಾಧ್ಯವಾಗದಿದ್ದರೆ ಒಂದು ಆಯುರ್ವೇದಿಕ್ ಆಸ್ಪತ್ರೆಯನ್ನಾದರೂ ಕೊಡಬೇಕು.

(ಶ್ರೀ ಆರ್. ಮುನಿಸ್ವಾಮಯ್ಯ.)

ಬೆಂಗಳೂರು ಕಸಬಾ ಹೋಬಳಿಯಲ್ಲಿ ದೇವರ ಜೀವನಹಳ್ಳಿಯೆಂಬ ಗ್ರಾಮವಿದೆ. ಮಾನ್ಯ ಆರೋಗ್ಯ ಮಂತ್ರಿಗಳೂ ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಜನರು ಅಲ್ಲಿ ಹಳ್ಳಕೊಳ್ಳ ಪ್ರದೇಶದಲ್ಲಿ ಹುಳಗಳಂತೆ ವಾಸ ಮಾಡುತ್ತಿದ್ದಾರೆ. ಅಲ್ಲಿಗೆ ಒಂದು ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕು.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾರ್ಖಾನೆಗಳು ಪ್ರಾರಂಭವಾಗಿ ಆಂಧ್ರ ಮತ್ತು ತಮಿಳುನಾಡಿನಿಂದ ಅನೇಕ ಜನರು, ಬೇಕಾದಷ್ಟು ಕೂಲಿಗಳು ಬಂದು ಸೇರಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಜನಸಂಖ್ಯೆ ಒಂದಕ್ಕೆ ಐದರಷ್ಟು ಹೆಚ್ಚಾಗಿದೆ. ಶ್ರೀ ಬೈರೇಗೌಡರು ಹೇಳಿದಹಾಗೆ ಅವರೊಂದಿಗೆ ಲೆಕ್ಕವಿಲ್ಲದಷ್ಟು ಮಕ್ಕಳಿವೆ. ಅವರಿಗೆ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಒಬ್ಬ ಹೆಲ್ತ್ ಇನ್ಸ್‌ಪೆಕ್ಟರನ್ನಾದರೂ ಕೊಡಬೇಕು.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ಸಂಸ್ಥಾನಾಮಳೆಯಿರತಕ್ಕ ಆಸ್ಪತ್ರೆಗಳಿಗೆ ಅಗತ್ಯವಾಗಿ ಬೇಕಾದಂಥ ಸಾಮಾನುಗಳನ್ನು ಕೂಡ ಸರ್ಕಾರದವರು ಸರಿಯಾಗಿ ಒದಗಿಸುತ್ತಿಲ್ಲ. ನಮ್ಮ ತಿಪಟೂರಿನಲ್ಲೊಂದು ಹೆರಿಗೆ ಆಸ್ಪತ್ರೆ ಇದೆ. ಅಲ್ಲಿ ಸಾಕಷ್ಟು ಹಾಸಿಗೆಗಳಿಲ್ಲ. ಈಗಲಾದರೂ ಸರ್ಕಾರದವರು ಆ ಹೆರಿಗೆ ಆಸ್ಪತ್ರೆಗೆ ಹೆಚ್ಚಿನ ಬೆಡ್ಡುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಆ ತಿಪಟೂರು ಟೌನಿಗೊಂದು ಜನರಲ್ ಆಸ್ಪತ್ರೆಯನ್ನು ಕೊಡಬೇಕೆಂದು ಅಲ್ಲಿನ ಪುರಜನರೂ ಮತ್ತು ನಾನೂ ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಆದರೆ ಆ ವಿಚಾರಕ್ಕೆ ಸರ್ಕಾರದವರೇನೂ ಗಮನ ಕೊಟ್ಟ ಹಾಗೆ ಕಂಡುಬರುವುದಿಲ್ಲ. ಸರ್ಕಾರದವರು ಅಲ್ಲಿಗೊಂದು ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡುವ ಪಕ್ಷಕ್ಕೆ ಅಲ್ಲಿಯ ಮುನಿಸಿಪಾಲಿಟಿಯವರು 60 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಲು ಒಪ್ಪಿಕೊಂಡಿರುತ್ತಾರೆ. ಹಾಗೇ ಅಲ್ಲಿಯ ಸಾರ್ವಜನಿಕರಿಂದ 40 ಸಾವಿರ ರೂಪಾಯಿಗಳ ಫಂಡನ್ನು ವಸೂಲ್ಮಾಡಿ ಒಟ್ಟು ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಲು ಅಲ್ಲಿಯ ಜನರು ಮುಂದೆ ಬಂದಿದ್ದಾರೆ. ಆದರೆ ಸರ್ಕಾರದವರು ಇಲ್ಲಿಯವರೆಗೂ ಆ ವಿಚಾರವಾಗಿ ಯಾವ ಒಂದು ಭರವಸೆಯನ್ನೂ ಕೊಟ್ಟಿರುವುದಿಲ್ಲ. ಈ ದಿವಸ ಸರ್ಕಾರದವರು ಆ ಒಂದು ಲಕ್ಷಕ್ಕೆ ಮೇಲ್ಪಟ್ಟು ಬರತಕ್ಕಂಥ ಖರ್ಚು ವೆಚ್ಚಗಳನ್ನು ವಹಿಸಿಕೊಳ್ಳುವುದಕ್ಕೆ ತಯಾರಾಗಿದ್ದೇವೆಂದು ಸರ್ಕಾರದವರು ಒಂದು ಭರವಸೆ ಕೊಟ್ಟರೆ ಆ ಟೌನಿನವರು ಈಗಲೂ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಲು ಸಿದ್ಧವಾಗಿರುತ್ತಾರೆ. 15 ಸಾವಿರ ರೂಪಾಯಿಗಳ ಬೆಲೆಬಾಳತಕ್ಕಂಥ ಒಂದು ನಿವೇಶನವನ್ನೂ ಸಹ ಇದಕ್ಕಾಗಿ ಕೊಂಡು ರಿಜರ್ವ್ ಮಾಡಿಡಲಾಗಿದೆ. ಆ ತಿಪಟೂರು ಟೌನ್ ಹದಿಮೂರು ಸಾವಿರ ಪ್ರಜಾ ಸಂಖ್ಯೆಯಿರತಕ್ಕಂಥ ಟೌನ್. ದೊಡ್ಡ ವ್ಯಾಪಾರ ಕೇಂದ್ರ. ಹತ್ತಿರದಲ್ಲಿ 40—50 ಮೈಲಿ ಫಾಸಲೆಯೊಳಗೆ ಮತ್ತೆ ಯಾವ ದೊಡ್ಡ ಆಸ್ಪತ್ರೆಗಳಿರುವುದಿಲ್ಲ. ಆದಕಾರಣ ಈ ಟೌನಿಗೆ ಒಂದು ಜನರಲ್ ಆಸ್ಪತ್ರೆಯನ್ನು ಜಾಗ್ರತೆ ಸರ್ಕಾರದವರು ಮಂಜೂರು ಮಾಡತಕ್ಕದ್ದು ಅಗತ್ಯ. ಈ ಸಂಬಂಧದಲ್ಲಿ ಮೊದಲೇ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಿದ ಪಕ್ಷಕ್ಕೆ, ಸರ್ಕಾರದವರು ತಮ್ಮ ಭಾಗದ ಹಣವನ್ನು ಕೊಡದೆ ನಿಧಾನಮಾಡಿದಲ್ಲಿ ಆಗ ಈ ಹಣ ಮುಳ್ಳಿ ಬೀಳುತ್ತದೆ. ಆಗ ನಮಗೆ ತುಂಬ ಅನಾನುಕೂಲವಾಗುತ್ತದೆ. ಆದಕಾರಣ ಈ ಬಗ್ಗೆ ಸರ್ಕಾರದವರು ಒಂದು ಖಚಿತವಾದಂಥ ಅವರ ಅಭಿಪ್ರಾಯವನ್ನು ತಿಳಿಸಿ ಒಂದು ಭರವಸೆ ಕೊಟ್ಟರೆ ಅವರು ಈ ದಿವಸವೇ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದಕಾರಣ ಈಗಲಾದರೂ ಅಲ್ಲಿಗೆ ಒಂದು ಜನರಲ್ ಆಸ್ಪತ್ರೆಯನ್ನು ಬೇಗ ಮಂಜೂರು ಮಾಡುತ್ತಾರೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri M. PALANIYAPPAN (Ulsoor).—The Medical Department as well as the Public Health Department under the control of the Hon'ble Minister has received elaborate improvements and other things. I must really congratulate the Government for having given him these portfolios. One or two years back we were just complaining that this hospital is bad, that this thing is bad and so on. Now we see that the members are giving a word of praise to the Hon'ble Minister for having brought so many improvements in these departments. I would just add to the improvements that have been made. The Hon'ble Minister was kind enough to give so many good doctors to the Bowring Hospital and I would like to request him just to enlarge the Ophthalmic section and the X-Ray section. That hospital building was constructed to last for only ten years; but it is 22 years since it has been constructed and it needs immediate demolition and re-construction. I would request the Government to sanction at least Rs. 5 lakhs for reconstructing that building.

As Sri Mascarenhas has said, in the case of the old Madras Road T. B. Hospital, there are some people who came forward to make donations. I request the Hon'ble Minister to see that some operation theatres are installed there immediately.

As regards the Lady Curzon Hospital, the Hon'ble Minister was kind enough to post same efficient male doctors there. I know the dearth of Lady doctors. I request him to kindly post the best of the lot he has for that hospital.

I have been repeatedly requesting the Government to send some more doctors for foreign studies, especially ladies. We have hardly one or two F.R.C.S. and after retirement, we will

be having no Lady Surgeons and no Lady Physicians either. So I would urge on the Government to send some more doctors for the study of M.R.C.P., F.R.C.S. and such other courses.

The Malleswaram Hospital for Women and Children needs the attention of the Hon'ble Minister. He was kind enough to grant to that hospital an operation theatre. I would request him to make it a general hospital for women and children in addition to maternity facilities.

Coming to the Public Health Department, I would congratulate him for having the idea of amalgamating both the departments—Medical and Public Health. My only fear is that it should not take much time. He must see that these departments are amalgamated before the 1st of October. The report must be placed before Government and considered as early as possible so that there is no delay, or else more complications would arise after the greater State is formed. Much improvement has been done in the Public Health Department. D.D.T. spraying has been done in all parts of the State. A little more mosquitoes are seen near and round about Bangalore City area. I request the Hon'ble Minister to see that more of D.D.T. spraying and other things are done in these places.

Regarding the shifting of Ayurvedic Hospital, I think the matter has received your attention and if it is shifted to Bangalore and if it is made useful to the people, I will be much obliged.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಸಾಲಿನ ಬಡ್ಜೆಟ್ಟಿನಲ್ಲಿ ಈ ಮೆಡಿಕಲ್ ಬಾಬಿಗೆ ಸ್ವಲ್ಪ ಹೆಚ್ಚು ಹಣವನ್ನು ಕೇಳಿದ್ದಾರೆ. ಆದಕ್ಕೆ ಕಾರಣ ಈಗ ಇರತಕ್ಕಂಥ ಮೆಡಿಕಲ್ ಸ್ಕೂಲನ್ನು ತೆಗೆದುಹಾಕಿ ಆದಕ್ಕೆ ಪ್ರತಿಯಾಗಿ ಒಂದು ಮೆಡಿಕಲ್ ಕಾಲೇಜನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಇದೊಂದು ಸಂತೋಷಪಡತಕ್ಕ ವಿಚಾರ. ಇದನ್ನು ನಾನು ಸ್ವಾಗತಿಸುತ್ತೇನೆ. ಏತಕ್ಕೆಂದರೆ ಈ ದಿವಸ ಈ ರೋಗಿಗಳಿಗೆ ಉಪಚಾರ ಮತ್ತು ರೋಗ ಚಿಕಿತ್ಸೆ ನಡೆಸುವುದರಲ್ಲಿ ಒಬ್ಬ ವೈದ್ಯರಿಗೂ ಇನ್ನೊಬ್ಬ ವೈದ್ಯರಿಗೂ ಅವರಿಗೆ ಕೊಡತಕ್ಕಂಥ ವಿದ್ಯೆಯಲ್ಲಿ ಹೆಚ್ಚು ಕಡಮೆ ಇತ್ತು. ಹಾಗೆ ಹೆಚ್ಚು ಕಡಮೆ ಇರುವಾಗ ಅವರು ಒಂದೇ ಸಮಾನವಾದಂಥ ಟ್ರೀಟ್‌ಮೆಂಟನ್ನು ಕೊಡುವುದಕ್ಕೆ ಅವಕಾಶವಿರಲಿಲ್ಲ. ಆದರೆ ಈ ದಿವಸ ಇವರೆಲ್ಲರಿಗೂ ಒಂದೇ ಮಟ್ಟದ ವಿದ್ಯಾಭ್ಯಾಸವನ್ನು ಕೊಡಲು ವ್ಯವಸ್ಥೆ ಮಾಡಿದ್ದಾರೆ. ಇದು ಅಗತ್ಯವಾಗಿ ಆಗ ಬೇಕಾದ್ದು. ಈ ದಿವಸ ಇದನ್ನು ಮಾಡಲು ಸರ್ಕಾರ ಮುಂದೆ ಬಂದುದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಆದರೆ ಈಗ ಕಾಲೇಜನ್ನು ಪ್ರಾರಂಭಿಸತಕ್ಕ ವೇಳೆಯಲ್ಲೇ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶವನ್ನು ಕೂಡ ಕಲ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದು ಬಹಳ ಒಳ್ಳೆಯದು. ಈಗ ಅಲ್ಲಿ ಕೇವಲ 36 ಬೆಡ್‌ಗಳು ಮಾತ್ರ ಇದ್ದುವು. ಬೆಂಗಳೂರಿನಲ್ಲಿ 136 ಬೆಡ್‌ಗಳಿಗೆ ಅವಕಾಶವಿದೆ. ಆದುದರಿಂದ ಈ ಕಾಲೇಜನ್ನು ಈಗ ಬೆಂಗಳೂರಿಗೆ ವರ್ಗಾಯಿಸುವುದರಿಂದ ಇದರ ಅಭಿವೃದ್ಧಿಗೆ ಒಂದು ಹೆಚ್ಚಿನ ಅವಕಾಶ ದೊರೆತಹಾಗಾಯಿತು. ಈ ಆಯುರ್ವೇದ ಕಾಲೇಜಿಗೆ ಕನಿಷ್ಠಪಕ್ಷ 500 ಬೆಡ್‌ಗಳಾದರೂ ಇರಬೇಕಾಗುತ್ತದೆ. ಅಂಥಾದ್ದರಲ್ಲಿ ಓದತಕ್ಕ ಹುಡುಗರ ಸಂಖ್ಯೆ ಜಾಸ್ತಿಯಿದ್ದು ಅಲ್ಲಿ ಕಡಮೆ ಬೆಡ್‌ಗಳಿದ್ದಾಗ್ಯೂ ಕೇವಲ ಒಂದು ಸ್ಥಳಾಭಿಮಾನಕ್ಕಾಗಿ ಇದನ್ನು ಬದಲಾಯಿಸಕೂಡದೆಂದು ಹೇಳುವುದು ಸರಿಯಾದದ್ದಲ್ಲ. ಇಂಥ ಕಾಲೇಜುಗಳನ್ನು ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಹೆಚ್ಚಾಗಿರುವ ಕಡೆಗಳಲ್ಲಿ ನಡೆಸತಕ್ಕದ್ದು ಅಗತ್ಯ. ನಾವು ನಮ್ಮ ಆಯುರ್ವೇದ ವೈದ್ಯ ಬಾಬಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕಾದದ್ದು ಅತ್ಯಾವಶ್ಯಕ. ಇದಕ್ಕಾಗಿ ಬೇಕಾದಂಥ ವಿಜ್ಞಾನವನ್ನು ಪಡೆಯಲು ಸಂಪೂರ್ಣ ಪ್ರಯತ್ನ ನಡೆಸಬೇಕು. ಇದಕ್ಕಾಗಿ ಸಂಶೋಧನೆಗಳನ್ನೂ ಸಹ ನಡೆಸಬೇಕಾಗಿದೆ. ಈ ಹೊತ್ತು ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ರೀತಿಯ ಉತ್ತಮ ಔಷಧಿಗಳನ್ನು ಜನರು ತಯಾರು ಮಾಡುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ಒಂದು ಕ್ರಮವಾದ ರಿಸರ್ಚಿಗೆ ಒಳಪಡಿಸಿ ಅವುಗಳನ್ನು ಒಂದು ಪೇಟೆಂಟ್ ಮೆಡಿಸನ್‌ಗಳ ಮಟ್ಟಕ್ಕೆ ತರಲು ಅನುಕೂಲವಾಗುವಂತೆ ರಿಸರ್ಚ್ ಕಾರ್ಯಗಳು ನಡೆಯಬೇಕು. ಹೀಗೆ ಮಾಡಿದರೇನೇ ಈ ಆಯುರ್ವೇದ ಔಷಧಿಗಳು ಹೆಚ್ಚು ಹೆಚ್ಚಾಗಿ ಜನರ ಬಳಕೆ ಬರುತ್ತವೆ. ಈ ದಿವಸ ಆ ಇಂಗ್ಲೀಷ್ ಔಷಧಿಗೆ ದುಡ್ಡನ್ನು ತೆರಲು ನಮ್ಮ ಜನರಿಗೆ ಶಕ್ತಿ ಇಲ್ಲ. ಆದಷ್ಟು ಬೇಗ ಪರದೇಶದ ಔಷಧಿಗಳಿಗೆ ದುಡ್ಡನ್ನು ಹಾಕುವುದನ್ನು ನಾವು ತಡೆಗಟ್ಟಬೇಕು. ನಮ್ಮ ಆಯುರ್ವೇದ ಔಷಧಿಗಳಿಗೆ ಉತ್ತೇಜನ ದೊರೆಯುವಂತೆ ಕಾರ್ಯಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಈ ವೈದ್ಯ ಬಾಬಿಗೆ ಸರ್ಕಾರ ಹೆಚ್ಚು ಹಣವನ್ನು ಒದಗಿಸಬೇಕಾದದ್ದು ಅತ್ಯಗತ್ಯ. ಇನ್ನು ಈ ಸರ್ಟಿಫಿಕೇಟುಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಸರ್ಕಾರ ಒಂದು ತಜ್ಞರ ಸಮಿತಿಯನ್ನು ನೇಮಿಸುವುದು ಅತ್ಯಗತ್ಯ.

2-30 P.M.

ಮೂರನೆಯದಾಗಿ ಡಾ. ಮೋದಿಯವರ ವಿಚಾರ ಅನೇಕರು ಹೇಳಿದ್ದಾರೆ. ಅವರು 1954ನೇ ಏಪ್ರಿಲ್‌ನಿಂದ 2,919 ಜನಕ್ಕೆ ಚಿಕಿತ್ಸೆ ಮಾಡಿದ್ದಾರೆ. ನಾನು ಅನೇಕ ಕಡೆ ನೋಡಿದ್ದೇನೆ. ಹಳ್ಳಿಗಳಿಗೆ ಹೋಗಿ ಸ್ವಲ್ಪವೂ ಖರ್ಚಿಲ್ಲದೆ, ಯಾರಿಗೂ ತೊಂದರೆಯಿಲ್ಲದಂತೆ ಬಡಬಗ್ಗರನ್ನೂ ಕರೆಸಿಕೊಂಡು ಅವರೆಲ್ಲರಿಗೂ ಚಿಕಿತ್ಸೆ ಮಾಡತಕ್ಕ ನವೀನ ಪದ್ಧತಿಯನ್ನನುಸರಿಸಿ ಅವರು ನಿಸ್ವಾರ್ಥತೆಯಿಂದ ಕೆಲಸಮಾಡುತ್ತಾ ಇದ್ದಾರೆ. ಅವರಿಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟಿರುವುದು ಬಹಳ ಸಂತೋಷ. ಹಿಂದಿನ ವರ್ಷಗಳಲ್ಲಿ ಅವರಿಗೆ ಸ್ವಲ್ಪ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಈ

(ಶ್ರೀ ಬಿ. ಹುಚ್ಚೇಗೌಡ.)

ವರ್ಷ ಒದಗಿಸದೇಯಿರುವುದು ಸರಿಯಲ್ಲ, ಅದನ್ನು ತಕ್ಷಣ ಒದಗಿಸಿಕೊಡಬೇಕು. ಭಾರತ ಸರ್ಕಾರದವರು ಅವರಿಗೆ ಪದ್ಮಶ್ರೀ ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿರುವುದು ನಮ್ಮ ದೇಶಕ್ಕೆ ಹೆಮ್ಮೆಯ ವಿಷಯವಾಗಿದೆ. ಅಂಥವರಿಗೆ ಕಡ್ಡಾಯವಾಗಿ ಪ್ರೋತ್ಸಾಹ ಕೊಡಬೇಕಾದ್ದು ಅತ್ಯವಶ್ಯಕ ಎಂದು ಹೇಳುತ್ತೇನೆ.

ಮೆಡಿಕಲ್ ಡಿಪಾರ್ಟ್‌ಮೆಂಟು ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಎರಡನ್ನೂ ಒಟ್ಟುಗೂಡಿಸಬೇಕೆಂದು 8-10 ವರ್ಷಗಳಿಂದಲೂ ಒತ್ತಾಯ ಮಾಡುತ್ತಾ ಇದ್ದೇವೆ. ಇಂಡಿಯಾ ಸರ್ಕಾರದವರು ಈ ಸ್ಕೀಂನ್ನು ಅನುಮೋದಿಸಿರುವುದು ಒಂದು ಒಳ್ಳೆಯ ಸಂಗತಿಯೇ ಆಗಿದೆ. ಏಕೆಂದರೆ ಇಬ್ಬರೂ ಕೂಡ ಒಂದೇ ಕೆಲಸ ಮಾಡುವವರು. ಒಬ್ಬರ ಕೆಲಸ ಇನ್ನೊಬ್ಬರು ಮರೆತು ಹೋಗುವುದು ಸರಿಯಲ್ಲ. ಆರೋಗ್ಯ ರಕ್ಷಣೆ ಮತ್ತು ಖಾಯಿಲೆಗಳನ್ನು ತಡೆಗಟ್ಟುವುದು ಇವೆರಡೂ ಒಟ್ಟುಗೂಡಿದರೆ ಅನೇಕ ಖರ್ಚುಗಳು ಕಡಿಮೆಯಾಗುತ್ತವೆ. ಇದಕ್ಕೇ ಒಬ್ಬರು ಅದಕ್ಕೇ ಒಬ್ಬರು ಹೋಗಿ ಗ್ರಾಮಾಂತರಗಳಲ್ಲಿ ಕೆಲಸ ಮಾಡುವುದರಿಂದ ಒಂದೇ ಕೆಲಸವನ್ನು ಇಬ್ಬರು ಮಾಡಿದ್ದ ಹಾಗಾಗುತ್ತದೆ. ಅದೂ ಅಲ್ಲದೆ ಇವರನ್ನೂ ಎಕ್ಸಿಕ್ಯೂಟಿವ್ ಕೆಲಸಕ್ಕೆ ಹಾಕಿದರೆ ಅವರು ಕಲಿತದ್ದು ಕೂಡ ಮರೆತು ಹೋಗುತ್ತದೆ. ಆದ್ದರಿಂದ ಎರಡನ್ನೂ ಒಟ್ಟುಗೂಡಿಸುವುದು ಬಹಳ ಒಳ್ಳೆಯದು. ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಹೇಳುತ್ತೇನೆ. ಸ್ಕಾಲರ್‌ಷಿಪ್ ಕೊಡುವ ವಿಚಾರದಲ್ಲಿ ಸಾಕಾದಷ್ಟು ಪರೀಕ್ಷೆ ಮಾಡಬೇಕು. ನಮ್ಮಲ್ಲಿ ಒಂದು ಸ್ಕಾಲರ್‌ಷಿಪ್ ಕಮ್ಮಿ ಇದೆ. ಯಾರ್ಯಾರನ್ನು ಯಾವ್ಯಾವ ಶಾಸ್ತ್ರಕ್ಕೆ ಓದಲು ಕಳುಹಿಸಬೇಕೆಂಬ ವಿಚಾರದಲ್ಲಿ ಸಲಹೆ ಮಾಡಲು ಆ ಸಮಿತಿಯಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಇಲ್ಲ. ಚಿಕ್ಕ ಮಕ್ಕಳ ವ್ಯಾಧಿಗಳಿಗೆ ಚಿಕಿತ್ಸೆ ಮಾಡಲು ಪ್ರವೀಣರಾದ ಡಾಕ್ಟರು ಬೇಕೆಂದು ಮೂರು ವರ್ಷಗಳಿಂದ ಕೇಳಿದರೂ ಕೂಡ ಇನ್ನೂ ಯಾರನ್ನೂ ಕಳುಹಿಸಿಲ್ಲ. ಏಕೆಂದರೆ ಆ ಕಮಿಟಿಯವರು ಮಾಡಿರತಕ್ಕ ಲಿಸ್ಟ್‌ನಲ್ಲಿ ಯಾರನ್ನೂ ಸೇರಿಸಿಲ್ಲ. ಇಂಥ ರೋಗಕ್ಕೆ ಇಂಥ ಚಿಕಿತ್ಸೆ ಮಾಡಬೇಕು ಎಂಬುದನ್ನು ಕಂಡುಹಿಡಿದು ತಕ್ಕ ವ್ಯವಸ್ಥೆ ಮಾಡಲು ಪ್ರವೀಣರ ಅವಶ್ಯಕತೆ ಬಹಳವಾಗಿದೆ. ಇದಕ್ಕೆ ಹೆಚ್ಚು ಗಮನ ಕೊಟ್ಟಿಲ್ಲ. ಯಾವಯಾವ ಶಾಸ್ತ್ರದಲ್ಲಿ ವ್ಯಾಸಂಗ ಮಾಡಿ ಬರಬೇಕು ಎಂದು ವಿದ್ಯಾರ್ಥಿಗಳನ್ನು ಚುನಾಯಿಸುವ ಸಮಿತಿಯಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್‌ರವರೂ ಕೂಡ ಒಬ್ಬರು ಸದಸ್ಯರಾಗಿದ್ದರೆ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಸರ್ಕಾರದವರ ಗಮನಕ್ಕೆ ತರುತ್ತೇನೆ. ಒಟ್ಟಿನಲ್ಲಿ ಸ್ತ್ರೀಯರು ಮತ್ತು ಮಕ್ಕಳಿಗೆ ಬೇಕಾಗತಕ್ಕ ವೈದ್ಯಕೀಯ ಸಹಾಯವನ್ನು ಹೆಚ್ಚಾಗಿ ಒದಗಿಸಬೇಕು. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯವಾಗಿ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಮೆಟರ್ನಿಟಿ ಆಸ್ಪತ್ರೆ ಮತ್ತು ರೋಗಿಗಳ ಚಿಕಿತ್ಸೆಗೆ ತಕ್ಕ ಆಸ್ಪತ್ರೆಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಈಗ ವೈದ್ಯಕೀಯ ವಿಚಾರದಲ್ಲಿ ಈ ಸಭೆಯ ಅನೇಕ ಮಾನ್ಯ ಸದಸ್ಯರುಗಳು ಹೆಚ್ಚಿನ ನಿಗಾ ವಹಿಸಬೇಕೆಂದು ಸರ್ಕಾರದವರಿಗೆ ಹೇಳಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಈಗ ನಾಲ್ಕು ವರ್ಷದಿಂದಲೂ ಕೂಡ ಈ ವೈದ್ಯ ಸಹಾಯದ ವಿಷಯದಲ್ಲಿ ಬಹಳ ಹೆಚ್ಚಿನ ಅನುಕೂಲಗಳನ್ನು ಗ್ರಾಮಾಂತರಗಳಿಗೂ ಮತ್ತು ಪಟ್ಟಣಗಳಿಗೂ ಒದಗಿಸಿ ಸರ್ಕಾರದವರು ಬಹಳ ಒಳ್ಳೆಯ ಕೀರ್ತಿಯನ್ನು ಗಳಿಸಿದ್ದಾರೆ ಎಂದು ನಾನು ಹೇಳುತ್ತೇನೆ. ವಿಕ್ಟೋರಿಯಾ ಆಸ್ಪತ್ರೆ, ಕ್ಷಯದ ಆಸ್ಪತ್ರೆ, ಹುಚ್ಚಾಸ್ಪತ್ರೆ, ಕಣ್ಣಾಸ್ಪತ್ರೆ ವಗೈರೆ ಆಸ್ಪತ್ರೆಗಳಲ್ಲೂ ಅದರಲ್ಲೂ ಹೆರಿಗೆ ಆಸ್ಪತ್ರೆಗಳಿಗೂ ಬರತಕ್ಕ ಕೇಸುಗಳಿಗೆ ಸ್ಥಳವಿಲ್ಲದೆ ಬಹಳ ತಾಪತ್ರಯವಾಗುತ್ತಾ ಇದೆ. ಕಾರಣ ಸಂಸ್ಥಾನದಲ್ಲಿ ಪ್ರಜಾ ಸಂಖ್ಯೆ ಜಾಸ್ತಿಯಾಗಿ, ಪರಸ್ಥಳದ ಅನೇಕ ಜನರು ಈ ಊರಿಗೆ ಬಂದು ವಾಸ ಮಾಡುತ್ತಿರುವುದರಿಂದ ಬೆಂಗಳೂರಿನ ಹೆರಿಗೆ ಆಸ್ಪತ್ರೆಗೆ ಬರತಕ್ಕ ಕೇಸುಗಳಿಗೆ ಬಹಳ ಕಷ್ಟವಾಗಿದೆ ಎಂಬುದನ್ನು ನಾನು ಹೇಳುತ್ತಿರುವುದೇ ಅಲ್ಲದೆ, ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿದಾಗ ಅವರ ಗಮನಕ್ಕೂ ಬಂದಿದೆ. ಕ್ಷಯದ ಆಸ್ಪತ್ರೆಯಲ್ಲೂ ಕೂಡ ಅದೇ ಕಷ್ಟ ಬಂದಿದೆ. ಕಟ್ಟಡದ ಅಭಾವ ಬಹಳ ಜಾಸ್ತಿಯಾಗಿದೆ. ಇದಕ್ಕೆ ಹೆಚ್ಚು ಗಮನ ಕೊಟ್ಟು ಪ್ರಜೆಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಔಷಧಿಗಳನ್ನು ಈಗ ಒದಗಿಸುತ್ತಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕು. ಈಗ ಒದಗಿಸುತ್ತಿರುವ ಔಷಧಿಗಳು ಸ್ವಲ್ಪ ಕಮ್ಮಿ ಮತ್ತು ಎಲ್ಲರಿಗೂ ಅನುಕೂಲವಾದ ರೀತಿಯಲ್ಲಿ ಒದಗಿಸುತ್ತಾ ಇಲ್ಲ. ಗ್ರಾಮಾಂತರದಲ್ಲಿ ಸಂಚಾರದ ಆಸ್ಪತ್ರೆಯ ಏರ್ಪಾಡು ಮಾಡಿದ್ದೀರಿ. ಮಾಗಡಿಯಲ್ಲಿ ಆ ರೀತಿಯ ಸೌಲಭ್ಯ ಒದಗಿಸಬೇಕೆಂದು ಕೇಳಿಕೊಂಡಿದ್ದೆ. ಇನ್ನೂ ಅಲ್ಲಿಗೆ ಆ ಸೌಲಭ್ಯವನ್ನು ಒದಗಿಸಿ ಕೊಟ್ಟಿಲ್ಲ. ಅದು ಬೆಟ್ಟ ಗುಡ್ಡಗಳಿಂದ ಕೂಡಿರತಕ್ಕ ಪ್ರದೇಶ, ಒಂದು ಲಕ್ಷ ಐವತ್ತು ಸಾವಿರ ಪ್ರಜಾ ಸಂಖ್ಯೆ ಇದೆ. ಅಲ್ಲಿಗೆ ಆ ಸೌಲಭ್ಯವನ್ನು ಒದಗಿಸಿಕೊಟ್ಟು ಈಗ ಏರ್ಪಾಡಾಗಿರತಕ್ಕ ಕಂಬೈನ್ಡ್ ಡಿಸ್ಪೆನ್ಸರಿಗೆ ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದರ ಮೂಲಕ ನಮ್ಮ ಹಳ್ಳಿಗೆ ಹೆಚ್ಚಿನ ವೈದ್ಯ ಸಹಾಯ ಒದಗುವಂತೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri P. M. SWAMIDURAI (Kolar Gold Fields—Scheduled Castes).—There are very good Hospital buildings in the Kolar Gold Fields. They are in use and are provided with good apparatus—'X' ray appartus and other things. I really appreciate it. But medicines there are not sufficient to be available for the patients there. This complaint we always receive there, especially from the poor people. So the Government must supply a lot of medicine.

I am a member of the Board of Visitors. I see a lot of medicines there. But I cannot understand why the patients do not get the medicines. They are asked to purchase medicines and give them to doctors for the use of patients. It is a labour area where poor people live and the Government must see that the doctors use the medicines supplied and satisfy their patients.

With regard to administration, I want to remind the Health Minister that there are a lot of complaints. Recently also there was a representation by the association representin · the workers in the hospital and they have submitted a petition to the Government. They come and worry me about this. I am very shy of speaking about all these things. Therefore I remind the Hon'ble Minister to take proper steps to see that these things are set right.

The labour area must have a T.B. Sanatorium. Of course it is being constructed now, at Kolar. But in Gold Fields there must be a sanatorium. Because it is a necessity for the underground workers who get contact with syllicosis which is closely related to T.B. So I request Government to provide a sanatorium to Kolar Gold Fields.

I request Government to start a Sick Nurses' Training Centre there. The Civil Hospital is a good one and I request the Government to start the training centre there.

Please provide also Government scholarship to depressed classes.

* ಶ್ರೀ ಎ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಹೇಳದೆ ಇದ್ದರೆ ವಿಧಿಯಿಲ್ಲ, ಹೇಳಿದರೆ ಸರಿಯಿಲ್ಲ. ಏನೇ ಆದರೂ ಹೇಳಿಯೇ ಬಿಡೋಣವೆಂದು ನಾನು ನಿಂತಿದ್ದೇನೆ. ಇವರು ಮಾಡಿರುವ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿಯನ್ನು ಪ್ರಾರಂಭ ಮಾಡಬೇಕೆಂದು ಹೇಳಿ 4 ಲಕ್ಷದ 15 ಸಾವಿರ, 4 ಲಕ್ಷದ 28 ಸಾವಿರ ಮತ್ತು 2 ಲಕ್ಷದ 94 ಸಾವಿರ—ಈ ರೀತಿಯಾಗಿ provide ಮಾಡಿಕೊಂಡಿದ್ದರು. ಈ ವರ್ಷ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಹಾಕಿಕೊಂಡಿರುವುದು 50 ಸಾವಿರ. ಇವರು ಹಣ provide ಮಾಡುವುದರ ರೀತಿ ನೀತಿಯೇ ನನಗೆ ಅರ್ಥವಾಗುವುದಿಲ್ಲ. ಮೈಸೂರು ದೇಶದಲ್ಲಿ ಆಗಬೇಕಾದ ಲೋಕಲ್ ಫಂಡ್ ಡಿಸ್ಪೆನ್ಸರಿಗಳೆಲ್ಲಾ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲೇ ಆಗಿಹೋಗಿದೆಯೋ ಗೊತ್ತಿಲ್ಲ! ಏಕೆಂದರೆ ಇವುಗಳಿಗೆ ಇಷ್ಟು ಕಡಿಮೆ ಹಣ provide ಮಾಡಿದ್ದಾರೆ. ಎಕ್ವಿಪ್‌ಮೆಂಟ್ ಸಾಲದೆಂದು ಹೇಳಿ ಮೇಜರ್ ಆಸ್ಪತ್ರೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು provide ಮಾಡುತ್ತಲೇ ಇದ್ದೀರಿ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ; ಶ್ರೀ ಪಟ್ಟಾಭಿರಾಮಯ್ಯನವರು ಬಹಳ ವಿಶದವಾಗಿ ಕೂಡ ಅದನ್ನೇ ಹೇಳಿದ್ದಾರೆ. ಪ್ರೈಯಾರಿಟಿ ನೋಡಿಕೊಂಡು ಯಾವುದನ್ನು ಮೊದಲು ಮಾಡಬೇಕು, ಯಾವ ಯಾವವುದಕ್ಕೆ ಮೊದಲಿನ ಪ್ರಾಶಸ್ತ್ಯವನ್ನು ಕೊಡಬೇಕೆಂಬುದನ್ನು ಯೋಚನೆ ಮಾಡುವುದು ಒಳ್ಳೆಯದು. ಮೊದಲು ಎಲ್ಲಿ ಅವಶ್ಯಕವೋ, ಎಲ್ಲಿ ಏನೂ ಅನುಕೂಲಗಳಿಲ್ಲವೋ ಅಂಥಕಡೆ ಆಸ್ಪತ್ರೆಗಳನ್ನೂ ಮತ್ತು ಇತರ ಅನುಕೂಲಗಳನ್ನೂ ಕೊಡುವುದಕ್ಕೆ ಪ್ರಯತ್ನ ಮಾಡುವುದು ನ್ಯಾಯ ಮತ್ತು ಧರ್ಮ. ಹೋದ ಸಾರಿ ನಾನು ಇದೇ ವಿಷಯವನ್ನು ಹೇಳಿದ್ದಕ್ಕೆ ಮುಖ್ಯ ಮಂತ್ರಿಗಳು, ನಾನು ಹೇಳುವುದು ಸರಿ, ಎಲ್ಲಿ ಕಷ್ಟವಿದೆಯೋ ಅಲ್ಲಿಗೆ ಮೊದಲು ಅನುಕೂಲವನ್ನು ಕಲ್ಪಿಸಿಕೊಡುವುದು ನ್ಯಾಯವೆಂದು ಒಪ್ಪಿದರು. ಆದರೆ ಅವರು ಹೇಳುವುದೆಲ್ಲಾ ಕೇವಲ lip sympathy ಯೆಂದು ಕಾಣುತ್ತದೆ; ಕಿವಿಗೆಹಿತವಾದ ಮಾತುಗಳನ್ನಾಡುತ್ತಾರೆಯೇ ಹೊರತು ನಿಜವಾಗಿ ಅಷ್ಟು ಹಣ provide ಮಾಡಿಲ್ಲ. ಜೊತೆಗೆಹಣ provide ಮಾಡಿದ್ದರಲ್ಲೂ ಎಲ್ಲೆಲ್ಲಿ ಅವಶ್ಯಕತೆಯಿದೆಯೋ, ಎಲ್ಲೆಲ್ಲಿ ವೈದ್ಯ ಸಹಾಯದ ತೊಂದರೆಯಿದೆಯೋ ಅಲ್ಲಿಗೆ ಸಹಾಯ ದೊರಕಿಸುವ ಏರ್ಪಾಡು ಮಾಡಿಲ್ಲ. ಇಂಥ ಸ್ಥಿತಿಯಲ್ಲಿರುವಾಗ ಈಗ 50,000 ರೂಪಾಯಿಗಳನ್ನು ಮಾತ್ರ provide ಮಾಡಿಕೊಂಡರೆ ಈ ಅನ ಕೂಲತೆಗಳನ್ನೆಲ್ಲಾ ಒದಗಿಸುವುದಕ್ಕೆ ಸಾಧ್ಯವೇ? ನಾನು ಚನ್ನಪಟ್ಟಣ ತಾಲ್ಲೂಕಿನ ವಿಷಯ ಹೇಳಿದರೆ, ಶ್ರೀ ಚನ್ನಬಸಪ್ಪನವರು, ಚನ್ನಪಟ್ಟಣದಲ್ಲಿ ಒಂದೇ ಆಸ್ಪತ್ರೆಯಿದ್ದು ಎಲ್ಲ ಕೆಲಸವನ್ನೂ ಸರಿಯಾಗಿ ನಡೆಸುತ್ತಿರುವಾಗ ಬೇರೇ ಆಸ್ಪತ್ರೆಯೇಕೆ ಎಂದು ಹೇಳುತ್ತಲೇ ಇರುತ್ತಾರೆ. ನಮ್ಮ ತಾಲ್ಲೂಕಿಗೆಲ್ಲಾ ಒಂದೇ ಒಂದು dispensary ಯಿದೆ. ಒಂದು Mobile Van ಆದರೂ ಮಾಡಿಕೊಟ್ಟರೆ ನಮ್ಮ ತಾಲ್ಲೂಕಿನವರಿಗೆ ಹೆಚ್ಚು ಪ್ರಯೋಜನವಾಗುತ್ತದೆಂದು ಹೇಳಿದರೆ, ಅದಕ್ಕೂ ಏನೂ ಹೇಳುತ್ತಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯ ವಿಷಯದಲ್ಲಿ ಹೇಳುವುದು ಬೇಕಾದಷ್ಟಿದೆ. ದೊಡ್ಡದಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ Surgical Block ನ್ನು ಕಟ್ಟಿದ್ದಾರೆ. ಆದರೆ ಅದಕ್ಕೆ equipment ಇಲ್ಲ. ಮತ್ತು ಸ್ಪೆಷಲ್ ವಾರ್ಡ್‌ಗಳೆಂದುಬಿಟ್ಟರೆ ಪ್ರತಿಯೊಂದಕ್ಕೂ ಅಲ್ಲಿಗೆ ಬರುವ ರೋಗಿಗಳು ಖರ್ಚು ವಹಿಸಿಕೊಳ್ಳಬೇಕೆಂದು ಮಾಡಿದ್ದೀರಿ. ಒಂದೊಂದು ಆಪರೇಷನ್‌ಗೆಂದರೆ 50—60—100 ರೂಪಾಯಿಗಳವರೆಗೂ ಚಾರ್ಜ್ ಮಾಡುತ್ತಾರೆ. ಇಷ್ಟೆಲ್ಲಾ ಆದರೂ ಅಲ್ಲಿನ ಏರ್ಪಾಡಾದರೂ ಸಮರ್ಪಕವಾಗಿದೆಯೇ? ಹತ್ತು ಹಾಸಿಗೆಗಳಿಗೆ ಒಬ್ಬರಿದ್ದರೆ ನೋಡಿಕೊಳ್ಳುವುದಕ್ಕೆ ಸಾಧ್ಯವೇ? ಪುಣ್ಯವಂತರಾಗಿದ್ದ ಮಾತ್ರಕ್ಕೇ ಜನ ಸಹಾಯ, ಎಲ್ಲಾ ಅನುಕೂಲವೂ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ರೋಗಿ ಕೂಗಿಕೊಂಡರೂ ಎಷ್ಟೋ ವೇಳೆ ಕೇಳುವವರಿಲ್ಲ. ಅಲ್ಲದೆ, ಇನ್ನೊಂದು ವಿಷಾದ ಪರಿಸ್ಥಿತಿಯೇನೆಂದರೆ, ಇಂಥ ದೊಡ್ಡ ಆಸ್ಪತ್ರೆಗೊಂದು electric ಲಾಂಡ್ರಿ ಇಲ್ಲ! ಆ ಬಟ್ಟೆಗಳನ್ನು ನೋಡಿದರೆ ನನಗಂತೂ ಭಯವಾಗುತ್ತದೆ. ಬಟ್ಟೆಗಳೆಲ್ಲಾ ಬರೀ ನೀಲಿ ಬಣ್ಣವಾಗಿರುತ್ತದೆ ಅಷ್ಟೆ. ಏನು ತಪ್ಪಿದ್ದರೂ ಕಾಣುವುದಕ್ಕೆ ಅವಕಾಶವಿರಬಾರದು ಎಂದು ನೀಲಿಯನ್ನು ಭರ್ತಿ ಮಾಡಿರುತ್ತಾರೆ. ವಿದ್ಯುಚ್ಛಕ್ತಿ ಬೇಕಾದಷ್ಟು ಸಿಕ್ಕುತ್ತಿರುವ ಇಂಥ ಸ್ಥಳದಲ್ಲಿ ಒಂದು ಎಲೆಕ್ಟ್ರಿಕ್ ಲಾಂಡ್ರಿ ಇಲ್ಲವಲ್ಲ. ಹೋದ ಸಲ ಇದನ್ನೇ ಹೇಳಿದ್ದಕ್ಕೆ, ಇದನ್ನು ಮಾಡಿದರೆ ಅಗಸನಿಗೆ ಕೆಲಸ ಹೋದಂತಾಗುತ್ತದೆಂದು ವಾದಿಸಿದರು. ಇದೆಲ್ಲಾ ಉಪಚಾರದ ಮಾತು. ಅವನಿಗೆ ಬೇಕಾದಷ್ಟು ಕೆಲಸ ಇದೆ. ಸಂಬಳ ಅವನಿಗೆ ಕೊಡಬೇಡವೆಂದು ನಾನು ಹೇಳುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿರುವ ಆಸ್ಪತ್ರೆ ಚೆನ್ನಾಗಿರುವಂತೆ ಮಾಡಬೇಕಾದರೆ ಏನೇನು ಮಾಡಬೇಕೋ ಅದನ್ನು ಮಾಡುವುದು ಸರ್ಕಾರದವರ ಕರ್ತವ್ಯವೆಂದು ಹೇಳಿ ನಾನು ಮುಗಿಸುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿರತಕ್ಕ ಕೆಲವು ನ್ಯೂನತೆಗಳ ವಿಷಯದಲ್ಲಿ ಮಾತನಾಡಿದ್ದಾರೆ. ಸದ್ಯಕ್ಕೆ ನಾನು ಎಲ್ಲಕ್ಕೂ ಉತ್ತರ ಕೊಡುವುದಕ್ಕೆ ಹೋಗದೆ ಅವಶ್ಯಕವಾದ ಕೆಲವು ವಿಷಯಗಳಿಗೆ ಮಾತ್ರ ಉತ್ತರ ಕೊಡಲು ಪ್ರಯತ್ನಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಶ್ರೀ ನಾರಾಯಣ ಸ್ವಾಮಿಯವರು ಮೆಡಿಕಲ್ ಸ್ಕೂಲನ್ನು ಯಾವ ಕಾರಣವೂ ಇಲ್ಲದೆ ತೆಗೆದು ಹಾಕಿದ್ದು ಸರಿಯಲ್ಲವೆಂದು ಹೇಳಿದರು. ಇಂಡಿಯಾದೇಶದಲ್ಲೇ ಬೇರೆ ಯಾವ ಸಂಸ್ಥಾನದಲ್ಲೂ ಮೆಡಿಕಲ್ ಸ್ಕೂಲ್ ಎಂಬುದಿಲ್ಲ, ಈ ಕಾರಣದಿಂದ ನಮಗೆ ಮೆಡಿಕಲ್ ಕೌನ್ಸಿಲ್‌ನವರು ಒತ್ತಾಯ ಮಾಡುತ್ತಿದ್ದಾರೆ. ಇಡೀ ಇಂಡಿಯಾ ದೇಶದಲ್ಲಿ ಒಂದು Uniform Standard of Education ಇರಬೇಕೆಂಬ ದೃಷ್ಟಿಯಿಂದ ನಮಗೆ ಪದೇಪದೇ ನಮ್ಮ ಮೆಡಿಕಲ್ ಸ್ಕೂಲಿನ ವಿಷಯ ಹೇಳುತ್ತಿದ್ದರು. ಮತ್ತು ಹೈದರಾಬಾದಿನಲ್ಲಿ ನಡೆದ ಮೀಟಿಂಗ್‌ನಲ್ಲಿಯೂ ಮತ್ತು ಟ್ರಿವಾಂಡ್ರಂನಲ್ಲಿ ಆದ ಮೀಟಿಂಗ್‌ನಲ್ಲಿಯೂ ನಿರ್ಣಯಮಾಡಿ ಈ ಅಂಶವನ್ನೇ ಒತ್ತಾಯ ಮಾಡಿ ಹೇಳಿದರು. ನಾವೇನೋ ಇದುವರೆಗೂ ತಡ ಮಾಡಿಕೊಂಡೇ ಬಂದೆವು; ಮೈಸೂರು ಸಂಸ್ಥಾನದಲ್ಲಿ ಹಿಂದಿನಿಂದಲೂ ಮೆಡಿಕಲ್ ಸ್ಕೂಲಿನಲ್ಲಿ L.M.P. ಪಾಸ್ ಮಾಡಿದವರಿದ್ದು ಅವರು ಸರ್ವಿಸ್ಸಿನಲ್ಲಿದ್ದಾರೆ. ನಮ್ಮಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳಿರುವುದರಿಂದ, ಮತ್ತು ಆ ಆಸ್ಪತ್ರೆಗಳಿಗೆ ಎಂ. ಬಿ. ಬಿ. ಎಸ್. ಪಾಸ್ ಮಾಡಿದವರನ್ನು ಹಾಕುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಎಲ್.ಎಂ.ಪಿ. ಯವರಾದರೆ ಹಾಕಬಹುದು ಮತ್ತು ಅವರು ಹೋಗುತ್ತಾರೆಂದು ಹೇಳಿ ಇದುವರೆಗೂ L.M.P. ಕೋರ್ಸನ್ನು ಇಟ್ಟುಕೊಂಡೆವು. ಆದರೆ ಇತ್ತೀಚೆಗೆ ಆಲ್ ಆಂಡಿಯಾ ಮೆಡಿಕಲ್ ಕೌನ್ಸಿಲ್‌ನವರ ಒತ್ತಾಯ ಜಾಸ್ತಿಯಾದ್ದರಿಂದ ಮತ್ತು ಮೈಸೂರಿನಲ್ಲೊಂದು ಬೆಂಗಳೂರಿನಲ್ಲೊಂದು ಮೆಡಿಕಲ್ ಕಾಲೇಜಿದ್ದು, ಮೆಡಿಕಲ್ ಸ್ಕೂಲನ್ನು continue ಮಾಡುವುದು ಸರಿಯಲ್ಲವೆಂದು ಭಾವಿಸಿ, ನಮ್ಮ ಸರ್ಕಾರದವರು ಇತರ ಸಂಸ್ಥಾನಗಳಲ್ಲಿರುವಂತೆ ಇರಬೇಕೆಂದು ಹೇಳಿ ಮೆಡಿಕಲ್ ಸ್ಕೂಲನ್ನು ತೆಗೆದುಹಾಕಬೇಕೆಂದು ಹೇಳಿ ಈ ಏಪ್ರಿಲ್‌ನಿಂದ ವಜಾ ಮಾಡಿದ್ದಾರೆ. ಆದರೆ, ಈಗ ಓದುತ್ತಿರತಕ್ಕ ವಿದ್ಯಾರ್ಥಿಗಳಿಗೆ ಮುಂದೆ ತಮ್ಮ ವಿದ್ಯಾಭ್ಯಾಸವನ್ನು continue ಮಾಡುವುದಕ್ಕೆ ಅವಕಾಶ ಮಾಡಿದೆ.

ಎರಡನೆಯದಾಗಿ ಪಾಶ್ಚಾತ್ಯ ದೇಶಗಳಿಗೆ ನಮ್ಮ ಸಂಸ್ಥಾನದಿಂದ ಸಾಕಷ್ಟು ಮೆಡಿಕಲ್ ಗ್ರಾಜ್ಯುಯೇಟರುಗಳನ್ನು ಅದರಲ್ಲೂ ಸೀನಿಯರ್ ಡಾಕ್ಟರುಗಳನ್ನು ಕಳುಹಿಸಿ ಕೊಟ್ಟು specialise ಮಾಡಿಕೊಳ್ಳುವುದಕ್ಕೆ ಮತ್ತು ಉನ್ನತ ಡಿಗ್ರಿ ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದು ಒಂದು ಆಕ್ಷೇಪಣೆ ಬಂತು.

ನಮ್ಮ ಮೈಸೂರು ಸಂಸ್ಥಾನದಿಂದ ಬರೀ ಜೂನಿಯರ್ ಡಾಕ್ಟರುಗಳನ್ನೇ ಪಾಶ್ಚಿಮಾತ್ಯ ದೇಶಗಳಿಗೆ ಕಳುಹಿಸುತ್ತಿದ್ದಾರೆಂದು ಹೇಳಿದರು. ಈ ವಿಷಯದಲ್ಲಿ ಜೂನಿಯರ್ ಸೀನಿಯರ್ ಎಂದೇನೂ ತಾರತಮ್ಯವಿಲ್ಲ. ಆದರೆ ಪರದೇಶಗಳಿಗೆ ಹೋಗಿ ಯಾವುದಾದರೂ ವಿಶೇಷ ಶಿಕ್ಷಣ ಪಡೆದು, ಎಂದರೆ F.R.C.S., M.R.C.P. ಇಂಥಾ ಡಿಗ್ರಿ ಡಿಪ್ಲೊಮಾ ಫೆಲೋಷಿಪ್‌ಗಳನ್ನು ಪಡೆದು ಬರಬೇಕೆಂದು ಮಾಡಿದೆ. ಹಾಗಿಲ್ಲದೆ ಸುಮ್ಮನೆ ರಜ ತೆಗೆದುಕೊಂಡು ಹೋಗಿ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸಮಾಡಿ ನೋಡಿಕೊಂಡು ಬರುತ್ತೇನೆಂದು ಹೇಳಿದರೆ ಅದು ಸರಿಯಲ್ಲ. ಹೋದ ಮೇಲೆ ಏನಾದರೂ ಸರಿಯಾದ ಶಿಕ್ಷಣ ಪಡೆದು ಉತ್ತೀರ್ಣರಾಗಿ ಬರಬೇಕು. ಜೂನಿಯರ್‌ಗಳನ್ನು ಕಳುಹಿಸುವುದರಲ್ಲಿ ಉದ್ದೇಶವಿಷ್ಟೆ: ಮುಂದೆ ಅವರಿಗೆ ಇಲ್ಲಿ ಸೇವೆ ಮಾಡತಕ್ಕ ಅವಕಾಶವಿರಬೇಕು; ವಿಶೇಷ ವಿಷಯಗಳನ್ನು ವ್ಯಾಸಂಗ ಮಾಡಿ, ಪಾಸು ಮಾಡಿಕೊಂಡು ಬರುವವರನ್ನು ಕಳುಹಿಸಬೇಕು. ಇದಕ್ಕೆ ಜನರನ್ನು ಚುನಾಯಿಸಲು ಒಂದು ಸಮಿತಿಯನ್ನು ಮಾಡಿದ್ದೇವೆ. ವಿದೇಶಗಳಿಗೆ ಹೋಗಲಿಚ್ಛಿಸುವವರಿಂದ ಅರ್ಜಿ ಬಂದು, ಇಲಾಖೆಯಿಂದ ಶಿಫಾರಸು ಬಂದರೆ ಅದನ್ನು ಪರಿಶೀಲಿಸಿ ತೀರ್ಮಾನಿಸುತ್ತಾರೆ.

ಮೈಸೂರಿನಲ್ಲಿರುವ ಆಯುರ್ವೇದಿಕ್ ಕಾಲೇಜನ್ನು ಇಲ್ಲಿಗೆ ಬದಲಾಯಿಸುವ ವಿಚಾರದಲ್ಲಿ ಅನೇಕರು ತೀವ್ರವಾಗಿ ಮಾತನಾಡಿದ್ದಾರೆ. ಅನೇಕ ಮಾನ್ಯ ಮಿತ್ರರು ಈ ಸಭೆಯಲ್ಲಿಯೂ, ಕೌನ್ಸಿಲ್‌ನಲ್ಲಿಯೂ ಆಯುರ್ವೇದ ಯುನಾನಿ ಕಾಲೇಜನ್ನು ಮೈಸೂರಿನಲ್ಲೇ ಉಳಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಡೋನಾರ್ ಇಚ್ಛೆ ಕೂಡ ಅದು ಅಲ್ಲೇ ಇರಬೇಕೆಂಬುದಾಗಿತ್ತು ಎಂದು ಹೇಳಿದರು. ಹಿಂದೆ ಸರ್ಕಾರದವರೂ ಕೂಡ ಅದನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲಾವಣೆ ಮಾಡಬೇಕೆಂಬ ಇಚ್ಛೆಯಿದ್ದರೂ ಅನೇಕ ಮಾನ್ಯ ಸದಸ್ಯರು ಎರಡು ಸಭೆಗಳಲ್ಲಿಯೂ ಅಲ್ಲೇ ಇರಬೇಕೆಂದು ಇಚ್ಛಿಸಿದ್ದರಿಂದ, ಅಲ್ಲೇ ಇರುವ ಭರವಸೆ ಕೊಟ್ಟರು, ಇದು ನಿಜ. ಆದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಅಲ್ಲಿರತಕ್ಕ bed strength 36; ವಿದ್ಯಾರ್ಥಿಗಳು ಸುಮಾರು 350 ಜನರವರಿಗೆ ಅಲ್ಲಿ ಓದುತ್ತಿದ್ದಾರೆ. ಅಷ್ಟು ಜನರಿಗೆ clinical facilities ಇರಬೇಕು, ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಇಷ್ಟು bed strength ಇರಬೇಕೆಂದು ಗೊತ್ತು ಮಾಡಿದ್ದಾರೆ ಮೆಡಿಕಲ್ ಕೌನ್ಸಿಲ್‌ನವರು. 36 ಬೆಡ್ಸ್ ಇರುವಾಗ ಇಷ್ಟು ಜನರಿಗೆ ಏನೇನೂ ಸಾಲದು. ವಿದ್ಯಾರ್ಥಿಗಳು ಅಷ್ಟು ಸಂಖ್ಯೆಯಲ್ಲಿ ಅಲ್ಲಿ ಬಂದರೆ ಯಾರು ಯಾರು ವಿದ್ಯಾರ್ಥಿಗಳೆಂದು ಗುರುತಿಸುವುದಕ್ಕೂ ಕೂಡ ಆಗುವುದಿಲ್ಲ. ಅಲ್ಲದೆ ಅಲ್ಲಿ ಪಾಸು ಮಾಡಿಕೊಂಡು ಹೋದ ವಿದ್ಯಾರ್ಥಿಗಳು ಬೊಂಬಾಯಿಗೆ ಹೋಗಿ ಅಲ್ಲಿ ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಮದರಾಸ್ ಸರ್ಕಾರದವರೇನೋ ಕೊಟ್ಟಿದ್ದಾರೆ. ಹೀಗಾಗಿ ನಮ್ಮ ಸಂಸ್ಥಾನದಲ್ಲಿ ತೆಗೆದುಕೊಳ್ಳತಕ್ಕ ಶಿಕ್ಷಣ ಸಾಲದು, clinical facilities ಸಾಲದು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದಕಾರಣ ಸಾಕಷ್ಟು clinical facilities ಇರುವ ಸ್ಥಳಕ್ಕೆ ಬದಲಾಯಿಸಬೇಕು; ಅಲ್ಲದೆ ಸಂಶೋಧನಾ ಕಾರ್ಯಕ್ಕೆ ಏರ್ಪಾಡು ಮಾಡಬೇಕು, ಮೂಲಿಕೆಗಳನ್ನು ಬೆಳೆಸಲು ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಗ್ರಾಮಾಂತರಗಳಲ್ಲಿ ಅನುಕೂಲ ಮಾಡಿಕೊಡಬೇಕು ಎಂಬ ಬಗ್ಗೆ ಎರಡನೆಯ ಯೋಜನೆಯಲ್ಲಿ ಅವಕಾಶ ಮಾಡಿದೆ. ಶ್ರೀ ರಾಜಶೇಖರಮೂರ್ತಿಯವರು ಹೇಳಿದ ಹಾಗೆ ಆ ವಿದ್ಯಾರ್ಥಿಗಳಿಗೆ dissection ಮಾಡುವುದರಲ್ಲಿಯೂ ಪಾಶ್ಚಾತ್ಯ ವೈದ್ಯ ಪದ್ಧತಿಯಲ್ಲಿಯೂ ಶಿಕ್ಷಣ ಕೊಡಬೇಕು. ಹಿಂದಿನಿಂದಲೂ ಶುದ್ಧ

ಆಯುರ್ವೇದ ಪದ್ಧತಿ ಮಾಡಬೇಕು, ಆದುದರಿಂದ ಆ ಕಾಲೇಜು ಮೈಸೂರಿನಲ್ಲೇ ಇರಬೇಕೆಂದು ಅಭಿಪ್ರಾಯ ಪಡುತ್ತಿದ್ದರು. ಆದರೆ ಅನೇಕ ವಿದ್ಯಾರ್ಥಿಗಳೂ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕು, ಅಲ್ಲಿ ಅನುಕೂಲವಿದೆ, ಅಲೋಪತಿಕ್ ಶಿಕ್ಷಣ ಪಡೆಯಲು ಅವಕಾಶವಿದೆ ಎಂದು ಹೇಳುತ್ತಿದ್ದಾರೆ. ಈಗ ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅಲ್ಲಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೇ ಅನುಕೂಲ ಒದಗಿಸುವುದು ಕಷ್ಟವಾಗಿದೆ. ಅವರ ಜೊತೆಗೆ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೂ ಕೊಡಬೇಕೆಂದರೆ ಕಷ್ಟ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಇಲ್ಲಿ ಕೊಡುವುದನ್ನು ಮೈಸೂರಿನಲ್ಲೆ ಏಕೆ ಕೊಡಬಾರದು ? ಅಲ್ಲೇ ಕಟ್ಟಡವನ್ನು ದೊಡ್ಡದು ಮಾಡಿದರೆ, 36 ಬೆಡ್ಸ್ ಇರುವುದನ್ನು 500 ಬೆಡ್ಸ್ ಮಾಡಿದರೆ ಸಾಧ್ಯವಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಇಲ್ಲಿ ಜಯಚಾಮರಾಜ ಆಸ್ಪತ್ರೆಯಲ್ಲಿ 230 ಬೆಡ್ಸ್ ಇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಇನ್ನೂ ಹೆಚ್ಚಿಸಬೇಕೆಂದಿದೆ. ಆದುದರಿಂದ ಇಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಏರ್ಪಾಡು ಮಾಡಿದೆ.

ಸಿವಿಲ್ ಸ್ಟೇಷನ್ ಆಸ್ಪತ್ರೆಗಳಲ್ಲಿ ಅನುಕೂಲಗಳನ್ನು ಹೆಚ್ಚು ಮಾಡಬೇಕೆಂದು ಪ್ರತಿ ವರ್ಷವೂ ಒಂದು ಲಕ್ಷಕ್ಕೆ ಮೇಲ್ಪಟ್ಟು ಕೊಡುತ್ತಿದ್ದೇವೆ. ಬೌರಿಂಗ್ ಆಸ್ಪತ್ರೆಯ ವಿಷಯದಲ್ಲಿ ಸಿಬ್ಬಂದಿ, ಸಲಕರಣೆಗಳು ಮುಂತಾದ ಅನುಕೂಲಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ.

Mr. DEPUTY SPEAKER.—It is three o'clock.

Sri T. CHANNIAH.—I have to reply to many things. I am sorry I have no time. With regard to the one point raised by Sri Venkatappa, I wish to say this much. I am also interested in it. He said that an electric laundry should be started in the Victoria Hospital. We are also interested. I am one with him in pursuing the matter. It will be pursued and as far as possible implemented this year.

Mr. DEPUTY SPEAKER.—The question is :

"That a sum not exceeding Rs. 1,21,76,000 be granted to the Government to defray the charges which will come in course of payment during the year ending 31st day of March 1957 in respect of 'Medical'."

The motion was adopted

DEMAND NO. 20—PUBLIC HEALTH.

39. Public Health.

Mr. DEPUTY SPEAKER.—The question is :

"That a sum not exceeding Rs. 52,73,000 be granted to the Government to defray the charges which will come in course of payment during the year ending 31st day of March 1957 in respect of 'Public Health'."

The motion was adopted

Mr. DEPUTY SPEAKER.—The House will now rise for lunch and meet at 3-30 P.M.

The House rose for Lunch at Three of the Clock and reassembled at Thirty Minutes past Three of the Clock.

[Mr. Deputy Speaker in the Chair]

(*Quorum was formed at* 3-35)

DEMAND NO. 23—RURAL DEVELOPMENT.

40. Rural Development.

Mr. DEPUTY SPEAKER.—Motion moved :

"That a sum not exceeding Rs. 97,20,700 be granted to the Government to defray the charges which will come in course of payment during the year ending 31st day of March 1957 in respect of 'Rural Development.'"

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಗ್ರಾಮ ಜೀವನಗಳಲ್ಲಿ ರಸ್ತೆಗಳ ಪಾತ್ರ ಬಹಳ ಮುಖ್ಯವಾದುದು. ಸಾಮಾನ್ಯವಾಗಿ ಜನತೆಗೆ ಅದರಲ್ಲೂ ಗ್ರಾಮಾಂತರ ಜನತೆಗೆ ಏನೇನು ಸೌಕರ್ಯಗಳನ್ನೂ, ಸೌಲಭ್ಯಗಳನ್ನೂ ಹೆಚ್ಚಾಗಿ ಕಲ್ಪಿಸಬೇಕು ಎಂದು ಹೇಳಬೇಕಾದರೆ ಮುಖ್ಯವಾಗಿ ಸಂಚಾರ ಸೌಕರ್ಯವನ್ನು ಅಭಿವೃದ್ಧಿಪಡಿಸಬೇಕು. ಸಂಚಾರ ಸೌಕರ್ಯ ಅಭಿವೃದ್ಧಿಯಾಗದೆ ಅವರ ಆರ್ಥಿಕ ಜೀವನದಲ್ಲಿ ಪ್ರಗತಿಯಾ

(ಶ್ರೀ ಬಿ. ಮಾಧವಾಚಾರ್).

ಗುವಂತಿಲ್ಲ. ಈ ದೃಷ್ಟಿಯಲ್ಲಿ ಈ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಮೊಬಲಗನ್ನು ಮೀಸಲಾಗಿಟ್ಟಿದ್ದರೆ ಬಹಳ ಪ್ರಯೋಜನವಾಗುತ್ತಿತ್ತು. ನಾನು ಇಲ್ಲಿ ಒತ್ತಾಯಪಡಿಸುವುದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ರಸ್ತೆಗಳನ್ನು ಜಿಲ್ಲಾ ಬೋರ್ಡು ಕಾರ್ಯಾಚರಣೆಯನ್ನು ಮಾಡುತ್ತಿದ್ದ ಸಮಯದಲ್ಲಿ ಅನೇಕ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರು. ರಸ್ತೆಗಳನ್ನು ನಿರ್ಮಾಣ ಮಾಡಿದ ರೆಂದರೆ, ಜೆಲ್ಲಿಹಾಕಿ ಕ್ರಮವಾಗಿ ರಸ್ತೆಯನ್ನು ಮಾಡಿಲ್ಲ. ಬರೀ ಕಾಲುವೆಗಳನ್ನು ತೋಡಿ, ಜಾಗವನ್ನು ಅಕ್ವೈರ್ ಮಾಡಿಕೊಂಡು, ಕೇವಲ ಮಣ್ಣಿನ ರಸ್ತೆಗಳನ್ನು ಮಾತ್ರ ಮಾಡಿದರು. ಜಿಲ್ಲಾಬೋರ್ಡು ರದ್ದಾದಿನಿಂದೀಚೆಗೆ ಆ ರಸ್ತೆಗಳು ಬಹಳ ದುರವಸ್ಥೆಗೆ ಬಂದು ಮಾಡಿದ ಕೆಲಸ ಕೂಡ ಪ್ರಯೋಜನವಿಲ್ಲದಂತಾಗಿದೆ. ಅಂಥ ಮುಖ್ಯ ರಸ್ತೆಗಳ ಪೈಕಿ ಭದ್ರಾವತಿ ತಾಲ್ಲೂಕಿನಲ್ಲಿ ಹೊಳೆಹೊನ್ನೂರಿನಿಂದ ಸನ್ಯಾಸಿಕಾಡಮಗ್ಗಿ ಮಾರ್ಗವಾಗಿ ಆನವೇರಿಗೆ ಹೋಗತಕ್ಕ ಒಂದು ರಸ್ತೆ ಸಾವಿರಾರು ಜನರ ಪ್ರಯೋಜನಕ್ಕಾಗಿ ರಚಿಸಲ್ಪಟ್ಟಿತು. ಆದರೆ ಅದಕ್ಕೆ ಇದುವರೆವಿಗೂ ಜೆಲ್ಲಿ ಕಾಮಗಾರಿ ಮಾಡಿಲ್ಲ. ಜೆಲ್ಲಿಕಾಮಗಾರಿ ಕೆಲಸ ಮಾಡಿಸಬೇಕೆಂದು ಈ cut motion ನಾನು ತಂದಿದ್ದೇನೆ.

ಭದ್ರಾವತಿ ತಾಲ್ಲೂಕಿನಲ್ಲಿ ಪ್ರವಹಿಸತಕ್ಕ ಭದ್ರಾ ಮತ್ತು ತುಂಗಭದ್ರಾ ನದಿ ದಡಗಳಲ್ಲಿ ಸಾವಿರಾರು ಜನ ಸಂಖ್ಯೆಯುಳ್ಳ ಅನೇಕ ಗ್ರಾಮಗಳಿವೆ. ಆ ಗ್ರಾಮಗಳವರೆಲ್ಲ ತಮ್ಮ ಕುಡಿಯುವ ನೀರಿಗಾಗಿ ಈ ನದಿಗಳ ನೀರನ್ನೇ ಅವಲಂಬಿಸಿರುತ್ತಾರೆ. ಆ ನದಿಗಳಿಗೆ ನೀರು ತರಲು ಹೋಗುವ ಸ್ಥಳಗಳಲ್ಲಿ ಮೆಟ್ಟಲುಗಳಿಲ್ಲದೆ ಆ ಗ್ರಾಮಗಳವರಿಗೆ ತೊಂದರೆಯಾಗಿ ಅನೇಕರು ಇದಕ್ಕೆ ತುತ್ತಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಡಣಾಯಕಪುರ, ಸಿದ್ಲಿಪುರ, ಸನ್ಯಾಸಿ, ಕಾಡಮಗ್ಗಿ, ಮಂಗೋಟೆ, ನಿಂಬೇಬಂದಿ ಮೊದಲಾದ ಗ್ರಾಮಗಳ ಬಳಿ ನದೀ ದಡಕ್ಕೆ ಮೆಟ್ಟಲುಗಳನ್ನು ಕಟ್ಟಿಸಿ ಈ ಗ್ರಾಮಗಳ ಅಭಿವೃದ್ಧಿಗೆ ಅನುಕೂಲ ಮಾಡಿಸಿ ಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿ ನನ್ನ ಎರಡು ಮಾತುಗಳನ್ನು ಮುಕ್ತಾಯಪಡಿಸುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಸ್ವಾಮಿ, ಗ್ರಾಮಾಭಿವೃದ್ಧಿಗಾಗಿ ಸರ್ಕಾರದವರು ಕೇಳಿರತಕ್ಕ 23ನೆಯ ಡಿಮ್ಯಾಂಡಿನ 97,20,700 ರೂಪಾಯಿಗಳ ಮನವಿಬಗ್ಗೆ ಒಂದೆರಡು ವಿಷಯಗಳನ್ನು ತಿಳಿಸಬಯಸುತ್ತೇನೆ. ಕಳೆದ ಸಾಲಿನಲ್ಲಿ ಗ್ರಾಮಾಭ್ಯುದಯಕ್ಕೆ ಈ ಶಾಸನ ಸಭೆಯವರು ಹಣವನ್ನು ಖರ್ಚು ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಮೇಲೆ ಅದನ್ನು ಜಿಲ್ಲೆಗಳಿಗೂ, ತಾಲ್ಲೂಕುಗಳಿಗೂ ಹಂಚಿ ಹಾಕುವುದು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಒದಗುವಂತೆ ಕಳುಹಿಸುವುದು. ಈ ಕೆಲಸ ಬಹಳ ದೊಡ್ಡದಾಗುತ್ತಿದೆ. ವರ್ಷದ ಕೊನೆಯಲ್ಲಿ ಈ ಹಣ ಕಳುಹಿಸುವುದರಿಂದ ಅದು ಖರ್ಚಾಗದೆ ಹೆಚ್ಚು ಭಾಗ ವ್ಯರ್ಥವಾಗುತ್ತಿದೆ. ಆ ರೀತಿ ಆಗಬಾರದು, ಆಯವ್ಯಯದ ಪಟ್ಟಿಯನ್ನು ಮಾರ್ಚಿ 31ರೊಳಗಾಗಿ ನಾವು ಅಂಗೀಕಾರಮಾಡಿದರೂ ಕೂಡ ಈ ಹಣ ಈ ಬಾಬುಗಳಲ್ಲಿ ಇಂತಹ ತಾಲ್ಲೂಕುಗಳಿಗೆ ಇಷ್ಟು ಕೊಟ್ಟಿದ್ದೇವೆ, ಖರ್ಚು ಮಾಡಬಹುದು ಎಂದು ನಿರ್ದೇಶ ತಾಲ್ಲೂಕುಗಳಿಗೆ ತಲುಪುವುದಕ್ಕೆ ಸುಮಾರು ಆರೇಳು ತಿಂಗಳಕಾಲ ತಡವಾಗುತ್ತದೆ. ಇದಕ್ಕೆ ಕಾರಣವೇನು ಎಂದು ನಾನು ಚೀಫ್ ಸೆಕ್ರೆಟರಿಯವರಿಗೆ ಕಾಗದ ಬರೆದೆ. ಅವರು ಫೈನಾನ್ಸ್ ಸೆಕ್ರೆಟರಿಗಳಿಗೆ ಕಳುಹಿಸಿದರು. ಅದಕ್ಕೆ ಜವಾಬು ಬಂದಿದ್ದರಲ್ಲಿ "ನಿಮ್ಮ ಗಮನವನ್ನು ಫೈನಾನ್ಸ್ ಮೆಮೊರಾಂಡಂ ಕಡೆಗೆ ಸೆಳೆಯುತ್ತೇನೆ" ಎಂದು ಮಾತ್ರ ತಿಳಿಸಲಾಗಿತ್ತು. ಪ್ರತಿಯೊಬ್ಬ ಇಲಾಖಾ ಮುಖ್ಯಾಧಿಕಾರಿ ಎಷ್ಟು ಖರ್ಚುಮಾಡಿಕೊಳ್ಳಬಹುದೆಂದು ಫೈನಾನ್ಷಿಯಲ್ ಮೆಮೊರಾಂಡಂ ಮೂಲಕ ತಿಳಿಸಲಾಗಿದೆ, ಅದನ್ನು ತಾಲ್ಲೂಕುಗಳಿಗೆ ಹಂಚಿಕೊಡುವ ಕೆಲಸ ಅವರದು ಎಂದು ಅವರು ಹೇಳಿದ ಹಾಗಾಯಿತು. ಸರ್ಕಾರದಲ್ಲಿರುವವರು ಈ ರೀತಿ ನಾನು ನನ್ನ ಕೆಲಸ ಮಾಡಿದ್ದೇನೆ, ಇನ್ನೊಬ್ಬರು ಮಾಡುವುದು ತಡ ಎಂದು ಹೇಳುವುದು ಸರಿಯಲ್ಲ ಎಂದು ಭಾವಿಸುತ್ತೇನೆ. ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಇಷ್ಟು ತಾಲ್ಲೂಕುಗಳಿಗೆ ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆಗ ವರ್ಷದ ಕೊನೆಯ ಭಾಗವಾಗಿರುತ್ತದೆ. ಮಾರ್ಚಿ 31ರೊಳಗಾಗಿ ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುತ್ತದೆ. ಗ್ರಾಮಾಭಿವೃದ್ಧಿ ಕಾರ್ಯವೊಂದೇ ಅಲ್ಲ, ಇನ್ನೂ ಅನೇಕ ಕಾರ್ಯಗಳಿಗೆ ಕೂಡ ಹಣವನ್ನು ಆರು ತಿಂಗಳ ಮೇಲೆ ಕೊಡುವುದರಿಂದ ಎಲ್ಲಾ ಕೆಲಸಗಳನ್ನು ಒಂದೇ ಸಾರಿ ಷುರು ಮಾಡುವುದರಿಂದ ವ್ಯರ್ಥವಾಗುವುದಕ್ಕೆ ಅವಕಾಶವಿದೆ. ಉದಾಹರಣೆ ಹೇಳುವುದಾದರೆ ಕುಡಿಯುವ ನೀರಿನ ಭಾವಿಗಳಿಗೆ ಹಣ ಕೊಡುತ್ತಾರೆ. ಎರಡು ಮೂರು ಬಾಬಿನಲ್ಲಿ ಇದನ್ನು ಹೇಳಿದ್ದಾರೆ. ಒಂದು ನೇರವಾಗಿ ಸರ್ಕಾರಿ ಗ್ರಾಂಟು ಮೂಲಕ ಕೊಡುವುದು. ಗ್ರಾಂಟು ಅಲಾಟ್‌ಮಾಡಿ ನಗರಕ್ಕೆ, ತಾಲ್ಲೂಕುಗಳಿಗೆ ಇಷ್ಟು ಕೊಟ್ಟಿದ್ದೇವೆಂದು ತಿಳಿಯಪಡಿಸುವುದು ವರ್ಷದ ಕೊನೆಯ ಭಾಗದಲ್ಲಿ, ಆದ್ದರಿಂದ ಹಣ ಖರ್ಚಾಗುವುದಿಲ್ಲ. ಎರಡನೆಯದಾಗಿ ಈ ವರ್ಷ ಒಂದು ವಿಶೇಷವಿದೆ. ಈ ಶಾಸನ ಸಭೆಗಳಿಗೆ ನಾವು ಪ್ರಶ್ನೆ ಕಳುಹಿಸಿದ ಮೇಲೆ ಗ್ರಾಮಾಭಿವೃದ್ಧಿ ಕಮಿಷನರು ಕುಡಿಯುವ ನೀರಿನ ವ್ಯವಸ್ಥೆಗಾಗಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳು ಇವೆ, ಸಾಧ್ಯವಾದರೆ ತಾಲ್ಲೂಕುಗಳಲ್ಲಿ ಉಪಯೋಗಿಸಿಕೊಳ್ಳಬಹುದು ಎಂದು ಕಾಗದ ಬರೆದಿದ್ದಾರೆ. ಅದು ಬಂದು ನಾಲ್ಕೈದು ದಿವಸವಾಯಿತು. ಮಾರ್ಚಿ 31ನೆಯ ತಾರೀಖಿನೊಳಗಾಗಿ ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುತ್ತದೆ. ವರ್ಷದ ಕೊನೆಯ ಭಾಗದಲ್ಲಿ ಉಪಯೋಗಿಸಿ ಎಂದು ಹೇಳಿದರೆ ಹೇಗೆ ಖರ್ಚು ಮಾಡುವುದು? ಈ ವರ್ಷ ವಿಶೇಷವಾಗಿ ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡತಕ್ಕದ್ದು ; ಈ ನಾಲ್ಕುಲಕ್ಷ ರೂಪಾಯಿಗಳನ್ನು ಯಾವ ಯಾವ ತಾಲ್ಲೂಕುಗಳಿಗೆ ಕೇಳುತ್ತಾರೋ ಅಲ್ಲಿಗೆ ಕೊಟ್ಟು ಅದನ್ನು ಗ್ರಾಮಪಂಚಾಯಿತಿ ಹೆಸರಿನಲ್ಲಾಗಲಿ ಅಥವಾ ಬೇರೆ ಹೆಸರಿನಲ್ಲಾಗಲಿ ನಾನ್-ಲ್ಯಾಪ್ಸಬಲ್ ಗ್ರಾಂಟಾಗಿ ಟ್ರೀಟ್‌ಮಾಡಿದರೆ ತಾವು ಹೆಚ್ಚಿನ ಹಣ ಈ ಬಾಬಿಗೆ ಕೊಡಬೇಕೆಂದೇನು ಉದ್ದೇಶವನ್ನಿಟ್ಟುಕೊಂಡಿದ್ದೀರೋ ಅದು ನೆರವೇರುತ್ತದೆ, ಈ ಹಣ ಲ್ಯಾಪ್ಸಾಗದೆ ಸಾರ್ಥಕವಾಗುತ್ತದೆ. ಆದ್ದರಿಂದ ತಾವು ಈ ಮೊಬಲಗನ್ನು ನಾನ್-ಲ್ಯಾಪ್ಸಬಲ್ ಗ್ರಾಂಟಾಗಿ ಮಾಡಬೇಕೆಂದು ಮನವಿ ಮಾಡುತ್ತೇನೆ.

ಅಲ್ಲದೆ ನಾವು ಈಗ ಮೊದಲನೆಯ ಪಂಚವಾರ್ಷಿಕ ಯೋಜನೆ ಕಾರ್ಯಗತಮಾಡಿ ಪೂರೈಸಿದ್ದೇವೆ, ಗ್ರಾಮಗಳಲ್ಲಿ ಸಾಮಾನ್ಯವಾಗಿ ರೈತರ ಆರೋಗ್ಯದೃಷ್ಟಿಯಿಂದ ಪ್ರಜೆಗಳ ಆರೋಗ್ಯದೃಷ್ಟಿಯಿಂದ ಕಲ್ಪಿಸಿಕೊಡಬೇಕಾದ ಪ್ರಾಮುಖ್ಯವಾದ ಕುಡಿಯುವ ನೀರಿನ ವಸತಿಯನ್ನು ಎಲ್ಲಾ ಕಡೆಗೂ ಕಲ್ಪಿಸದಿರುವುದು ಶೋಚ

ನೀಯುವೆಂದು ಭಾವಿಸುತ್ತೇವೆ. ಏಕೆಂದರೆ ಜೀವನದಲ್ಲಿ ನಮಗೆ ಆಹಾರ, ಬಟ್ಟೆ, ವಸತಿ ಹೇಗೆ ಮುಖ್ಯವೋ ಕುಡಿಯುವ ನೀರಿನ ಪ್ರಶ್ನೆ ಕೂಡ ಅಷ್ಟೇ ಪ್ರಾಮುಖ್ಯವಾದುದು. ಆದ್ದರಿಂದ ಎರಡುವರ್ಷಗಳ ಕೆಳಗೆ ಬಹಳ ಮಂದಿ ತಿಳಿವಳಿಕೆ ಕೊಟ್ಟಾಗ ಕುಡಿಯುವ ನೀರಿನ ಭಾವಿಗಳನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಿದ್ದರು; ಅದನ್ನು ಸಾಧಿಸಿಲ್ಲ, ಅನೇಕ ಕಡೆ ಈ ಸೌಲಭ್ಯ ಕಲ್ಪನೆಯಾಗಿಲ್ಲ. ಇನ್ನೊಂದು ವಿಶೇಷ. ಹಿಂದೆ ಪ್ರತಿ ತಾಲ್ಲೂಕಿಗೂ ಹೆಚ್ಚಾಗಿ ಹಣ ಕೊಡುತ್ತಿದ್ದರು. 1955-56ರಲ್ಲಿ ಡೈರೆಕ್ಟ್ ಗ್ರಾಂಟ್ ಮೂಲಕ ಕೊಡುವುದು ಬಹಳ ಕಡಮೆಯಾಗಿದೆ. ಕಾರಣ ಗೊತ್ತಿಲ್ಲ. ಪ್ರತಿವರ್ಷಕ್ಕಿಂತಲೂ 1955-56ರಲ್ಲಿ ಈ ಬಾಬಿಗೆ ಹೆಚ್ಚು ಹಣ ಬಡ್ಜೆಟ್ಟಿನಲ್ಲಿ ಒದಗಿಸಿದರು. ಆದರೆ, ಅಲಾಟ್ ಮಾಡುವಾಗ ತಾಲ್ಲೂಕುಗಳಿಗೆ ಹಿಂದಿನ ವರ್ಷಕ್ಕಿಂತ ಏಕೆ ಕಡಮೆಯಾಯಿತು, ಹಣ ಎಲ್ಲಿಹೋಯಿತ್ ಎಂದು ವಿಚಾರಮಾಡಿ ಸಮರ್ಪಕವಾದ ಉತ್ತರವನ್ನು ಹೇಳುತ್ತೀರೆಂದು ನಿರೀಕ್ಷೆ ಮಾಡುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—1955-56ನೆಯ ಸಾಲಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಡ್ಜೆಟ್ಟಿನಲ್ಲಿ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಆ ಮೇಲೆ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಇಂಡಿಯಾ ಸರ್ಕಾರದವರು 15,50,600 ರೂಪಾಯಿಗಳನ್ನು ಕೊಟ್ಟರು. ಅದರಿಂದ ಸುಮಾರು 789 ಬಾವಿಗಳನ್ನು ತೆಗೆಸಲಾಯಿತು. ಇಷ್ಟೇ ಅಲ್ಲದೆ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂಗಳಲ್ಲೂ ಕೂಡ 39,89,000 ರೂಪಾಯಿಗಳನ್ನು ಒದಗಿಸಿತ್ತು. ಹೀಗೆ ಒಟ್ಟು 56,45,600 ರೂಪಾಯಿಗಳನ್ನು ಕುಡಿಯುವ ನೀರಿನ ಭಾವಿಗಳಿಗಾಗಿ ಒದಗಿಸಿತ್ತು.

ಶ್ರೀ ಎ .ವಿ. ನರಸಿಂಹರೆಡ್ಡಿ.—ಆದರೆ ತಾಲ್ಲೂಕಾವಾರಿ ನಮ್ಮ ಅನುಭವದ ಮೂಲಕ ಈಗಾಗಿರುವ ಕೆಲಸವನ್ನು ತಿಳಿದು ಹೇಳಬೇಕಾದರೆ ಖಂಡಿತವಾಗಿಯೂ ಎಷ್ಟು ಪ್ರಗತಿ ಸಾಧಿಸಬೇಕೆಂದಿದ್ದೆವೋ ಅಷ್ಟನ್ನು ಸಾಧಿಸಿಲ್ಲ. ಇದನ್ನು ಗಮನಿಸಿ ತೀವ್ರತೆಯಿಂದ ಪರಿಶೀಲಿಸ ಬೇಗ ಈ ಕಾರ್ಯವನ್ನು ನಡೆಸಬೇಕಾಗಿದೆಯೆಂದು ಗಮನಕ್ಕೆ ತರಲು ಬಯಸುತ್ತೇನೆ.

ರಸ್ತೆ ವಿಷಯ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ಜಿಲ್ಲಾ ಬೋರ್ಡುಗಳಿಗೆ ಹಾಗೂ ಗ್ರಾಮಪಂಚಾಯಿತಿಗಳಿಗೆ ರಸ್ತೆ ನಿರ್ಮಾಣಮಾಡಲು ಸರ್ಕಾರದವರು ಗ್ರಾಂಟು ಕೊಡುತ್ತಿದ್ದಾರೆ ಆದರೆ ಈ ಗ್ರಾಂಟು ಎಲ್ಲರಿಗೂ ಸಿಕ್ಕುತ್ತಿಲ್ಲ. ಯಾವ ಲೋಕಲ್ ಬೋರ್ಡಿನವರು ಅಥವಾ ಗ್ರಾಮ ಪಂಚಾಯಿತಿಯವರು ಮಾನ್ಯ ಮಂತ್ರಿಗಳನ್ನು ಕರೆದು ಹೆಚ್ಚಾಗಿ ಗಮನ ಸೆಳೆಯುತ್ತಾರೋ ಅವರಿಗೆ ಸಿಕ್ಕುತ್ತದೆ. ಹಾಗಿಲ್ಲದೆ ಮುಖಂಡತ್ವ ಕಡಮೆಯಾಗಿ ಕೇಳದಿರುವವರಿದ್ದರೆ ಅವರಿಗೆ ಸಂಬಂಧಪಟ್ಟ ರಸ್ತೆ ತೆಗೆದುಕೊಳ್ಳುವುದೇ ಇಲ್ಲ. ಏಕೆ ಈ ರೀತಿಯಾಗಿದೆ? ಸರ್ಕಾರಿ ಆಜ್ಞೆ ಪ್ರಕಾರ ಒಂದು ಕಾರ್ಯಕ್ರಮ ಪಟ್ಟಿ ಹಾಕಬೇಕು. ಯಾವ ಯಾವ ಗ್ರಾಮಗಳಿಗೆ ಎಷ್ಟು ಸೌಕರ್ಯವಾಗಬೇಕು ಎಂಬುದಕ್ಕೆ ಪ್ಲಾನ್ ಹಾಕಿ ಅದರ ಪ್ರಕಾರ ಕೆಲಸಮಾಡಿ ಗ್ರಾಂಟ್ ಕೊಟ್ಟರೆ ಎಲ್ಲರಿಗೂ ಸಮಾಧಾನವಾಗುತ್ತವೆ. ಒಂದೇಸಾರಿ ಸರ್ಕಾರ ಎಲ್ಲವನ್ನು ಮಾಡಬೇಕೆಂದು ಹೇಳುವುದಿಲ್ಲ. ಆದರೆ ಬೇಕಾದವರಿಗೆ ಬೇಗ ಸಹಾಯ ಮಾಡುವುದು, ಬೇಡದವರಿಗೆ ಅತ್ಯಾವಶ್ಯಕವಾಗಿದ್ದರೂ ಸಹಾಯ ನೀಡದಿರುವುದು ಸರಿಯಲ್ಲ. ಈಗಿರುವ ಕ್ರಮವನ್ನು ಪರಿಶೀಲಿಸಿ ಇರುವ ಲೋಪದೋಷಗಳನ್ನು ಸರಿಪಡಿಸುತ್ತೀರೆಂದು ನಂಬುತ್ತೇನೆ.

ಶ್ರೀ ಆರ್ ಅನಂತರಾಮ್ (ಚಾಮರಾಜಪೇಟೆ).—ಈಗ ಮಾತನಾಡಿದ ಮಾನ್ಯ ಸ್ನೇಹಿತರು ನೀರಿನ ವಿಚಾರ ಹೇಳಿದರು. ನಾನು ಹಳ್ಳಿಗಳ ಕಡೆ ಹೋಗುವುದಕ್ಕೆ ಚುನಾವಣೆ ಸಂಬಂಧದಲ್ಲಿ ಅವಕಾಶವಾಗಿದೆ. ಹಳ್ಳಿಗಳ ಕಡೆ ನೀರಿನ ವಸತಿ ಸಾಕಷ್ಟಿಲ್ಲದೆ ಬಹಳ ಕಷ್ಟ ವಾಗಿದೆ. ಹೋದ ವರ್ಷ ಸಾತನೂರು ಹತ್ತಿರವಿರುವ ಕೆಂಪೇಗೌಡನದೊಡ್ಡಿಗೆ ಒಂದು ಮದುವೆಗಾಗಿ ಹೋಗಿದ್ದೆ. ಅಲ್ಲಿ 120 ಮನೆಗಳಿವೆ. ಮದುವೆಗೆ ಯಾವುದೋ ಹಳ್ಳದಿಂದ ನೀರುತರುತ್ತಿದ್ದರು. ಹೀಗೆ ಎಷ್ಟೋ ಕಡೆ ಕುಡಿಯುವ ನೀರಿನ ಭಾವಿಗಳು ಕೂಡ ಇಲ್ಲ.

ಶ್ರೀ ಟಿ. ಚನ್ನಯ್ಯ.—ಕುಡಿಯುವ ನೀರಿನ ಭಾವಿಗಳನ್ನು ಕೊಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟು ಕೊಡುತ್ತಿದ್ದಾರೆ. ನೀರಿಲ್ಲದಿರುವ ಕಡೆಗೆ ಕೊಡುವುದಿಲ್ಲವೆಂದು ಹೇಳಿಲ್ಲ. ಆದರೆ ಗ್ರಾಮಸ್ಥರು ಕೇಳಿ ಮಾಡಿಸಿಕೊಳ್ಳಬೇಕು. ಜಿಲ್ಲಾಧಿಕಾರಿಗಳ ಬಳಿ ಹಣವಿರುತ್ತದೆ. ಯಾರಿಗೆ ಬೇಕೋ ಅವರು ಕೇಳಿ ಮಾಡಿಸಿಕೊಳ್ಳುವುದಿಲ್ಲ.

ಶ್ರೀ ಆರ್. ಅನಂತರಾಮ್.—ಅವಿದ್ಯಾವಂತರು ಕೇಳುವುದಿಲ್ಲ. ಮಧುವೆಗಾಗಿ ತಂದ ನೀರಿನಲ್ಲಿ ಕಪ್ಪೆ ಸಹ ಇತ್ತು. ಎಷ್ಟೋ ಜನರು ಅದನ್ನು ಕುಡಿದರು. ಹಳ್ಳಿಗಳಲ್ಲಿ ಹರಿಜನರಿರುವ ಎಷ್ಟೋ ಕಡೆಗಳಲ್ಲಿ ನೀರೇ ಇರುವುದಿಲ್ಲ. ಬೇರೆ ಕೋಮುಗಳವರು, ಉತ್ತಮರು ಬಾವಿಯಿದ್ದರೂ ಹರಿಜನರನ್ನು ಅಲ್ಲಿಗೆ ಬಿಡುವುದಿಲ್ಲ. ಹರಿಜನರು ಕೆರೆಗೋ ಕುಂಟೆಗೋ ಹೋಗಿ ನೀರನ್ನು ತರಬೇಕು. ಸರ್ಕಾರದವರು ಹಣ ಕೊಡುತ್ತಿದ್ದರೂ ಅದರಿಂದ ಎಷ್ಟು ಉಪಯೋಗವಾಗಿದೆಯೆಂಬುದನ್ನು ನೋಡಬೇಕು. ಭಾವಿ ತೆಗೆಯಲು ಸರ್ಕಾರದಿಂದ ಹಣ ತೆಗೆದುಕೊಂಡ ಮೇಲೆ ತೆಗೆಯುತ್ತಾರೋ, ಇಲ್ಲವೋ, ಎಂಬ ಅನುಮಾನವಿದೆ, ಮಾನ್ಯ ಮಂತ್ರಿಗಳು ಬಹಳ ಹುಷಾರಾಗಿ ಅದನ್ನು ಪರಿಶೀಲಿಸಬೇಕು. ಹಿಂದೆ ಇರಿಗೇಷನ್ ವೆಲ್ಸ್‌ಗೆ ಕೆಲವು ಕಡೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದಾಗ ಕೆಲವರು ಹಳೇ ಬಾವಿ ತೆಗೆದಿರುವುದನ್ನು ತೋರಿಸಿ ಹಣ ತೆಗೆದುಕೊಂಡರೆಂದು ಹೇಳುತ್ತಾರೆ, ಸರಿಯಾದ ವಿಚಾರ ತಿಳಿಯದು. ಎಷ್ಟೋ ಕಡೆ ಬಾವಿಗಳೇ ಇಲ್ಲವೆಂದು ಹೇಳುವುದನ್ನು ಪರೀಕ್ಷೆ ಮಾಡಿ ನೋಡಬೇಕು. ಹರಿಜನರು ಪೇಟೆಗಳಲ್ಲಿರಲಿ ಅಥವಾ ಹಳ್ಳಿಗಳಲ್ಲಿರಲಿ, ಅವರಿಗೆ ಸೌಕರ್ಯ ನೀಡಬೇಕು. ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಹರಿಜನರಿಗೆ ನೀರನ್ನು ಕೊಡದೆ ತೊಂದರೆಯಾಗಿದೆ. ಹರಿಜನ ಕೇರಿಗಳಲ್ಲಿ ಬಾವಿಗಳನ್ನಾದರೂ ತೆಗೆಸಿ ಆ ಜನರಿಗೆ ನೀರು ಸಿಕ್ಕುವ ವ್ಯವಸ್ಥೆ ಮಾಡಬೇಕು. ಮೈಸೂರು ರಸ್ತೆಯಲ್ಲಿರುವ ಅಂಜನಪ್ಪ ಗಾರ್ಡನ್‌ನಲ್ಲಿ ನೀರಿಗೆ ಬಹಳ ಕಷ್ಟವಾಗಿದೆ. ಅಲ್ಲಿ ಒಂದು ಬಾವಿ ತೆಗೆಸಿದರೆ ಒಳ್ಳೆಯದು. ಬಿನ್ನಿಮಿಲ್ ಟ್ಯಾಂಕಿನ ನೀರನ್ನು ತಂದು ಉಪಯೋಗಿಸುವ ಸ್ಥಿತಿಯಿದೆ. ಇಂಥ ಕಡೆಗಳಲ್ಲಿ ಬಾವಿ ತೆಗೆಸಿದರೆ ಒಳ್ಳೆಯದು.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಜನ ಜಾನುವಾರುಗಳು ತಿರುಗಾಡುವುದಕ್ಕೆ ಸರ್ಕಾರಿ ರಸ್ತೆಗಳಿರುವುದಿಲ್ಲ. ಎಷ್ಟೋ ಸಾರ್ತಿ ನಾವು ಹೋಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ರಸ್ತೆಗಳನ್ನು ಮಾಡಿಸಿ ಕೊಡುವಂತೆ ಪ್ರಾರ್ಥನೆ ಮಾಡಿಕೊಂಡೆವು. ಆದರೆ ಏನೂ ಸಾರ್ಥ

(ಶ್ರೀ ಸಿ. ಟಿ. ಹನುಮಂತಯ್ಯ.)

ಕವಾಗಲಿಲ್ಲ. ಆದರೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಜನರು ಹೋಗಿ ಅವರಲ್ಲಿ ತಮಗೆಬೇಕಾದ ಕಾರ್ಯಗಳ ಬಗ್ಗೆ ಅರಿಕೆಮಾಡಿಕೊಳ್ಳುತ್ತಿಲ್ಲ. ಅದಕ್ಕಾಗಿ ಆ ಕೆಲಸಗಳು ನಡೆದಿಲ್ಲ ಎಂಬುದಾಗಿ ಈಗತಾನೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಉದಾಹಣೆಗೆ ಹೇಳುವುದಾದರೆ ನಾನೇ ನನ್ನ ಸ್ವಂತ ಖರ್ಚಿನಿಂದ ಆ ಶಿರಾ ತಾಲ್ಲೂಕು ಗುಮ್ಮನಹಳ್ಳಿಯಲ್ಲಿ ಹರಿಜನರಿಗೋಸ್ಕರವಾಗಿ ಒಂದು ಕುಡಿಯುವ ನೀರಿನ ಬಾವಿಯನ್ನು ತೆಗೆಸಿರುತ್ತೇನೆ. ಅಲ್ಲಿ ಈಗ ಮಣ್ಣು ಕೆಲಸವೆಲ್ಲಾ ಪೂರೈಸಿದೆ. ಅದಕ್ಕೆ ಕಲ್ಲು ಕಟ್ಟಿಸಿಕೊಡಿ ಎಂದು ಸರ್ಕಾರಕ್ಕೆ ಕೇಳಿಕೊಂಡೆನು. ಆದರೆ ಆ ಕಾರ್ಯವಿನ್ನೂ ಆಗಿಲ್ಲ. ಹಾಗೇ ಇದೆ. ಇದರಿಂದ ಅಲ್ಲಿ ಒಂದು ಮಗೂ ಸಹ ಬಾವಿಗೆ ಬಿತ್ತು. ಹೀಗೆಲ್ಲಾ ಅನಾನುಕೂಲಗಳಾಗಿ ಆ ಕೆಲಸವಿನ್ನೂ ಆಗಿಲ್ಲ. ಇನ್ನು ಅದೇ ತಾಲ್ಲೂಕಿನಲ್ಲಿ ಗೌಡಗೆರೆ ಹೋಬಳಿ ಗುಂಡಪುಚಿಕ್ಕನಹಳ್ಳಿಯಲ್ಲಿ ಹೀಗೆ ಒಂದು ಬಾವಿಗೆ ಮಣ್ಣು ಕೆಲಸ ಮುಗಿದು ಕಲ್ಲು ಕಟ್ಟಿಸಲು ಅದೂ ಹಾಗೇ ಉಳಿದಿದೆ. ಆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಹೊಸಹಳ್ಳಿ ಗ್ರಾಮದಲ್ಲಿಯೂ ಕೂಡ ಇದೇ ರೀತಿ ಆಗಿದೆ. ಇನ್ನೂ ಎಷ್ಟೋ ಕಡೆಗಳಲ್ಲಿ ಈ ಹರಿಜನರ ಬಾವಿಗಳಿಗೆ ಸರ್ಕಾರದವರು ದುಡ್ಡನ್ನು ಕೊಟ್ಟಿಲ್ಲ. ಈ ಬಾಬಿಗಾಗಿ ಒದಗಿಸಿರತಕ್ಕ ಫಂಡಿನಲ್ಲಿ ವಿಶೇಷವಾಗಿ ದುಡ್ಡು ಉಳಿದು ಹೋಗಿದೆ. ಆದರೆ ಕೊಟ್ಟಿರತಕ್ಕ ಹಣವನ್ನಾದರೂ ಸಹ ಅವರು ಸರಿಯಾಗಿ ವಿನಿಯೋಗ ಮಾಡುತ್ತಿಲ್ಲ. ಇನ್ನು ಮುಂದಕ್ಕಾದರೂ ಈ ರೀತಿಯ ಪುಕಾರುಗಳಿಗೂ ಮತ್ತು ದೂರುಗಳಿಗೂ ಅವಕಾಶವಿರುವ ರೀತಿಯಲ್ಲಿ ಆಯಾಯ ಜಿಲ್ಲೆಗೆ ಸಂಬಂಧಪಟ್ಟಂಥಾ ಮೊಖ್ತೇಸರರಾದ ಅಧಿಕಾರಿಗಳು ಹಳ್ಳಿ ಹಳ್ಳಿಗೂ ಹೋಗಿ ಎಲ್ಲೆಲ್ಲಿ ಇಂಥ ಬಾವಿಗಳಿಗೆ ಆವಶ್ಯಕತೆ ಇದೆಯೋ ಅಲ್ಲೆಲ್ಲಾ ಈ ಬಾವಿಗಳನ್ನು ತೆಗೆಸಲು ಅವರಿಗೆ ಸೂಕ್ತ ತಿಳಿವಳಿಕೆಯನ್ನು ಕೊಟ್ಟು ಮತ್ತು ಸಾಕಷ್ಟು ಹಣವನ್ನು ಸಹ ಒದಗಿಸಿ ಕೊಡಬೇಕಾಗಿ ಕೋರುತ್ತೇನೆ.

ಇನ್ನು ಈ ರಸ್ತೆಗಳ ವಿಚಾರ. ಕೆಲವು ಕಡೆ ರಸ್ತೆಗಳನ್ನೇನೋ ಮಾಡಿಸಿದ್ದಾರೆ. ಆದರೆ ಆ ರಸ್ತೆಗಳನ್ನು ಮಾಡಿಸುವಾಗ ಸರಿಯಾಗಿ ಎಸ್ಟಿಮೇಟ್ ಮಾಡಿ ಮಾಡಿಸಿಲ್ಲ. ಸುಮ್ಮನೆ ಮಣ್ಣನ್ನು ಎತ್ತಿ ಆ ರಸ್ತೆ ಮೇಲೆ ಹಾಕಿರುತ್ತಾರೆ. ಹಾಗೆ ರಸ್ತೆಗೆ ಹೊಸದಾಗಿ ಮಣ್ಣು ಕಾಂಗಾರಿ ನಡೆಸುವಾಗ ಮೊದಲು ನೀರು ಹಾಕಿ ಅನಂತರ ಮಣ್ಣು ಹಾಕಬೇಕಾಗಿತ್ತು. ಆದರೆ ಆ ರೀತಿ ಮಾಡಿಲ್ಲ. ಮಾನ್ಯ ಪಿ. ಡಬ್ಲ್ಯು. ಮಂತ್ರಿಗಳು ಆ ಕಡೆ ಪ್ರವಾಸ ಬಂದಿದ್ದಾಗ ನಾನು ಇದನ್ನೆಲ್ಲಾ ಅವರಿಗೆ ಪ್ರತ್ಯಕ್ಷವಾಗಿ ತೋರಿಸಿದ್ದೇನೆ. ಪಟ್ಟನಾಯ್ಕನಹಳ್ಳಿಯಿಂದ ಯಂಥೊರೆಗೆ ಒಂದು ರಸ್ತೆ ಮಾಡಿದ್ದಾರೆ. ಆ ರಸ್ತೆಯನ್ನು ಹೀಗೇ ಮಾಡಿದ್ದರು. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂಧಾಗ ಅವರು ಸ್ವತಃ ಅದನ್ನು ಪರೀಕ್ಷೆ ಮಾಡಿ, ಇಂಥ ಕೆಲಸಕ್ಕಾಗಿ ಯಾರು ಬಿಲ್ಲನ್ನು ಮಂಜೂರು ಮಾಡಿದರು ಎಂಬುದಾಗಿ ವಿಚಾರಣೆ ನಡೆಸಿದರು. ಇಂಥಾ ಅಕೃತ್ಯಗಳನ್ನು ನಡೆಸಿದವರಿಗೆ ಬಿಲ್ ಪಾಸ್ ಮಾಡಬಾರದೆಂದು ಸೂಚನೆ ಸಹ ಕೊಟ್ಟರು. ಆದರೆ ಆ ಹಳೇ ಕಾಲದಲ್ಲಿ ಮಾಡಿದಂಥ ರಸ್ತೆಗಳು ಈಗಲೂ ಚಿರಸ್ಮರಣೀಯವಾಗಿ ಉಳಿದಿವೆ. ಇನ್ನಾದರೂ ಹೀಗೆ ನ್ಯಾಯ, ಧರ್ಮ, ಕರ್ಮಗಳನ್ನು ಬಿಟ್ಟು ಕೆಲಸ ನಡೆಸತಕ್ಕಂಥ ಈ ಹೊಸ ಕಂಟ್ರಾಕ್ಟರುಗಳಿಗೆ ಇಂಥಾ ಕಾಂಗಾರಿಗಳನ್ನು ಖಂಡಿತ ಕೊಡಬಾರದು. ಧರ್ಮಮಾರ್ಗದಲ್ಲಿ ಉತ್ತಮ ದರ್ಜೆಯ ಕೆಲಸ ನಡೆಸತಕ್ಕಂಥ ಪರೋಪಕಾರ ಬುದ್ಧಿಯುಳ್ಳ ಹಳೆಯ ಕಂಟ್ರಾಕ್ಟರುಗಳಿಗೇ ಈ ಕೆಲಸಗಳನ್ನು ಕೊಡತಕ್ಕದ್ದು ಸೂಕ್ತವೆಂದು ಸಲಹೆ ಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈಗತಾನೆ ಮಾನ್ಯ ಮಂತ್ರಿಗಳು ಕುಡಿಯುವ ನೀರಿನ ಬಾವಿಗಳಿಗಾಗಿ ಎಷ್ಟೇ ಹಣ ಖರ್ಚಾಗುವುದಾದರೂ ಅಷ್ಟನ್ನೂ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಆ ರೀತಿ ಭರವಸೆಯನ್ನೂ ಕೂಡ ಕೊಟ್ಟಿದ್ದೇವೆಂದು ಅಪ್ಪಣೆ ಕೊಡಿಸಿದರು. ಇಷ್ಟೇ ಅಲ್ಲದೆ ಜಿಲ್ಲಾ ಡೆವಲಪ್‌ಮೆಂಟ್ ಅಧಿಕಾರಿಗಳಲ್ಲಿ ಸಹ ಈ ಬಗ್ಗೆ ಬೇಕಾದಷ್ಟು ದುಡ್ಡಿದೆ. ಎಂಬುದಾಗಿ ಹೇಳಿದ್ದಾರೆ. ಆದರೆ ನಮ್ಮ ತುಮಕೂರು ಜಿಲ್ಲೆಯಿಂದ ಕಳೆದ ಡಿಸೆಂಬರ್ ತಿಂಗಳಿನಲ್ಲಿ ಆ ಜಿಲ್ಲೆಯಲ್ಲಿ ಆಗಬೇಕಾಗಿರತಕ್ಕ ಬಾವಿ ಕೆಲಸಕ್ಕಾಗಿ ಎರಡು ಲಕ್ಷ ರೂಪಾಯಿಗಳ ಗ್ರಾಂಟ್ ಬೇಕಾಗಿರುತ್ತದೆ, ಆ ಮೊಬಲಗನ್ನು ಕೂಡಲೇ ಮಂಜೂರು ಮಾಡಬೇಕೆಂದು ಒಂದು ರೆಸಲ್ಯೂಷನ್ನನ್ನು ಮಾಡಿ ಸರ್ಕಾರಕ್ಕೆ ಕಳುಹಿಸಲಾಯಿತು. ನನ್ನ ಒಂದು ತಾಲ್ಲೂಕಿನಲ್ಲೇ ಈ ಸಣ್ಣ ಪುಟ್ಟ ಬಾವಿ ಕಾಂಗಾರಿಗಳ ಬಗ್ಗೆ 48 ಸಾವಿರ ರೂಪಾಯಿಗಳೂ ಬಾಕಿ ನಿಂತುಹೋಗಿದೆ. ಹೀಗಿದ್ದರೂ ಮಂತ್ರಿಗಳು ಬೇಕಾದಷ್ಟು ದುಡ್ಡನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ನಾವು L.S.G. ಕಮಿಷನರ್ ಹತ್ತಿರಹೋಗಿ ವಿಚಾರ ಮಾಡಿದರೆ ಅವರು ತಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಮಾನ್ಯ ಮಂತ್ರಿಗಳು ಅವರಲ್ಲಿ ಬೇಕಾದಷ್ಟು ಉಳಿದಿದೆ ಎಂದು ಹೇಳಿರತಕ್ಕದ್ದು ಬಹಳ ಆಶ್ಚರ್ಯ. ಆದರೆ ನಾನು ಈ ಬಾವಿಗಳ ವಿಚಾರವಾಗಿ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣ ಈಗಾಗಲೇ ವಿಚಾರಗಳನ್ನೆಲ್ಲಾ ಮಾನ್ಯ ನರಸಿಂಹರೆಡ್ಡಿಯವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಮಂಜಪ್ಪನವರು ಪ್ರತಿಯೊಂದು ಗ್ರಾಮಕ್ಕೂ ಬಾವಿಗಳನ್ನೊದಗಿಸಲು ಎಷ್ಟು ದುಡ್ಡನ್ನು ಒದಗಿಸಬೇಕೋ ಅಷ್ಟು ದುಡ್ಡನ್ನು ಒದಗಿಸುತ್ತೇವೆಂದು ಹೇಳಿದ್ದರು. L.S.G. ಕಮಿಷನರ್ ಅವರು ತಾವೇ ಖುದ್ದಾಗಿ ಗ್ರಾಮಗಳಿಗೆ ಹೋಗಿ ನೋಡಿ ಎಲ್ಲೆಲ್ಲಿ ಈ ಬಾವಿಗಳಿಗೆ ತುಂಬ ಅಗತ್ಯವಿದೆಯೋ ಅದನ್ನು ಪರಿಶೀಲನೆಮಾಡಿ ಅನಂತರ ದುಡ್ಡನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಈ ದಿವಸ ಅನೇಕ ಕಡೆ ಬಾವಿಗಳ ಕೆಲಸವನ್ನು ಪೂರೈಸಿದ್ದರೂ ಆ ಕೆಲಸವನ್ನುಮಾಡಿದ ಕಂಟ್ರಾಕ್ಟರುಗಳಿಗೆ ದುಡ್ಡನ್ನು ಪಾವತಿ ಮಾಡಿಲ್ಲ.

ಇನ್ನು ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಕೆಲವು ರಸ್ತೆಗಳನ್ನು ಮಾಡಿಸಿ ಅವುಗಳ ಆಡಳಿತವನ್ನು ಈಗ ಜಿಲ್ಲಾಬೋರ್ಡುಗಳಿಗೆ ವಹಿಸಿರುತ್ತಾರೆ. ಆದರೆ ಆ ರಸ್ತೆಗಳ ಕೆಲಸವಿನ್ನೂ ಪೂರ್ತಿಯಾಗಿರುವುದಿಲ್ಲ ಅನೇಕ ಕಡೆಗಳಲ್ಲಿ ಆ ರಸ್ತೆಗಳಿಗೆ ಕಲ್‌ವರ್ಟ್, ಮೊಹರಿ, ಸೇತುವೆ ಇತ್ಯಾದಿಗಳನ್ನು ಕಟ್ಟಿಸಬೇಕಾಗಿದೆ. ಇದಕ್ಕೂ ವಿಶೇಷ ಹಣವನ್ನು ಖರ್ಚುಮಾಡಬೇಕಾಗಿದೆ. ನೂರಾರು ಮೈಲಿ I.V.C. ರಸ್ತೆಯನ್ನು ಬೇರೆ ಈಗ ಜಿಲ್ಲಾಬೋರ್ಡಿಗೆ ವಹಿಸಿದ್ದಾರೆ. ಆದರೆ ಈ ದಿವಸ I.V.C. ರಸ್ತೆಗಳೂ ಮತ್ತು ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಮಾಡಿಸಿದಂಥ ರಸ್ತೆಗಳೆಲ್ಲಾ ಗ್ರಾಮಾಭಿವೃದ್ಧಿ ನಿಧಿಯಲ್ಲಿ ಸಾಕಷ್ಟು ಹಣವಿಲ್ಲದೆ ಹಾಳಾಗಿ ಹೋಗುತ್ತಿವೆ. ಇನ್ನು ಈ ಬಾಬಿಗೋಸ್ಕರವಾಗಿ

ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಂತರ ರೂಪಾಯಿಗಳನ್ನು ಒದಗಿಸಿದ್ದೇವೆಂದು ಬೇರೆ ಹೇಳುತ್ತಿದ್ದಾರೆ. ಆದರೆ, ಮುಂದೆ ಇದು ಇನ್ನು ಯಾವ ರೀತಿ ಆಗುತ್ತದೆಯೋ ಅದನ್ನೆಲ್ಲಾ ಈಗಲೇ ಹೇಳುವುದಕ್ಕಾಗುವುದಿಲ್ಲ. ಆದಕಾರಣ ನಾನು ಈಗ ಈ I.V.C. ಮತ್ತು D.R.F. ರಸ್ತೆಗಳಿಗೋಸ್ಕರವಾಗಿ ಸರ್ಕಾರದವರು ವಿಶೇಷ ನಿಧಿಯನ್ನೊದಗಿಸಿ ಇವುಗಳನ್ನು ಉಳಿಸಿಕೊಂಡು ಬರಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಈ ದಿವಸ ಗ್ರಾಮಾಭಿವೃದ್ಧಿ ಸಮಿತಿಗಳವರು ಮಾಡುತ್ತಿರುವ ಶಿಫಾರ್ಸುಗಳೂ ಮತ್ತು ಸಲಹೆಗಳೂ ಒಂದು ಸಫಲವಾಗುತ್ತಿಲ್ಲ. ಅವರಿಗೆ ಬೇಕಾದ ಕಡೆಗಳಲ್ಲಿ ಅವರಿಗೆ ಅನುಕೂಲವಾಗುವಂತೆ ತೀರ್ಮಾನ ಮಾಡಿದ್ದಾರೆ. ಹೀಗೆ ಕಾರ್ಯಗಳು ನಡೆಯುತ್ತಿದ್ದರೆ ಸರ್ಕಾರದವರು ಬಾಕಿ ಗ್ರಾಮಾಭಿವೃದ್ಧಿ ಸಮಿತಿಗಳವರ ತೀರ್ಮಾನಕ್ಕೆ ಯಾವ ಬೆಲೆಯನ್ನೂ ಕೊಟ್ಟಹಾಗೆ ಆಗುವುದಿಲ್ಲ. ಸರ್ಕಾರದವರು ಈ ಬಾವಿಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದರು. ಮೊಬಲಗಿನಲ್ಲಿ ಸುಮಾರು 33 ಲಕ್ಷಕ್ಕೆ ಮೇಲ್ಪಟ್ಟು ಹಣ ಲ್ಯಾಪ್ಸ್ ಆಗುವ ಸ್ಥಿತಿಯಲ್ಲಿದೆ. ಗ್ರಾಮಸ್ಥರು ಅವರ ಭಾಗದ ದುಡ್ಡನ್ನು ಕೊಡಬೇಕೆಂದು ಕೇಳುವುದಕ್ಕೆ ಮುಂಚಿತವಾಗಿ ಅವರಿಗೆ ಆ ಹಣವನ್ನು ಕೊಡಲು ಶಕ್ತಿಯಿದೆಯೋ ಇಲ್ಲವೋ ಎಂಬುದನ್ನು ಸಹ ತಿಳಿಯದೆ 50 ಲಕ್ಷ ರೂಪಾಯಿಗಳನ್ನು ಈಗಾಗಲೇ ಒದಗಿಸಿದ್ದೇವೆಂದು ಹೇಳಿದ್ದಾರೆ. ಈ ಬಾಬಿಗೆ ನ್ಯಾಯವಾಗಿ ಎಷ್ಟು ಹಣ ಖರ್ಚಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಕೆಲವು ಪಂಪ್ ಸೆಟ್ಸ್ ಮತ್ತು ಮೋಟಾರುಗಳನ್ನು ಕೊಂಡುಕೊಳ್ಳಲು ಆರ್ಡರ್ ಮಾಡಿದ್ದೇವೆ. 70 ಪಂಪ್‌ಸೆಟ್ಸ್‌ಗಳನ್ನು ಕೊಂಡುಕೊಳ್ಳಲು S.P.C.ಗೆ ತಿಳಿಸಲಾಗಿದೆ. ಈ ಹಣವನ್ನು ನಾವು ಲ್ಯಾಪ್ಸ್ ಆಗುವುದಕ್ಕೇನೂ ಅವಕಾಶ ಕೊಡುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಂತೋಷ. ಇನ್ನು ನೀರನ್ನು ಸರಬರಾಯಿ ಮಾಡುವುದಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ಯೋಜನೆಯ ಬಗ್ಗೆ ಗ್ರಾಮಾಂತರ ಪ್ರದೇಶಗಳ ನೀರಿನ ಸರಬರಾಯಿಗಾಗಿ ದುಡ್ಡನ್ನು ಖರ್ಚುಮಾಡುವುದೇನೋ ಅಗತ್ಯ ಮತ್ತು ಒಳ್ಳೆಯದು. ಆದರೆ ಈ ಮೊಬಲಗನ್ನು ವರ್ಷಾಖೈರಿನಲ್ಲಿ ಒದಗಿಸಿದ್ದಾರೆ. ಈ ಮೊಬಲಗನ್ನು ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಮೊಬಲಗನ್ನು ಒದಗಿಸಬೇಕೋ ಅಷ್ಟನ್ನೂ ಕೂಡಲೇ ಒದಗಿಸಿ, ಆ ಮೊಬಲಗನ್ನೆಲ್ಲ ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನರ್‌ಗಳು ಖರ್ಚುಮಾಡಲು ಅವಕಾಶ ನೀಡಬೇಕೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

4 P.M.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಮೊನ್ನೆ ಮುಖ್ಯಮಂತ್ರಿಗಳು ಈ ಆಯವ್ಯಯದ ಚರ್ಚೆಯಮೇಲೆ ಮಾತನಾಡುತ್ತಾ, ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಯಾವಾಗ ಮಾಡಬೇಕೆಂಬುದನ್ನು ಇನ್ನೂ ನಿರ್ಧಾರಮಾಡಿಲ್ಲ ಆದರೆ ಈ ಡಿಸ್ಟ್ರಿಕ್ಟ್ ಬೋರ್ಡುಗಳ ಆಡಳಿತವನ್ನು ನಡೆಸುವುದಕ್ಕೆ ಡಿಸ್ಟ್ರಿಕ್ಟ್ ಕಮಿಟಿಗಳನ್ನು ಏರ್ಪಾಡು ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ ಎಂದು ಹೇಳಿದರು. ಡೆಪ್ಯುಟಿ ಕಮಿಷನರು ಆ ಕಮಿಟಿಗೆ ಪ್ರೆಸಿಡೆಂಟರಾಗಿರಬೇಕು ಅಥವಾ ತಮಗೆ ಬೇಕಾದವರು ಯಾರನ್ನಾದರೂ ಪ್ರೆಸಿಡೆಂಟರನ್ನಾಗಿ ಮಾಡಬಹುದು ಎನ್ನುವ ತರಹದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸರ್ಕಾರದವರಿಗೆ ಸಲಹೆ ರೂಪದಲ್ಲಿ ಹೇಳಬೇಕೆಂದಿದ್ದೇನೆ. ಏನೆಂದರೆ ಈ ಕಮಿಟಿಗಳಿಗೆ ಸದಸ್ಯರನ್ನು ಚುನಾವಣೆ ಮಾಡುವಾಗ ಅಥವಾ ಆರಿಸಿಕೊಳ್ಳುವಾಗ ಮತ್ತು ನಾಮಕರಣ ಮಾಡುವಾಗ ಅಲ್ಲದೆ ಈ ಕಮಿಟಿಗೆ ಪ್ರೆಸಿಡೆಂಟರು ಅಥವಾ ಚೇರ್ಮನ್‌ರು ಎಂದು ಏನು ಮಾಡುತ್ತೀರೋ ಅವರನ್ನು ಹೀಗೆ ನಿಮಗೆ ಬೇಕಾದವರು ಎಂಬ ಭಾವನೆಯನ್ನು ಬಿಟ್ಟು—ಏಕೆ ಹೇಳುತ್ತೇನೆ ಎಂದರೆ ನಿನ್ನೆ ಅವರು ಹೇಳಿದ ಧೋರಣೆ ಮತ್ತು ಅವರ ಹಿಂದಿನ ನಡವಳಿಕೆಗಳಿಂದ ಹಾಗೆ ಕಾಣುತ್ತದೆ—ನ್ಯಾಯವಾದ ರೀತಿಯಲ್ಲಿ ಚುನಾವಣೆ ನಡೆಸುವುದು ಒಳ್ಳೆಯದು. ಹಾಗಲ್ಲದೆ ನಿಮಗೆ ಬೇಕಾದವರನ್ನು ಚುನಾವಣೆ ಮಾಡಿಕೊಳ್ಳುವುದು ಒಳ್ಳೆಯದಲ್ಲ. ಮಾನ್ಯಸದಸ್ಯರೊಬ್ಬರು ತಾಲ್ಲೂಕು ಕಮಿಟಿಗಳನ್ನು ಮಾಡಿದ್ದೀರಿ ಆದರೆ ಅವರು ಯಾವ ಕಾರ್ಯಕ್ರಮವನ್ನು ಆಚರಣೆಗೆ ತರಲು ಮನಸ್ಸು ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ಕಾರಣ, ನನ್ನ ಅನುಭವದಲ್ಲಿ ಹೀಗಿದೆ, ಈ ಕಮಿಟಿಗಳಿಗೆ ಯಾವ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಸರ್ಕಾರದವರು ತಮಗೆ ಬೇಕಾದವರನ್ನೇ ಸೇರಿಸಿ ಕೊಂಡು ಈ ಕಮಿಟಿಗಳನ್ನು ಮಾಡಿದ್ದಾರೆ. ಅವರ ಅಭಿಪ್ರಾಯದಲ್ಲಿ ಯಾವುದು ನಡೆಯಬೇಕೆಂದಿರುತ್ತದೋ ಅದು ಜಾರಿಗೆ ಬರುತ್ತದೆ ಇಲ್ಲದೇ ಇದ್ದರೆ ಇಲ್ಲ. ಈ ತಾಲ್ಲೂಕು ಬೋರ್ಡುಗಳಲ್ಲಿ ತಾಲ್ಲೂಕಿನ ಮುಖಂಡರುಗಳನ್ನು ಕೇಳಿ ಅವರ ಸಲಹೆ ತೆಗೆದುಕೊಂಡು ಸದಸ್ಯರುಗಳನ್ನು ನಾಮಕರಣ ಮಾಡಿದ್ದೇವೆ ಎಂದು ಹೇಳುತ್ತಾರೆ. ನಾನು ಹೇಳುತ್ತೇನೆ ನಮ್ಮನ್ನು ಯಾರೂ ಕೇಳಲಿಲ್ಲ. ನಾನು ಅಸೆಂಬ್ಲಿ ಮೆಂಬರಾಗಿದ್ದೇನೆ. ಮಂಡ್ಯ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿದ್ದೆ, ಮತ್ತು ಮದ್ದೂರು ತಾಲ್ಲೂಕಿನಲ್ಲೇ ಇದ್ದೇನೆ, ಹೀಗಿದ್ದೂ ಕೂಡ ಮದ್ದೂರು ತಾಲ್ಲೂಕು ಬೋರ್ಡನ್ನು ರಚನೆ ಮಾಡುವಾಗ ನನ್ನನ್ನು ಯಾರೂ ಕೇಳಲಿಲ್ಲ. ಇನ್ನಾರನ್ನು ಕೇಳಿಮಾಡಿದರೋ ನನಗೆ ಗೊತ್ತಿಲ್ಲ. ಯಾರೋ ತಮಗೆ ಬೇಕಾದವರನ್ನು ಕೇಳಿಕೊಂಡು ತಾಲ್ಲೂಕಿನ ಮುಖಂಡರನ್ನೆಲ್ಲಾ ಕೇಳಿಮಾಡಿದ್ದೇವೆ ಎಂದರೆ ನನಗೇನೋ ಅವರ ಮಾತು ಬಹಳ ವಿಚಿತ್ರವಾಗಿ ಕಾಣುತ್ತದೆ. ಆ ರೀತಿ ನಾಚಿಕೆ ಇಲ್ಲದೆ ಮಾತನಾಡುತ್ತಾರಲ್ಲ ಅದಕ್ಕೆ ಅವರನ್ನು ಮೆಚ್ಚಬೇಕು. ಅಸೆಂಬ್ಲಿ ಮೆಂಬರುಗಳ ಸಲಹೆಯನ್ನು ತೆಗೆದುಕೊಂಡು ಅವರನ್ನು ಅಲ್ಲಿ ನೇಮಕಮಾಡಿದ್ದೇವೆ ಎಂದು ಹೇಳುತ್ತಾರೆ. ಮದ್ದೂರು ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ ಆ ತಾಲ್ಲೂಕು ಬೋರ್ಡಿಗೆ 14 ಜನರನ್ನು ನಾಮಕರಣ ಮಾಡಿದ್ದಾರೆ. ನನ್ನನ್ನು ಕೂಡ ಅದರಲ್ಲಿ ಸೇರಿಸಿದ್ದಾರೆ. ನಾನು ಅಸೆಂಬ್ಲಿಯ ಮೆಂಬರು ಆದ್ದರಿಂದ ನನ್ನನ್ನು ಬಿಡುವುದಕ್ಕೆ ಆಗಲಿಲ್ಲವೋ ಏನೋ, ನನ್ನ ಹೆಸರೂ ಇದೆ. ನಾಲ್ಕು ಹೋಬಳಿಯಲ್ಲಿ ಒಂದು ಹೋಬಳಿಯಿಂದ 7 ಜನ ಸದಸ್ಯರನ್ನು ತೆಗೆದುಕೊಂಡು ಬಾಕಿ ಮೂರು ಹೋಬಳಿಯಿಂದ ನನ್ನನ್ನೂ ಸೇರಿಕೊಂಡು ಉಳಿದ ಏಳು ಜನರನ್ನು ಆರಿಸಿಕೊಂಡಿದ್ದಾರೆ. ಹೀಗೆ ಸಮಿತಿಗಳನ್ನು ನೇಮಕಮಾಡಿ, ಆ ಸಮಿತಿಗಳು ಕೈಕೊಳ್ಳತಕ್ಕ ನಿರ್ಧಾರಕ್ಕೆ ಯಾರುತಾನೆ ಬೆಲೆ ಕೊಡುತ್ತಾರೆ ಅಥವಾ ಯಾರುತಾನೆ ಅದಕ್ಕೆ ಸಹಕಾರ ನೀಡುತ್ತಾರೆ ! ನಾನು ಈ ಅಸೆಂಬ್ಲಿಯಲ್ಲಿ ಈ ಅಧಿವೇಶನದಲ್ಲೇ ಆಯವ್ಯಯ ಪಟ್ಟಿ ಮೇಲೆ ಮಾತನಾಡುವಾಗಲೂ ಕೂಡ ಹೇಳಿದೆ.

(ಶ್ರೀ ಎಚ್. ಕೆ. ವೀರಣ್ಣಗೌಡ.)

ಈ ಸ್ವಪಕ್ಷ ಪರಪಕ್ಷಗಳ ನೀತಿಯನ್ನು ಅನುಸರಿಸಿ ಪ್ರತಿಯೊಂದು ಸಣ್ಣ ಆಡಳಿತ ಕಾರ್ಯವನ್ನೂ ಕೂಡ ತಮ್ಮನ್ನೇ ಯಾರು ಅನುಸರಿಸಿಕೊಂಡು ಹೋಗುತ್ತಾರೋ ಅವರನ್ನು ಅವನು ಬೀದಿಯಲ್ಲಿ ಹೋಗುವ ದಾಸಯ್ಯನಾಗಲಿ, ಕಳ್ಳಭಟ್ಟಿ ತಯಾರು ಮಾಡುವ ಕೀಳುದರ್ಜೆಯವನಾಗಲಿ ಯಾರಾದರೂ ಆಗಲಿ ಬೆನ್ನು ತಟ್ಟಿ ಅವನ ಹೆಗಲಮೇಲೆ ಕೈಹಾಕಿಕೊಂಡು ಈ ರೀತಿ ಸಮಿತಿಗಳನ್ನು ಮಾಡಿದರೆ ಏನೆಂದು ಹೇಳುವುದು? ಇನ್ನು ಸಮಿತಿಯ ಮೆಂಬರುಗಳಾದ ನನ್ನಂಥವರು ಏನು ಮಾಡುವುದಕ್ಕಾಗುತ್ತದೆ 'ಪರಿಷೆಯಲ್ಲಿ ಗೋವಿಂದ' ಎಂದು ಎಲ್ಲರೂ ಏನು ಹೇಳುತ್ತಾರೋ ಅದರಂತೆ ಹೋಗಬೇಕಾಗುತ್ತದೆ. ನಾನು ಆಗಲೇ ಹೇಳಿದಹಾಗೆ ಈ ತಾಲ್ಲೂಕು ಸಲಹಾ ಸಮಿತಿಗಳಿಗೆ ಮಾನ್ಯಸದಸ್ಯರು ಯಾರಿದ್ದಾರೋ ಅವರಿಗೆ ಪ್ರತಿನಿಧಿಸ್ವರೂಪ ಇಲ್ಲ. ನಮ್ಮ ತಾಲ್ಲೂಕು ಕಮಿಟಿಯಲ್ಲಿ ಇರತಕ್ಕ ಮುಖಂಡರು ಎಂದು ಏನೋ ಹೇಳುತ್ತಾರೋ ಅವರ ಪೈಕಿ ನಾಲ್ಕು ಜನ ನನಗೆ ಚೆನ್ನಾಗಿ ಗೊತ್ತು. ನಾನು ಆ ತಾಲ್ಲೂಕಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆ, ವಿಧಾನಸಭೆ ಚುನಾವಣೆ, ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿ ಚುನಾವಣೆಗಳ ಸಂಬಂಧದಲ್ಲಿ ಹತ್ತಾರು ಸಾರಿ ತಿರುಗಿದ್ದೇನೆ; ಆ ತಾಲ್ಲೂಕಿನಲ್ಲಿರತಕ್ಕ ಪ್ರತಿಯೊಂದು ಮನೆಯೂ ನನಗೆ ಗೊತ್ತು. ಆದರೂ ಈ ಕಮಿಟಿಗೆ ನಾಮಕರಣವಾಗಿ ಬಂದಿರತಕ್ಕವರು ಯಾರೋ ಗುರುತಿಲ್ಲದ, ಪರಿಚಯವಿಲ್ಲದವರನ್ನು ನಾಮಕರಣಮಾಡಿ, ಬಹುಭಾಗ ಪ್ರಾತಿನಿಧ್ಯವಿರತಕ್ಕ ಸ್ಥಳೀಯ ಮುಖಂಡರೇ ಇದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರೆ ಇದರಲ್ಲಿ ಏನೋ ಒಂದು ವಿಚಿತ್ರವಾದ ಅರ್ಥ ಕಂಡು ಬರುತ್ತಾಯಿದೆ. ಯಾರು ಒಳ್ಳೆಯ ದೃಷ್ಟಿಯಿಂದ ಕಾಂಗ್ರೆಸಿಗೆ ಕೆಟ್ಟಹೆಸರು ಬರದೆ ಇರಲಿ, ಸರ್ಕಾರದ ಪಕ್ಷ ಕಾಂಗ್ರೆಸ್ ಪಕ್ಷ ಒಂದೇ ಎಂಬ ಮನೋಭಾವದಿಂದ ಪ್ರಜೆಗಳಿಗೆ ಒಳ್ಳೆಯದಾಗಲಿ ಎಂದು ಕಟುವಾಗಿ ಟೀಕೆಮಾಡುತ್ತಾರೋ ಅವರ ವಿಷಯದಲ್ಲಿ ಇವನು ಏನೋ ಬಿಗಿಯಾಗಿದ್ದಾನೆ ಇರಲಿ; ಇವನಿಗೆ ತಕ್ಕ ಬುದ್ಧಿ ಕಲಿಸೋಣ ಎಂಬ ಮನೋಭಾವ ಇರುವ ರೀತಿಯಲ್ಲಿ ಮೊನ್ನೆ ಉತ್ತರ ಕೊಡುವಾಗ ಅವರು ಮಾತನಾಡಿದರು. ಅದು ತಮಗೆ ಗೊತ್ತಾಯಿತೋ ಇಲ್ಲವೋ ನಾನಂತೂ ಆ ರೀತಿ ಮನಗಂಡೆ. ಅಂತೂ ಅವರ ಅಭಿಪ್ರಾಯದಲ್ಲಿ ಪ್ರಾತಿನಿಧ್ಯವುಳ್ಳ ಮುಖಂಡರನ್ನೇ ನೇಮಕಮಾಡಿದ್ದಾರೆ ಎಂದು ಇದೆ. ನನ್ನ ಸಲಹೆ ಏನೆಂದರೆ, ಡಿಸ್ಟ್ರಿಕ್ಟ್ ಕಮಿಟಿಮಾಡಿ, ಅಧ್ಯಕ್ಷರನ್ನು ಚುನಾಯಿಸಿ ಅಥವಾ ನಾಮಕರಣಮಾಡಿ, ಏನಾದರೂ ಮಾಡಿ; ಆದರೆ ಪಕ್ಷಪಾತಮನೋಭಾವವನ್ನು ಮಾತ್ರ ತೋರಿಸಬೇಡಿ. ಸಾರ್ವಜನಿಕ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕಾದರೆ ಎಲ್ಲರನ್ನೂ ಯೋಗ್ಯ ರೀತಿಯಲ್ಲಿ ನೋಡಿಕೊಳ್ಳುವ ನೀತಿಯನ್ನು ಸರ್ಕಾರ ಅನುಸರಿಸಬೇಕೆಂದು ಸಲಹೆಮಾಡುತ್ತೇನೆ.

ಶ್ರೀ ಟಿ. ಚನ್ನಯ್ಯ.—ಈ ಸಮಿತಿಗಳಲ್ಲಿ ಸದಸ್ಯರನ್ನು ನೇಮಕಮಾಡುವಾಗ ಸರ್ಕಾರದವರು ಪಕ್ಷಪಾತ ದೃಷ್ಟಿಯಿಂದ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಿಮಗೆ ಗೊತ್ತಿಲ್ಲ.

ಶ್ರೀ ಟಿ. ಚನ್ನಯ್ಯ.—ಡೆಪ್ಯುಟಿ ಕಮಿಷನರಿಂದ ಹೆಸರುಗಳನ್ನು ತರಿಸಿಕೊಂಡು ನೇಮಕಮಾಡಿದ್ದೇವೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಕಡೂರು ತಾಲ್ಲೂಕಿನಲ್ಲಿ ಸುಮಾರು 300 ಗ್ರಾಮಗಳು ಇವೆ. 300 ಗ್ರಾಮಗಳ ಪೈಕಿ ಸರ್ಕಾರದವರು ಕೊಟ್ಟಿರುವ ಲೆಕ್ಕದ ಪ್ರಕಾರ ಇನ್ನೂ 100 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳು ಆಗಬೇಕು ಎಂದು ಹೇಳಿದ್ದಾರೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದು ಪ್ರಾಮುಖ್ಯ ಎಂದು ಹೇಳಿ ಹಣವನ್ನು ಒದಗಿಸಿದ್ದರು. ಆದರೂ ಕೂಡ ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ. ಶ್ರೀಮಾನ್ ನರಸಿಂಹರೆಡ್ಡಿಯವರು ಹೇಳಿದಹಾಗೆ, ಈ ಬಾವಿಗಳಿಗಾಗಿ ಕೊಟ್ಟಿರುವ ಗ್ರಾಂಟು ಬಹಳ ನಿಧಾನವಾಗಿ ಮಂಜೂರು ಮಾಡಿರುತ್ತೀರಿ. ತಾವಿನ್ನು ಪರಿಶೀಲನೆಮಾಡಿ ಮೊದಲೇ ಹೆಚ್ಚಿಗೆ ಗ್ರಾಂಟು ಕೊಡುವುದು ಬಹಳ ಸಾಧುವಾದುದಾಗಿದೆ ಎಂದು ಹೇಳಿ ಸರ್ಕಾರದವರ ಗಮನಕ್ಕೆ ತರುತ್ತೇನೆ. ಕೊನೆಯ ಪಕ್ಷ ಅಕ್ಟೋಬರ್, ನವೆಂಬರ್‌ನಲ್ಲಿ ಕೊಟ್ಟರೂ ಪರವಾಗಿಲ್ಲ. ಅದು ಬಿಟ್ಟು ಜನವರಿ, ಫೆಬ್ರುವರಿ ತಿಂಗಳಿನಲ್ಲಿ ಹಣ ಮಂಜೂರುಮಾಡಿ, ಹಣ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲದೆ ಲ್ಯಾಪ್ಸ್ ಆಗುವಂತೆ ಮಾತ್ರ ಮಾಡಬಾರದೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎರಡನೆಯದಾಗಿ ನಾನು ಈ ಶಾಸನಸಭೆಗೆ ಬಂದಮೇಲೆ 4 ವರ್ಷದಿಂದೀಚೆಗೆ ಗ್ರಾಮಾಂತರಗಳಲ್ಲಿ ಅದರಲ್ಲೂ ಕಡೂರು ತಾಲ್ಲೂಕಿನಲ್ಲಿ ದೊಡ್ಡ ಗ್ರಾಮಗಳಿವೆ, ಸಾವಿರಕ್ಕೆ ಮೇಲ್ಪಟ್ಟಿರತಕ್ಕ 60-70 ಗ್ರಾಮಗಳಿವೆ ಅವಕ್ಕೆ ಸರಿಯಾದ ರಸ್ತೆಗಳು ಇಲ್ಲ ಎಂದು ಅನೇಕಸಾರಿ ಹೇಳಿದ್ದೇನೆ. ಜಿಲ್ಲಾಬೋರ್ಡುಗಳಿದ್ದಾಗ ಅವರ ಗಮನಕ್ಕೆ ತಂದದ್ದಾಯಿತು ಜಿಲ್ಲಾಬೋರ್ಡುರದ್ದಾದ ಮೇಲೆ ಸರ್ಕಾರದವರ ಗಮನಕ್ಕೂ ಮತ್ತು ಮಂತ್ರಿಗಳ ಗಮನಕ್ಕೂ ತಂದು ಹೋದ ಅಸೆಂಬ್ಲಿ ಅಧಿವೇಶನದಲ್ಲೂ ಹೇಳಿದೆ, ಕಡೂರು ತಾಲ್ಲೂಕು ಬಹಳ ಪ್ರಾಮುಖ್ಯವಾದದ್ದು, ನಮ್ಮ ಜಿಲ್ಲೆಯಲ್ಲಿ ಇದು ದೊಡ್ಡ ತಾಲ್ಲೂಕು, ಅನೇಕ ದೊಡ್ಡದೊಡ್ಡ ಗ್ರಾಮಗಳಿವೆ. ಮಾನ್ಯಮಂತ್ರಿಗಳು ಪ್ರವಾಸಮಾಡುವಾಗ ನಮ್ಮ ತಾಲ್ಲೂಕಿಗೆ ಬಂದ ಸಂದರ್ಭದಲ್ಲಿ ಅನೇಕ ಬಿನ್ನವತ್ತಳೆಗಳನ್ನು ಅಲ್ಲಿನ ಜನ ಕೊಟ್ಟಿದ್ದಾರೆ ಮತ್ತು ನಾನು ಈ ಅಸೆಂಬ್ಲಿಯಲ್ಲಿ ಅನೇಕಸಾರಿ ಹೇಳಿದಮೇಲೆ ರಸ್ತೆ ವಿಚಾರದಲ್ಲಿ ಹೆಚ್ಚು ಗಮನಕೊಟ್ಟು ದುರಸ್ತುಮಾಡಿಸುತ್ತೇವೆ ಎಂದು ಪಬ್ಲಿಕ್‌ವರ್ಕ್ಸ್ ಮಂತ್ರಿಗಳು ಜವಾಬು ಕೊಟ್ಟರೂ ಕೂಡ ಇನ್ನೂ ಆ ವಿಷಯದಲ್ಲಿ ಗಮನ ಕೊಟ್ಟಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅಲ್ಲದೆ ಈ ರಸ್ತೆ ವಗೈರೆಗಳಿಗಾಗಿ ಸರ್ಕಾರದವರು ಗ್ರಾಂಟು ಮಂಜೂರುಮಾಡುವಾಗ ಆದಷ್ಟು ಮುಂಚಿತವಾಗಿ ಮಂಜೂರು ಮಾಡುವುದು ಒಳ್ಳೆಯದು ಏಕೆಂದರೆ ಮೊನ್ನೆತಾನೆ ಎರಡು ತಿಂಗಳ ಹಿಂದೆ $1\frac{1}{2}$ ಲಕ್ಷ ರೂಪಾಯಿ ನಮ್ಮ ಜಿಲ್ಲೆಗೆ ಕೊಟ್ಟು. ಮಾರ್ಚಿ ಆಖೈರಿನ ಒಳಗೆ ಖರ್ಚು ಮಾಡಬೇಕೆಂದು ಸಲಹೆಮಾಡಿದ್ದರು. ಈ ಗ್ರಾಂಟನ್ನು ಯಾವರೀತಿ ಖರ್ಚುಮಾಡಬೇಕೆಂದು ಹೇಳಿ ನಾನು ಕೇಳಿದೆ. ಸುಮ್ಮನೆ ಎಸ್ಟಿಮೇಟ್‌ಮಾಡಿ ಬಿಟ್ಟುಬಿಟ್ಟರೆ ಆಗಲಿಲ್ಲ. ಸರ್ಕಾರದವರು ಹೆಚ್ಚು ಮುತುವರ್ಜಿವಹಿಸಿ ಟೌನ್‌ಗಳಲ್ಲಿ ಮತ್ತು ಸಿಟಿಗಳಲ್ಲಿ ಕುಡಿಯುವ ನೀರಿಗಾಗಿ ಎಷ್ಟು ಸಹಾಯ ಮಾಡುತ್ತೀರಿ ಅದಕ್ಕಿಂತ ಹೆಚ್ಚಿಗೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳಿಗೆ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ತಾಲ್ಲೂಕು ಸಲಹಾ ಸಮಿತಿಗಳನ್ನು, ತಾಲ್ಲೂಕು ಅಡ್ವೈಸರಿ ಕಮಿಟಿಗಳನ್ನು ಮಾಡಿರುವುದರಲ್ಲಿ ಬಹಳ ಪಕ್ಷಪಾತ ಮಾಡಿದ್ದಾರೆಂಬುದರಲ್ಲಿ ಸಂಶಯವಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹರಿಜನ ಮೆಂಬರುಗಳಿದ್ದಾಗ್ಯೂ ಆ ಹರಿಜನ ಸದಸ್ಯರಾರನ್ನೂ ಅದರಲ್ಲಿ ಸೇರಿಸಿಕೊಳ್ಳದಿರುವುದು ಬಹಳ ಪಕ್ಷಪಾತ ಮಾಡಿದಂತಾಗಿದೆಯೆಂದು ಹೇಳಬೇಕಾಗಿದೆ. ಚಿಂತಾಮಣಿ ಪ್ರದೇಶದಿಂದ ಹನುಮಂತಪ್ಪ ಎಂಬವರನ್ನು ನಾಮಿನೇಷನ್ ಮಾಡಿದ್ದಾರೆ. ಆ ಆಸಾಮಿಯೇ ಊರಲ್ಲಿಲ್ಲ. ಇಂಥವರನ್ನು ನೇಮಕಮಾಡಿದ್ದಾರೆ. ಶಿಡ್ಲಘಟ್ಟದಲ್ಲಿ ಮೇಲೂರು ಗ್ರಾಮದಲ್ಲಿ ನಾಲ್ಕು ಜನರನ್ನು ಒಂದೇ ಗ್ರಾಮದಿಂದ ತೆಗೆದುಕೊಂಡಿದ್ದಾರೆ. ಜಂಗಮಕೋಟೆ ಹೋಬಳಿಯ ಒಂದೇ ಹೋಬಳಿಯಿಂದ ಒಂಬತ್ತು ಜನರನ್ನು ತೆಗೆದುಕೊಂಡಿದ್ದಾರೆ. ಯಾವ ಮಹಾನುಭಾವರು ಹೀಗೆ ಮಾಡಬೇಕೆಂದು ಆಶಿಸಿ ಹೇಳಿದರೋ ಗೊತ್ತಿಲ್ಲ. ಹೀಗೆ ನಾಮಿನೇಷನ್ ಮಾಡುವುದರಲ್ಲೂ ಪಕ್ಷಪಾತ ಮನೋಭಾವನೆಯನ್ನು ತೋರಿಸುವುದೇ? ಎಲ್ಲರನ್ನೂ ಕೇಳಿದ್ದೇವೆ ಎಂದು ಹೇಳುತ್ತಾರೆ: ಶಾಸನ ಸಭೆಯ ಸದಸ್ಯರನ್ನು ಕೇಳಿ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ನನಗೆ ತಿಳಿದಮಟ್ಟಿಗೆ ಶಾಸನಸಭೆಯವರನ್ನು ಯಾರನ್ನೂ ಕೇಳಿಲ್ಲ. ಅಲ್ಲದೆ ಹೀಗೆ ಕೇಳಿದ್ದರೂ, ಒಂದೇ ಊರಿನಿಂದ ನಾಲ್ಕು ಜನರನ್ನು ತೆಗೆದುಕೊಳ್ಳಿ ಎಂದು ಯಾರು ಸಲಹೆಯಿತ್ತರೋ ಗೊತ್ತಿಲ್ಲ. ಇನ್ನು ಮುಂದಾದರೂ ನಾಮಿನೇಷನ್ ಮಾಡುವಾಗ ತಾಲ್ಲೂಕು ಮುಖಂಡರನ್ನು ಕೇಳಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಒಬ್ಬ ಸದಸ್ಯರು.—ನಾಮಿನೇಷನ್ ಇನ್ನೂ ಬೇಕೇ?

ಶ್ರೀ ಎ. ಮುನಿಯಪ್ಪ.—ಈಗ ನಾಮಿನೇಷನ್ ಮಾಡುತ್ತಿದ್ದೀರಲ್ಲಾ. ಅದಿರುವವರೆಗೂ ಒಂದು ರೀತಿ ನೀತಿಯನ್ನನುಸರಿಸುವುದು ನ್ಯಾಯ.

ಬಾವಿಗಳ ವಿಚಾರದಲ್ಲಿ, ಮಂತ್ರಿಗಳು ಹೇಳಿದರು, ಜನರು ಸುಮ್ಮನೆ ಕೇಳುತ್ತಾರೆ ಅರ್ಜಿಗಳನ್ನು ಕೊಡುವುದಿಲ್ಲ ಎಂದು. ಶಿಡ್ಲಘಟ್ಟ ತಾಲ್ಲೂಕು ಗೆಜ್ಜಗಾನಹಳ್ಳಿಗೆ ಊರು ಹುಟ್ಟಿದಲಾಗಾಯ್ತು ಸರಿಯಾದ ನೀರಿನ ವ್ಯವಸ್ಥೆಯಿಲ್ಲದೆ ಕೂಲಿ ಕೊಟ್ಟು ನೀರು ತರಿಸುತ್ತಿದ್ದಾರೆ. ಹತ್ತು ಅರ್ಜಿಗಳನ್ನು ಕೊಟ್ಟಿದ್ದಾಗಿದೆ. ಅನೇಕ ವರ್ಷಗಳಿಂದ ಪ್ರತಿದಿವಸವೂ ಆರು ಆಣೆಯಂತೆ ಕೂಲಿ ಕೊಟ್ಟು ನೀರು ಕೊಂಡುಕೊಳ್ಳುವುದೇ ಆಗಿದೆ.

ಒಬ್ಬ ಸದಸ್ಯರು.—ಹರಿಜನರ ಮನೆಗಳೆಷ್ಟಿವೆ?

ಶ್ರೀ ಎ. ಮುನಿಯಪ್ಪ.—ಮೂವತ್ತು ಮನೆಗಳಿವೆ. ಇಂಥ ಗ್ರಾಮಗಳು ಅನೇಕವಿವೆ. ಆದ್ದರಿಂದ ಸರ್ಕಾರದವರು ಇಂತಹವುಗಳ ವಿಷಯದಲ್ಲಿ ಒಂದು ವರದಿ ತರಿಸಿಕೊಳ್ಳಬೇಕು. ತಾಲ್ಲೂಕ್ ಲೆವಲ್‌ನಲ್ಲಿ ಯಾವ ಯಾವ ಊರಿನಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂಬುದರ ಬಗ್ಗೆ ವರದಿ ತರಿಸಿಕೊಂಡು ಅಂಥವರಿಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಸ್ಪೆಷಲ್ ಗ್ರಾಂಟ್ ಕೊಡುವ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದಲೂ ಮತ್ತು ಮುಖಂಡರುಗಳಿಂದಲೂ ಯಾವ ವರದಿಯನ್ನೂ ತರಿಸಿಕೊಳ್ಳದೆ ತಮಗೆ ಬೇಕಾದವರಿಗೆ ಸ್ಪೆಷಲ್ ಗ್ರಾಂಟು ಕೊಡುವುದು ಸರಿಯಲ್ಲ. ನಾನು ಅನೇಕ ಹಳ್ಳಿಗಳಲ್ಲಿ ವಾರದ ಕೆಲಸವನ್ನು ಮಾಡಿಸಿಕೊಟ್ಟಿದ್ದೇನೆ. ಇನ್ನು ಮಿಕ್ಕ ಕೆಲಸವನ್ನು ಮಾಡಿಸಿ ಕೊಡಿ ಎಂದು ಹೇಳಿದರೆ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ಈಗ ತಾವು ಗ್ರಾಂಟ್ ಕೊಟ್ಟಿರುವ ಎಷ್ಟೋ ಹಳ್ಳಿಗಳಲ್ಲಿ ಹಣ ಖರ್ಚಾಗದಿರುವುದು ಬೇಕಾದಷ್ಟಿದೆ. ಆದ್ದರಿಂದ ಇನ್ನು ಮುಂದೆ ಈ ಗ್ರಾಂಟ್‌ಗಳನ್ನು ಕೊಡುವಾಗ ಗ್ರಾಮದ ಮುಖಂಡರುಗಳನ್ನು ಮತ್ತು ಅಧಿಕಾರಿಗಳನ್ನು ಕೇಳಿ, ಗ್ರಾಂಟ್ ಕೊಟ್ಟು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ವರದಿ ತರಿಸಿಕೊಂಡು ಹಂಚಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ)—ಸ್ವಾಮಿ, ಮೊದಲನೆಯದಾಗಿ ನಾನು ತಾಲ್ಲೂಕ್ ಕಮಿಟಿಗಳ ವಿಚಾರ ಹೇಳಬಯಸುತ್ತೇನೆ. ನಾನು ಮೊದಲಿನಿಂದಲೂ ಇದಕ್ಕೆ ವಿರೋಧಮಾಡುತ್ತಿರುವವನು. ಈಗ ಮಾನ್ಯ ಸದಸ್ಯರು ಮಾತನಾಡುವುದನ್ನು ನೋಡಿದರೆ, ಕಾಂಗ್ರೆಸ್ಸಿನ ಎದುರುಪಕ್ಷದವರೇ ಅಲ್ಲ, ಕಾಂಗ್ರೆಸ್ ಪಕ್ಷದವರೂ ಕೂಡ ಈ ಏರ್ಪಾಡನ್ನು ಬೈಯ್ಯುತ್ತಿದ್ದಾರೆ. ಏಕೆ ಸರ್ಕಾರದವರು ಇಂಥ ಕೆಲಸಮಾಡುತ್ತಾರೋ ಗೊತ್ತಿಲ್ಲ. ಮುಂದೆ ಇಂಥ ಕೆಲಸವನ್ನು ಸರ್ಕಾರದವರು ಮಾಡಬಾರದು ಎಂದು ನಾನು ಸರ್ಕಾರದವರಿಗೆ ಎಚ್ಚರಿಕೆ ಕೊಡುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡ್ ಕಮಿಟಿಗಳನ್ನು ಮಾಡುವುದರಲ್ಲೂ ಸರಿಯಾಗಿ ಮಾಡಿಲ್ಲ. ಚುನಾವಣೆಯಮೇಲೆ ಮಾಡಿದರೆ ಯಾರಿಂದಲೂ ಆಕ್ಷೇಪಣೆಯಿರುವುದಿಲ್ಲ.

ಆಮೇಲೆ, ರಸ್ತೆಗಳ ವಿಚಾರ, ಮೊದಲು 1,500 ಮೈಲಿಗಳ ರಸ್ತೆಯನ್ನು ಮಾಡಬೇಕೆಂದು ಮಾಡಿದ್ದರು. ಅಂಥಾದ್ದು ಈಗ ಆಗಿರುವ ಪರಿಸ್ಥಿತಿಯನ್ನು ನೋಡಿದರೆ ಕೊನೆಗೆ ಯಾವ ಪರಿಸ್ಥಿತಿಗೆ ಬರುತ್ತದೋ ಅನುಮಾನವಾಗಿದೆ. ಐ.ವಿ.ಸಿ. ರಸ್ತೆಗಳನ್ನು ಮಾಡುವುದರಲ್ಲಿ ಎರಡು ವಿಧವಿತ್ತು. ಒಂದು ಸರ್ಕಾರದವರು ಪಿ.ಡಬ್ಲ್ಯು.ಡಿ. ಇಲಾಖೆಯಿಂದ ಮಾಡತಕ್ಕಂಥಾದ್ದು. ಇನ್ನೊಂದು ಡಿಸ್ಟ್ರಿಕ್ಟ್ ಬೋರ್ಡ್‌ನವರು ಮಾಡತಕ್ಕದ್ದು. ಅದರೆ, ಈ ಐ.ವಿ.ಸಿ. ರಸ್ತೆಗಳನ್ನು ಇವತ್ತಿನವರೆಗೂ maintain ಮಾಡುವವರು ಯಾರೆಂದು ತೀರ್ಮಾನವಾಗಿಲ್ಲ.

ಶ್ರೀ ಟಿ. ಚನ್ನಯ್ಯ.—8-8-1953 ರಲ್ಲಿಯೇ ಇದು ತೀರ್ಮಾನವಾಗಿ ರೆವಿನ್ಯೂ ಏಜೆನ್ಸಿಯಿಂದ ಇವು maintain ಆಗಬೇಕೆಂದು ಆರ್ಡರ್ ಆಗಿದೆ.

ಶ್ರೀ ಬಿ. ಹುಚ್ಚೇಗೌಡ.—ಆದರೆ ರಸ್ತೆಗಳ ಚಾರ್ಜ್ ತೆಗೆದುಕೊಳ್ಳಬೇಕಾದರೆ ಅಲ್ಲಿರುವ materialsಗಳ Statement ಮತ್ತು No Payment Certificateಗಳನ್ನು ಹಾಕಿಕೊಡಬೇಕು. ಅದೊಂದನ್ನೂ ಹಾಕಿಕೊಡುವುದಿಲ್ಲ. ಹೀಗಾಗುತ್ತಿರುವುದು ಇವೊತ್ತಿಂದ ಅಲ್ಲ. ಹಿಂದಿನಿಂದ ಆರ್ಡರ್ ಆಗಿರುವ ರಸ್ತೆಗಳ ವಿಚಾರವೂ ಹಾಗೆಯೇ ಬಿದ್ದಿದೆ.

ಆಮೇಲೆ ರಿಲೀಫ್ ಕಾಮಗಾರಿಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಗಳನ್ನು ಮಾಡಿಸಿದ್ದಾರೆ. ಅವುಗಳನ್ನೂ ಡಿಸ್ಟ್ರಿಕ್ಟ್ ಬೋರ್ಡಿನವರು ತೆಗೆದುಕೊಳ್ಳಬೇಕೆಂದು ಆರ್ಡರ್ ಆಗಿದೆ. ಅವೂಕೂಡ ಇದೇ ಸ್ಥಿತಿಯಲ್ಲಿವೆ.

ಇನ್ನು N.E.S. ರಸ್ತೆಗಳ ವಿಚಾರ. ಇವುಗಳನ್ನು ಮುಂದೆ ಯಾರು maintain ಮಾಡಬೇಕೆಂಬುದನ್ನು ಯೋಚನೆಮಾಡಿಲ್ಲ. ಪಂಚಾಯಿತಿಯವರು ಮಾಡುತ್ತಾರೆಯೇ? ಅವರು ಮಾಡುವುದಕ್ಕೆ ಸಾಧ್ಯವಿಲ್ಲ. ರಸ್ತೆಗಳು ತಯಾರಾದಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವಹಿಸಿಕೊಡಬೇಕು. ಇಲ್ಲದಿದ್ದರೆ, ಸಾಧ್ಯವಾದರೆ ಈ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡಲಿ.

ಇನ್ನೊಂದು ವಿಷಯ. ಬಾಣಸಂದ್ರದಲ್ಲಿ ನೀರು ಸರಬರಾಯಿ ಮಾಡುವುದಕ್ಕೆ 44 ಸಾವಿರ ರೂಪಾಯಿಗಳ ಒಂದು ಸ್ಕೀಮು ತಯಾರಾಯಿತು. ಆಗಿನ ಕಾಲದಲ್ಲಿ ನೀರಿನ ತೊಂದರೆ ಬಹಳವಾಗಿತ್ತು. ಒಂದು

(ಶ್ರೀ ಬಿ. ಹುಚ್ಚೇಗೌಡ.)

ಮೈಲಿಯಿಂದ ನೀರು ತರಬೇಕಾಗಿತ್ತು. ಕೊನೆಗೆ 35,900 ರೂಪಾಯಿಗಳಿಗೆ ಅದು ಸ್ಯಾಂಕ್ಷನ್ ಆಯಿತು. ಅಂಥಾದ್ದನ್ನು ಇನ್ನೂ ಮಾಡಿಲ್ಲ. ಈಗ ಆ ಸ್ಕೀಮು ಎಲ್ಲಿದೆಯೋ ಗೊತ್ತಿಲ್ಲ. ಯಾವ ಪಟ್ಟಿಯಲ್ಲಿ ನೋಡಿದರೂ ಆ ಎಸ್ಟಿಮೇಟೇ ಕಾಣುವುದಿಲ್ಲ. ಹೋದವರ್ಷ ಎಸ್ಟಿಮೇಟನ್ನು ತರಿಸಿ ನೋಡುತ್ತೇವೆಂದು assurance ಕೊಟ್ಟರು. ಆದರೂ ಏನೂ ಮಾಡಿಲ್ಲ.

ರೂರಲ್ ಡೆವಲಪ್‌ಮೆಂಟ್ ಇಲಾಖೆಯ ಸಂಬಂಧದಲ್ಲಿ ಹಣ ಬಹಳ ಪೋಲಾಗುತ್ತಿದೆ. 33 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದ್ದೀರಿ. ಸರಿಯಾಗಿ 33 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದರೆ ನಂದನ ವನವನ್ನು ಮಾಡಬಹುದು. N.E.S. ಬ್ಲಾಕುಗಳಿಗೆ ಕೇಂದ್ರ ಸರ್ಕಾರದವರು ಏನು ಗ್ರ್ಯಾಂಟ್ ಕೊಡುತ್ತಾರೆಯೋ ಅದನ್ನು ಸಂಸ್ಥಾನದ ಸರ್ಕಾರದವರು ತೆಗೆದುಕೊಂಡು ಯಶಸ್ವಿಯಾದ ಡೈರೆಕ್ಷನ್ ಕೊಟ್ಟು ಕೆಲಸ ನಡೆಸಬೇಕು. ಹಾಗಿಲ್ಲದೆ ಒಂದು ಊರಿನಲ್ಲಿ ಒಂದು ಡ್ರೈನೇಜ್ ಕೆಲಸ ನಡೆದರೂ ಅದು ಇಂಡಿಯಾ ಸರ್ಕಾರಕ್ಕೆ ಹೋಗಬೇಕೆಂದರೆ ಬಹಳ ಕಷ್ಟ. ಅವರು ದುಡ್ಡು ಕೊಡುವುದು ಇವರು ಉಸ್ತುವಾರಿ ಮಾಡುವುದು ಎಂದರೆ ಆ ಕೆಲಸದಲ್ಲಿ ಉದಾಸೀನತೆಯಿರುತ್ತದೆ. ಇದನ್ನು ಹೇಳುವವರು ಕೇಳುವವರೇ ಇಲ್ಲ. ಆದ್ದರಿಂದ ಎಲ್ಲವನ್ನೂ ಸರ್ಕಾರದವರೇ Bill ಮಾಡಿಕೊಂಡು ಸಾಕಷ್ಟು ಉಸ್ತುವಾರಿ ವಹಿಸಿ ಕೆಲಸಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ರಸ್ತೆಗಳಿಗೆ ಸಂಬಂಧಪಟ್ಟಹಾಗೆ ಎರಡು ಮೂರು ವಿಚಾರಗಳನ್ನು ಹೇಳಬೇಕಾಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ಮುಳಬಾಗಲಿನಿಂದ ಸುಮಾರು 18 ಮೈಲಿ ದೂರ ಮದನಹಳ್ಳಿಯವರೆಗೆ ಒಂದು ಐ.ವಿ.ಸಿ. ರಸ್ತೆಯಿದೆ. ಚಿಂತಾಮಣಿ ತಾಲ್ಲೂಕು ಕೋರಲಪರ್ತಿಯಿಂದ ಕೈವಾರದ ಮೂಲಕ ಹಿರೇಕಟ್ಟಿಗೇನಹಳ್ಳಿಯವರೆಗೆ ಹನ್ನೆರಡು ಮೈಲಿ ಉದ್ದ ರಸ್ತೆಯಾಗಬೇಕಾದುದು ಮಧ್ಯದಲ್ಲಿ ಮೂರೂವರೆ ಮೈಲಿಯಲ್ಲಿ ನಿಂತುಹೋಗಿದೆ. ಕೈವಾರ ಯಾತ್ರಾಸ್ಥಳ. ಪೂರ್ವ ಪಶ್ಚಿಮದ ಕಡೆಗಳಿಂದಲೂ ಯಾತ್ರಾರ್ಥಿಗಳು ಅಲ್ಲಿಗೆ ಬರುತ್ತಾರೆ. ನಾಲ್ಕು ವರ್ಷಗಳ ಹಿಂದೆ ನಾನು ಈ ಸಭೆಗೆ ಸದಸ್ಯನಾದ ಮೇಲೆ ಎರಡುಸಾರಿ ಈ ವಿಷಯವನ್ನು ಸಭೆಯಮುಂದೆ ತಂದಿದ್ದೆ. ಅನೇಕ ಅರ್ಜಿಗಳನ್ನು ಜನ ಕೊಟ್ಟಿದ್ದಾರೆ. ಇಷ್ಟಾದರೂ ಆ ಕೆಲಸ ನಡೆದಿಲ್ಲ. ಇದರಿಂದ ಹತ್ತು ಹನ್ನೆರಡು ಗ್ರಾಮಗಳಿಗೆ ತೊಂದರೆಯಾಗಿದೆ.

ಎರಡನೆಯದು ಕೋಲಾರದಿಂದ ಸುಗಟೂರು ಮಾರ್ಗವಾಗಿ ಚಿಂತಾಮಣಿಗೆ ಒಂದು ರಸ್ತೆ ಇದೆ. ಇದನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸಿದ್ದಾರೆ. ಅಲ್ಲಿ ಒಂಭತ್ತು ಬಸ್ಸುಗಳು ಸಂಚಾರ ಮಾಡುತ್ತಿವೆ. ಆ ಬಸ್ಸುಗಳಿಂದ ಬಂದ ಹಣವನ್ನು ಆ ರಸ್ತೆಗೆ ಖರ್ಚುಮಾಡಿದರೂ ಆ ರಸ್ತೆಯನ್ನು ಎಷ್ಟೋ ಚೆನ್ನಾಗಿಡಬಹುದು. ಸುಗಟೂರಿನ ಹತ್ತಿರ ಪಾಲಾರ್ ನದಿ ಹರಿಯುತ್ತಿದೆ. ಆ ನದಿಗೆ ಒಂದು ಸೇತುವೆ ಕಟ್ಟುವುದಕ್ಕೆ ಎಂಟು ಹತ್ತು ವರ್ಷಗಳ ಹಿಂದೆ ಒಂದು ಅಂದಾಜು ತಯಾರು ಮಾಡಿದರು. ಅದೇನಾಯಿತೋ ಗೊತ್ತಿಲ್ಲ. ಮಳೆಗಾಲದಲ್ಲಿ ದಾಟಬೇಕಾದರೆ ಬಹಳ ಕಷ್ಟ. ಹತ್ತು ಹನ್ನೆರಡು ದಿವಸವಾದರೂ ಬಸ್ಸುಗಳಾಗಲಿ ಜನರಾಗಲಿ ಒಂದುಕಡೆಯಿಂದ ಇನ್ನೊಂದು ಕಡೆಗೆ ಬರುವುದಕ್ಕಾಗುವುದಿಲ್ಲ. ಆ ಗ್ರಾಮಗಳಲ್ಲಿ ಯಾರಿಗಾದರೂ ಕಾಯಿಲೆಕಸಾಲೆಯಾಗಿ ಕೋಲಾರಕ್ಕೆ ಹೋಗಬೇಕಾದರೆ ಸಾಧ್ಯವಿಲ್ಲವಾಗಿದೆ. ಕೋರ್ಟುಗಳಿಗೆ ಬರಬೇಕಾದರೂ ಜನರಿಗೆ ಕಷ್ಟ. ಆದಕಾರಣ, ಸರ್ಕಾರದವರು ಇವಕ್ಕೆ ಗಮನಕೊಟ್ಟು ಸೇತುವೆಯನ್ನು ಕಟ್ಟಿಸಬೇಕು.

ಇನ್ನೊಂದು ಮಾತು. ತಿಮ್ಮಸಂದ್ರ, ಮಹಮದ್‌ಪುರ, ಯರ್ರಕೋಟೆ, ಜುಂಜನಹಳ್ಳಿ ಗ್ರಾಮಗಳಲ್ಲಿ ಹರಿಜನಕೇರಿ ಬಡಾವಣೆಗಳಿಗೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಐದಾರು ವರ್ಷಗಳ ಹಿಂದೆಯೇ ಅಕ್ವೈರ್ ಮಾಡಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳು ಬಂದು ನೋಡಿದ್ದಾರೆ. ಹೀಗಿದ್ದರೂ ಇದುವರೆಗೂ ಕಾರ್ಯತಃ ಏನೂ ಮಾಡಿಲ್ಲ. ಅನೇಕ ಅರ್ಜಿಗಳು ಬಂದಿವೆ. ಇದನ್ನು ಬೇಗ ಮಾಡಿ ಹರಿಜನರಿಗೆ ಸಹಾಯ ಮಾಡಬೇಕು. ನಾನಾಗಲೇ ಹೇಳಿದ ರಸ್ತೆ ಕೆಲಸಗಳನ್ನು ಸೇತುವೆ ಕೆಲಸವನ್ನು ಅದರಲ್ಲಿಯೂ ಕೈವಾರ ರಸ್ತೆಯನ್ನು ಜಾಗ್ರತೆ ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

Sri T. MARIAPPA (Mysore City North).—I would like to say a few words on this subject. Rural Development works unfortunately received a very severe set-back after 1952-53. When the Development Committees were abolished, I thought the Government would set up Administrative Committees or other agencies to carry on rural development work. For well-nigh three to 3½ years, there was vascillation and no proper arrangements were made to carry on the rural development work. On the very floor of this House, there were criticisms that the rural development work had been neglected. You may remember, Sir, when your predecessor the Hon'ble Sri Siddiah presided on one occasion, it was urged that the Government should take early steps to bring into being an agency to carry on this work without any interruption. If you kindly see the Budget figures, ever since 1952-53, you see that meagre provision had been made for rural development work. Sir, they also changed the administrative set up of the previous Rural Development Department. That was one of the reasons why even the Government under its auspices were not able to carry on the work and even the provision was so meagre. Now we have to think very seriously of the need for properly setting up an agency to carry on the rural development work. In the year 1952-53, since the introduction of Community Development Projects and also the introdution of the N.E.S., we have to revise the set up with

regard to other taluks where N.E.S. blocks have not been introduced. What was done in Mysore ever since 1932, when for the first time the rural development work was undertaken? The Government have set up some agency to look after the immediate needs of the rural areas. To begin with, what are known as model villages were started, where villages were selected and development works were carried out so that the adjoining villages may copy on the same lines. But that did not work up to the expectations of the Government. Therefore they had to re-organise the rural development work again. During the time of Sri Gundappa Gowda, he drew up a plan for five years and he introduced what was known as Hobli Development Scheme. It worked for a period of five years. In accordance with the wishes expressed in this House, the whole thing had to be re-organised so that the administrative set up could be established in each taluk and so that all the taluks could undertake the rural development work at the same time. That was in force for nearly four years. During those years, you will kindly see that enough provision was made not only for rural water supply, inter-village communication, village improvement and sanitation, but also for the amelioration of the Depressed Classes. From the taluk right up to the Centre, there were not only advisory committees, but there were also co-ordinate committees with a view to bring about co-ordination between various development departments. Therefore, they were functioning till the beginning of 1952-53. After 1952-53, those committees were abolished and what happened was, unfortunately, there was no agency to carry on fresh works or even to maintain previous works. In this connection, my friend Sri Hutche Gowda made a suggestion that I.V.C. roads have been neglected and no provision has been made for their maintenance. It is true that the I.V.C. roads have not been properly looked after. Owing to want of maintenance we have lost also considerable length of I.V.C. roads. It is for the purpose of taking up those roads and maintaining them that a Road Re-classification committee was established. According to the recommendations of the committee all the I. V. C. roads were intended to be handed over to District Boards.

Sri T. CHANNIAH.—I want to know from the Hon'ble Member what was the budget provision made before 1952-53 for the amelioration of the Depressed Classes, rural communications, rural water supply, rural sanitation, etc.

Mr. DEPUTY SPEAKER.—About forty lakhs.

Sri T. MARIAPPA.—Between 40 to 52 lakhs. I remember the figures. By looking into the figures you will be pleased to see that we made a provision between 40 to 52 lakhs for all the items.

Mr. DEPUTY SPEAKER.—But so far as Depressed Class amelioration was concerned, there was no agency.

Sri T. MARIAPPA.—Therefore, there was an agency functioning. Unfortunately for the last 3 to 3½ years, there was no agency. Only in the month of September, Government passed an order. It stated that advisory committees would be established for rural development work. But how long did they take up to nominate members to these committees? For want of an agency the Government could not carry on the work.

4-30 P.M.

Sri A. BHEEMAPPA NAIK.—I just want one information. I want to know whether the construction of the hostels was also part of the Depressed Class amelioration fund?

Sri T. MARIAPPA.—No. 19 lakhs had been exclusively set apart for Depressed Class housing.

Mr. DEPUTY SPEAKER.—Your time is up.

Sri T. MARIAPPA.—I do not want to prolong, Sir. The only question is the Government must concentrate and have an agency to look after these normal works in places where the N.E.S. Blocks and Community projects are not taken up. I do not grudge the money that is spent on N.E.S. Blocks,

(SRI T. MARIAPPA.)

but in other places, there must be the normal work of maintenance and that should not suffer.

Sir, it may be remembered that when I handed over charge, nearly 30 lakhs of rupees were needed to make payments to incomplete wells. With the expectation that Government would give grants, people had come forward to dig wells.

I only want that Government should have a proper agency in each taluk to see that the normal work could be carried on.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ನಾನು ಗ್ರಾಮಾಭಿವೃದ್ಧಿ ಗ್ರಾಂಟ್ ಮನವಿ ವಿಚಾರವಾಗಿ ಕೆಲವು ವಿಷಯಗಳನ್ನು ತಿಳಿಸುತ್ತೇನೆ. ಮಲೆನಾಡಿನಲ್ಲಿ ರಸ್ತೆಗಳ ಅಭಾವ ವಿಪರೀತವಾಗಿದೆ. ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಪ್ರಯಾಣ ಮಾಡಲು ರಸ್ತೆಗಳೇ ಇರುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣವಿಲ್ಲದೇ ಇರುವುದರಿಂದಲೂ, ಸರ್ಕಾರದವರು ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಗ್ರಾಂಟನ್ನು ಮಂಜೂರು ಮಾಡದೆ ಇರುವುದರಿಂದಲೂ ಈ ರಸ್ತೆಗಳ ಕಾಮಗಾರಿ ಬಹಳ ಕಾಲದಿಂದ ನಿಂತುಹೋಗಿದೆ. ಆದುದರಿಂದ ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಹಣವನ್ನು ಜಾಗ್ರತೆಯಾಗಿ ಮಂಜೂರು ಮಾಡಬೇಕೆಂದು ಕೇಳುತ್ತೇನೆ. ಈಗ ಗ್ರಾಮಾಂತರಗಳಲ್ಲಿ, ಅದರಲ್ಲೂ ಮಲೆನಾಡಿನಲ್ಲಿ ತುಂಬ ರಸ್ತೆಗಳು ಆಗಬೇಕಾಗಿವೆ. ಈ ಹಣ ಮಂಜೂರಾದ ಪಕ್ಷದಲ್ಲಿ ಹೆಚ್ಚುಹೆಚ್ಚಾಗಿ ರಸ್ತೆಗಳನ್ನು ಮಾಡಲು ಅವಕಾಶವಾಗುತ್ತದೆ.

ನಿಮ್ಮ ವರ್ಗದ amelioration grant ವಿಚಾರದಲ್ಲಿ ಮಾತನಾಡುವುದಾದರೆ ಈಗ ಎಲ್ಲಿ ಮನೆಗಳ ಅಭಾವವಿದೆಯೋ ಎಲ್ಲಿ ವಾಸಕ್ಕೆ ಮನೆಗಳಿಲ್ಲವೋ ಅಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಗ್ರಾಂಟುಗಳನ್ನು ಮಂಜೂರು ಮಾಡದೆ ವಾಸದ ಮನೆಗಳು ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿವೆಯೋ ಅಂಥ ಜಿಲ್ಲೆಗಳಿಗೆ ಗ್ರಾಂಟು ಹೆಚ್ಚಾಗಿ ಹಂಚಿದರೆ ಬಹಳ ಅನಾನುಕೂಲವಾಗುತ್ತದೆ. ಬೆಂಗಳೂರು ಮೈಸೂರು ಮೊದಲಾದ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಟೌನ್ ಗಳಲ್ಲಿಯೂ ವಾಸಕ್ಕೆ ಮನೆಗಳಿದ್ದರೂ ಸಹ ಅಂಥ ಕಡೆ ಹೆಚ್ಚಾಗಿ ಗ್ರಾಂಟನ್ನು ಕೊಡುತ್ತಿದ್ದಾರೆ. ಗ್ರಾಮಾಂತರಗಳಲ್ಲಿ, ವಾಸಕ್ಕೆ ಮನೆಗಳಿಲ್ಲದೆ ಚಾವಡಿಗಳಲ್ಲೋ, ಅಥವ ಕೇವಲ ಗಳು, ಬೊಂಬು ಹಾಕಿಕಟ್ಟಿರತಕ್ಕ ಗುಡಿಸಲುಗಳಲ್ಲೋ, ವಾಸಮಾಡುತ್ತಿರುವ ಕಡೆಗಳಲ್ಲಿ ಹೆಚ್ಚಾಗಿ ಗ್ರಾಂಟನ್ನು ಕೊಡುತ್ತಿಲ್ಲ. ಇಂಥ ಕಡೆಗಳಿಗೆ ಹೆಚ್ಚಿಗೆ ಗ್ರಾಂಟನ್ನು ಮಂಜೂರು ಮಾಡುವುದು ಅವಶ್ಯಕವಾಗಿದೆ. ಹಿಂದೆ ಇಂಥ ಗ್ರಾಂಟನ್ನು ಒಂದೊಂದು ತಾಲ್ಲೂಕಿಗೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಮಂಜೂರು ಮಾಡುತ್ತಿದ್ದರು. ಈಗ ಪ್ರತಿಯೊಂದು ಕಡೆಗೂ ಜನಸಂಖ್ಯೆಯ ಆಧಾರದ ಮೇಲೆ ಗ್ರಾಂಟನ್ನು ಹಂಚಬೇಕೆಂದು ಸರ್ಕಾರ ವ್ಯವಸ್ಥೆ ಮಾಡಿದೆ. ಕೆಲವು ಜಿಲ್ಲೆಗಳಿಗೆ 40-50 ಸಾವಿರ ರೂಪಾಯಿ ಮಾತ್ರ ಮಂಜೂರು ಆಗುತ್ತಿರುವುದನ್ನು ನೋಡಿದರೆ ಒಂದು ತಾಲ್ಲೂಕಿನಲ್ಲಿ ಕೇವಲ 10-15 ಮನೆಗಳು ಆಗುವುದಕ್ಕೆ ಕೂಡ ಅವಕಾಶವಿಲ್ಲವಾಗಿದೆ. ಈ ಕಾರಣದಿಂದ ಎಲ್ಲಿ ಮನೆಗಳ ಅಭಾವವಿದೆಯೋ, ಎಲ್ಲಿ ಮನೆಗಳಿಲ್ಲವೋ, ಯಾವಕಡೆ ಮನೆಗಳ ಅವಶ್ಯಕತೆ ಇದೆಯೋ ಅಂಥ ಕಡೆ ಹೆಚ್ಚಾಗಿ ಗ್ರಾಂಟನ್ನು ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಮಿಲಿಯೊರೇಷನ್ ಗ್ರಾಂಟಿನಿಂದ ಹಣವನ್ನು ತೆಗೆದುಕೊಂಡು ಹಾಸ್ಟಲುಗಳನ್ನು ಕಟ್ಟುತ್ತಿದ್ದಾರೆ. ಈ ಹಣವನ್ನು Depressed Class Hostels ಕಟ್ಟಿಸುವುದಕ್ಕೆಂದು ವಿನಿಯೋಗ ಮಾಡುತ್ತಿದ್ದಾರೆ. ಆದರೆ ಇಂಥ ಹಾಸ್ಟಲುಗಳನ್ನು ಜನರಲ್ ಹಾಸ್ಟಲುಗಳಾಗಿ ಮಾಡಿರತಕ್ಕದ್ದು ಸರಿಯಾದದ್ದಲ್ಲವೆಂದು ಹೇಳದೆ ವಿಧಿ ಇಲ್ಲ. ಆದ್ದರಿಂದ ಜನರಲ್ ವಿದ್ಯಾಭ್ಯಾಸದ ಫಂಡಿನಿಂದ ಜನರಲ್ ಹಾಸ್ಟಲ್ ಕಟ್ಟಿಸಬೇಕೇ ಹೊರತು ಅಮಿಲಿಯೊರೇಷನ್ ಗ್ರಾಂಟಿನಿಂದ ನಿಮ್ಮ ವರ್ಗದ ಹಾಸ್ಟಲ್ ಕಟ್ಟಿ ಜನರಲ್ ಹಾಸ್ಟಲಾಗಿ ಬದಲಾಯಿಸುವುದು ಸರಿಯಲ್ಲ.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಈ ಡಿಮ್ಯಾಂಡ್ ಮನವಿಯಮೇಲೆ ಒಂದೆರಡು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಇದುವರೆಗೆ ಮಾತನಾಡಿದ ಮಾನ್ಯಸದಸ್ಯರನೇಕರು ತಾಲ್ಲೂಕು ಅಡ್ವೈಸರಿ ಕಮಿಟಿಗಳ ವಿಚಾರದಲ್ಲಿ ಹಲವಾರು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಹಿಂದಿದ್ದ ಗ್ರಾಮಾಭಿವೃದ್ಧಿ ಸಮಿತಿಗಳು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಕೈಗೊಂಡು ಹಣವನ್ನು ಮಂಜೂರು ಮಾಡುವ ಅಧಿಕಾರಹೊಂದಿ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಗ್ರಾಮಸ್ಥರ ಸಹಕಾರದಿಂದ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದುವು. ಈಗಿರುವ ಸಮಿತಿಗಳಿಗೆ ಯಾವ ಅಧಿಕಾರವೂ ಇಲ್ಲದೆ ಬರೀ ಸಲಹಾ ಸಮಿತಿಗಳಾಗಿರುವುದರಿಂದ ಅವುಗಳಲ್ಲಾಗುವ ತೀರ್ಮಾನಗಳಿಗೆ ಎಷ್ಟುಮಟ್ಟಿನ ಮನ್ನಣೆ ಸಿಕ್ಕುತ್ತದೆಂಬುದನ್ನು ಕಾದು ನೋಡಬೇಕಾಗಿದೆ. ಅಲ್ಲದೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ನಡೆದಿರುವ ಕೆಲಸವನ್ನು ಪರಿಶೀಲಿಸಿ ಗ್ರಾಮಾಂತರಗಳಲ್ಲಿ ಬಹುಕಡಮೆ ಕೆಲಸವಾಗಿ ರಸ್ತೆ ಕಾಂಗಾರಿ ಬಹಳವಾಗಿ ನಿಂತುಹೋಗಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಈ ನಾಲ್ಕು ವರ್ಷಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ಒಂದು ಮೈಲಿ ರಸ್ತೆ ಸಹ ಆಗಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಸಹ ಮಾಡಿಲ್ಲ. ಅಲ್ಲದೆ ಗ್ರಾಮಾಂತರ ರಸ್ತೆಗಳ ಕಾರ್ಯವನ್ನು ಯಾರು ಮಾಡಬೇಕೆಂಬುದನ್ನು ಸರ್ಕಾರದಲ್ಲಿ ಕೇಳಬೇಕಾಗಿದೆ. ಆಮೇಲೆ ಹಿಂದೇನು ಐ.ವಿ.ಸಿ. ರಸ್ತೆ ಕೆಲಸ ನಡೆದಿದೆಯೋ ಅದು ಉಪೇಕ್ಷಿಸಲ್ಪಟ್ಟು ಅದನ್ನು ನೋಡಿಕೊಳ್ಳುವವರೇ ಇಲ್ಲವೇ ಹೋಗಿದೆ. ಅದನ್ನು ಡಿಸ್ಟ್ರಿಕ್ಟ್ ಬೋರ್ಡ್ ಅಥವಾ ಪಂಚಾಯಿತಿ ಅಥವಾ ಸರ್ಕಾರ ಯಾರೂ ನೋಡುವ ಹಾಗಿಲ್ಲ. ಇದು ಸರಿಯಲ್ಲ. ಹಿಂದೆ ಮಾಡಿರುವ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಸ್ವಾಮಿ, ತಾಲ್ಲೂಕು ಅಡ್ವೈಜರಿ ಕಮಿಟಿಗಳನ್ನು ಮಾಡಿ ಸುಮಾರು ಆರು ತಿಂಗಳಾಗಿದೆ. ಈ ಆರು ತಿಂಗಳ ಅನುಭವದಲ್ಲಿ ನೋಡುವುದಾದರೆ ಈ ಕಮಿಟಿಗಳನ್ನು ಆದಷ್ಟು

ಜಾಗ್ರತೆ ಬರ್ತಪೂರ್ವಮಾಡತಕ್ಕದ್ದು ಆವಶ್ಯಕ ಎಂದು ನನಗಾದರೂ ಅನ್ನಿಸುತ್ತದೆ. ಏಕೆಂದರೆ ಈ ಕಮಿಟಿಗಳನ್ನು ಯಾವ ಉದ್ದೇಶಕ್ಕಾಗಿ ಸರ್ಕಾರ ನೇಮಕ ಮಾಡಿತೋ ಅದಕ್ಕೆ ವಿರುದ್ಧವಾಗಿ ಕೆಲಸವಾಗುತ್ತಿದೆ. ಚಿಕ್ಕಚಿಕ್ಕ ಮುಖಂಡರ ವಾಗ್ಯುದ್ಧದಿಂದ ಈ ಕಮಿಟಿಗಳ ಕೆಲಸ ಕಾರ್ಯಗಳು ಯೋಜಿತವಾದ ಕಾರ್ಯಕ್ರಮದ ಪ್ರಕಾರ ನಡೆಯದೆ ಬಹಳ ತೊಂದರೆಯಾಗಿದೆ. ಇದು ಮೊದಲನೆಯ ವಿಚಾರ.

ಎರಡನೆಯದಾಗಿ ನಿಮ್ಮ ತರಗತಿಗಳಿಗೆ ಕೊಡತಕ್ಕ ಗ್ರಾಂಟು, ಹಾಸ್ಟೆಲುಗಳನ್ನು ಕಟ್ಟುವುದಕ್ಕೆ ಖರ್ಚು ಮಾಡುವ ಹಣ, ಹರಿಜನರು ಮತ್ತು ನಿಮ್ಮ ವರ್ಗದವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುತ್ತಿರುವ ಸಾಮಾನು, ಕಿಟಕಿ, ಹೆಂಚು ಮೊದಲಾದುವಕ್ಕೆ ಒದಗಿಸುವ ಮೊಬಲಗು ಈಗ ಬಹಳವಾಗಿ ಕಡಮೆಯಾಗುತ್ತಾ ಇದೆ. ಹಾಸ್ಟಲಿನ ವಿಚಾರದಲ್ಲಿ ಉದಾಹರಣೆ ಕೊಡಬಲ್ಲೆ. ಕೋಲಾರ ಜಿಲ್ಲೆಯಲ್ಲಿ ನಿಮ್ಮ ವರ್ಗದ ಅಮಿಲಿಯೊರೇಷನ್ ಗ್ರಾಂಟಿನಿಂದ ಒಂದು ದೊಡ್ಡ ಹಾಸ್ಟಲನ್ನು ಕಟ್ಟಿರುವುದು ಆನೆಗೆ ನಿಕ್ಕರು ಹೊಲಿಸಿದ ಹಾಗಾಗಿದೆ. ಏಕೆಂದರೆ ಈ ಹಾಸ್ಟಲನ್ನು ಕಟ್ಟಿಸಿದಮೇಲೆ ಈ ಕಟ್ಟಡದ ಮೇಲೆ ಎಲ್ಲರ ಕಣ್ಣೂಬಿದ್ದು ನಿಮ್ಮ ವರ್ಗದವರಿಗೆ ಅಥವಾ ಆದಿಕರ್ಣಾಟಕರಿಗೆ ಇರಬೇಕಾದ ಹಾಸ್ಟಲು ದುರಾದೃಷ್ಟವಶಾತ್ ಜನರಲ್ ಹಾಸ್ಟಲಾಗಿ ಪರಿವರ್ತನೆಯಾಯಿತು. ಈ ದಿವಸ ಒಂದು ಪ್ರಶ್ನೆ ಹಾಕುವುದು ನಿಮ್ಮ ವರ್ಗದವರಿಗೆ ಮೀಸಲಾಗಿದ್ದ ಹಣ ಖರ್ಚುಮಾಡಿ ಒಂದು ದೊಡ್ಡ ಹಾಸ್ಟಲನ್ನು ಕಟ್ಟಿ ಅದನ್ನು ಜನರಲ್ ಹಾಸ್ಟಲಾಗಿ ಪರಿವರ್ತನೆ ಮಾಡಿದರೆ ನಿಮ್ಮ ವರ್ಗದವರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ಅನಾನುಕೂಲವಾಗುವುದಿಲ್ಲವೆ? ಇದನ್ನು ಮುಖ್ಯವಾಗಿ ಮಾನ್ಯ ಸಚಿವರು ಯೋಚನೆ ಮಾಡಬೇಕು. ಈ ರೀತಿ ಈಗ ಜನರಲ್ ಹಾಸ್ಟಲ್ ಮಾಡಿದ್ದಾರೆ. ಇದನ್ನು ಡಿಪ್ರೆಸ್ಡ್ ಕ್ಲಾಸ್ ತರಗತಿಯವರಿಗೆ ಮೊದಲು ತೆರೆಯಲಾಗಿತ್ತು. . . . .

ಶ್ರೀ ಟಿ. ಚನ್ನಯ್ಯ.—ಈ ದಿವಸ ಅದನ್ನು ಜನರಲ್ ಹಾಸ್ಟಲಾಗಿ ಪರಿವರ್ತನೆ ಮಾಡಿದ್ದಾಗ್ಯೂ ಕೇವಲ 20 ಮಂದಿಗೆ ಮಾತ್ರ ಅವಕಾಶ ಕೊಡಲಾಗಿದೆ. ಆದರೆ ನಾವು ಕೊಡತಕ್ಕ ದುಡ್ಡನ್ನು ಕೊಟ್ಟು ಈ ಡಿಪ್ರೆಸ್ಡ್ ಕ್ಲಾಸಿನ ಹಾಸ್ಟಲಿನಲ್ಲಿ ಏಕೆ ಓದಬೇಕು ಎಂದು ಹೇಳಿ ಈ ದಿವಸ ಹುಡುಗರು ಯಾರೂ ಅಲ್ಲಿಗೆ ಬರುತ್ತಿಲ್ಲ. ಈಗ ಅಲ್ಲಿ ಕೇವಲ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳು ಮಾತ್ರವೇ ಇರುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಹಾಸ್ಟಲಿಗೆ ಆ ಹರಿಜನೋದ್ಧಾರದ ಫಂಡಿನಿಂದ ದುಡ್ಡು ಹಾಕಿ ಕಟ್ಟಿಸಲಾಗಿತ್ತು. ಈ ದಿವಸ ಇದನ್ನು ಜನರಲ್ ಹಾಸ್ಟಲಿಗೆ ಪರಿವರ್ತನೆ ಮಾಡಿರುವುದರಿಂದ ಅಷ್ಟರಮಟ್ಟಿಗೆ ಈ ನಿಧಿಯಿಂದ ಖರ್ಚು ಮಾಡಿದ್ದ ದುಡ್ಡು ಅನ್ಯಾಯವಾದಂತಾಗಲಿಲ್ಲವೇ ಎಂಬುದು ನನ್ನ ಪ್ರಶ್ನೆ.

*ಶ್ರೀ ಯಂ. ಎಂ. ಮಾದಪ್ಪ (ಚಾಮರಾಜನಗರ)—ಸ್ವಾಮಿ, ಈ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ನಲ್ಲಿ ನಮ್ಮ ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕನ್ನೇ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಆದರೆ ಈ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚೆ ನಡೆಯುತ್ತಿದ್ದಾಗ ಚಾಮರಾಜನಗರ ತಾಲ್ಲೂಕಿಗೂ ಕೂಡ ಈ ಯೋಜನೆಯನ್ನು ವಿಸ್ತರಿಸಬೇಕೆಂದು ಒಂದು ಮನವಿಯನ್ನು ಮಂಡಿಸಿದುದಕ್ಕೆ ಅಧಿಕಾರಿಗಳು ಈ ಯೋಜನೆಯನ್ನು ಈಗ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಸೌಕರ್ಯಗಳನ್ನು ಒದಗಿಸಲಾಗಿದೆಯೋ ಅಂಥ ಸ್ಥಳಗಳಿಗೆ ಮಾತ್ರವೇ ಒದಗಿಸಲಾಗುವುದೆಂದು ಹೇಳಿದರು. ಆದರೆ ಈ ದಿವಸ ಗುಂಡ್ಲುಪೇಟೆ ತಾಲ್ಲೂಕಿಗೆ ಈ ಸ್ಕೀಮನ್ನು ಮಂಜೂರು ಮಾಡಿದ್ದಾರೆ. ಒಂದು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿಗೆ ಎಲೆಕ್ಟ್ರಿಸಿಟಿಯನ್ನೊದಗಿಸಿರಬಹುದು. ಇನ್ನು ಕೆಲವು ಗ್ರಾಮಗಳಿಗೆ ಒದಗಿಸದೆ ಇರಬಹುದು. ಹಿಂದೆ ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದ್ದ ಕಾರಣ ಶ್ರೀ ಗುಂಡಪ್ಪಗೌಡರ ಕಾಲದಲ್ಲೇ ಅಲ್ಲಿ ಅನೇಕ ಬೋರ್ ವೆಲ್‌ಗಳನ್ನು ಹಾಕಿಸಿದ್ದರು. ಆದರೆ ಈಹೊತ್ತಿಗೂ ಆ ಕೆಲಸಗಳೆಲ್ಲಾ ಹಾಗೇ ನಿಂತು ಬಂದಿವೆ.

ಶ್ರೀ. ಟಿ. ಚನ್ನಯ್ಯ.—ತಾವು ಹೇಳುವ ಹಂಗಳ ಇತ್ಯಾದಿ ಗ್ರಾಮಗಳನ್ನು ಈಗ ಲಿಸ್ಟಿನಲ್ಲಿ ಸೇರಿಸಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಆ ಗ್ರಾಮಗಳ ವಿಚಾರವನ್ನು ನಾನು ಹೇಳುತ್ತಿಲ್ಲ. ನಾನು ಕೇಳುತ್ತಿರುವುದು ಉಡಿಗಾಲ, ಹೆಗ್ಗಾಲ ಮತ್ತು ಕುದೇರು ಇತ್ಯಾದಿ ಗ್ರಾಮಗಳನ್ನು ಆ ಲಿಸ್ಟಿಗೆ ಸೇರಿಸಬೇಕೆಂದು ಕಳುಹಿಸಲಾಗಿತ್ತು. ಆದರೆ ತಾವು ಏಕೆ ಆ ಗ್ರಾಮಗಳನ್ನು ಸೇರಿಸಿಲ್ಲ?

ಆದರೆ ಕೆಲವು ತಾಲ್ಲೂಕುಗಳಿಗೆ ಅವರವರ ಶಿಫಾರ್ಸಿನ ಮೇಲೆ ಅವರವರಿಗೆ ಬೇಕಾದಂಥ ತಾಲ್ಲೂಕುಗಳಿಗೆ ಈ ಸೌಕರ್ಯಗಳನ್ನೊದಗಿಸಿದ್ದಾರೆ. ಈ ದಿವಸ ಒಂದು ಲಕ್ಷ ರೂಪಾಯಿಗಳ ಮೊಬಲಗಿನಲ್ಲಿ 25 ಸಾವಿರ ಮಾತ್ರ ಖರ್ಚಾಗಿರುತ್ತೆಂದೂ ಇನ್ನುಳಿದ ಶೇಕಡ 75 ಮೊಬಲಗು ಲ್ಯಾಪ್ಸಾಗುತ್ತದೆಂದೂ ತಿಳಿದು ಬಂದಿದೆ. ಇದನ್ನು ಎಲ್ಲಾ ಗ್ರಾಮಗಳಿಗೂ ಒದಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ರೂರಲ್ ಸ್ಯಾನಿಟೇಷನ್ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದು ಏನೇನೂ ಸಾಲದು. ಇದಕ್ಕೆ ನೂರು ಪಾಲು ಹೆಚ್ಚು ಮೊಬಲಗನ್ನು ಒದಗಿಸಿದರೂ ಅದೂ ಕೂಡ ಸಾಲದೆಂತಲೇ ಹೇಳಬೇಕಾಗುತ್ತದೆ. ಆದಕಾರಣ ಇನ್ನೂ ಹೆಚ್ಚು ಮೊಬಲಗನ್ನು ಈ ಬಾಬಿಗೆ ಒದಗಿಸಿ ತಾವು ಮೊದಲು ಈ ಹೆಲ್ತ್ ಪಾಯಿಂಟಿಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಗ್ರಾಮಾಭಿವೃದ್ಧಿ ವಿಚಾರದಲ್ಲಿ ಸರ್ಕಾರದವರು ಯಾವ ಯಾವ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ ಎಂಬ ಒಂದೆರಡು ಅಂಶಗಳನ್ನು ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯವಾಗಿ ನಾನು ಜವಾಬು ಕೊಡಲಿಚ್ಛಿಸುತ್ತೇನೆ. ಮುಖ್ಯವಾಗಿ ನೀರಿನ ವ್ಯವಸ್ಥೆ ಮಾಡತಕ್ಕ ವಿಷಯದಲ್ಲಿ ಈ ವರ್ಷ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ 18 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದರ ಜೊತೆಗೆ ನ್ಯಾಷನಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ 30 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಎಷ್ಟೋ ಹಣ ಸಕಾಲಕ್ಕೆ ಖರ್ಚಾಗುತ್ತಾ ಇಲ್ಲ. ಬಾವಿಗಳ ಕೆಲಸ ಜರುಗುತ್ತಿಲ್ಲ ಎಂದು ಅನೇಕರು ಹೇಳಿದರು. ಬಾವಿಗಳನ್ನು ಕಟ್ಟತಕ್ಕ ವಿಷಯದಲ್ಲಿ ಒಂದು ತೊಂದರೆ ಇದೆ. ಅನೇಕ ಗ್ರಾಮಗಳಲ್ಲಿ ಈ ಬಾವಿಗಳ ಕಂಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ ಆಯಾಯಾ ಗ್ರಾಮಸ್ತರು ಮುಂದೆ ಬರುತ್ತಾ ಇಲ್ಲ. ಆದ್ದರಿಂದ ಯಾರಾದರೂ ಪಟ್ಟಣಗಳಲ್ಲಿರತಕ್ಕವರು ಅಥವಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರುವ ಕಂಟ್ರಾಕ್ಟರುಗಳು ಟೆಂಡರ್‌ಗೆ ಅಪ್ಲೈ ಮಾಡಿ, ಸಂಬಂಧಪಟ್ಟ ರೆವಿನ್ಯೂ ಏಜೆನ್ಸಿಯಿಂದ

(ಶ್ರೀ ಟಿ. ಚನ್ನಯ್ಯ.)

ಡೆಪ್ಯೂಟಿ ಕಮಿಷನರ್‌ಗೆ ಕಳುಹಿಸಿ, ಬಾವಿ ಕೆಲಸ ತೆಗೆದುಕೊಳ್ಳಿ ಎಂದು ಬಲತ್ಕಾರ ಮಾಡುವ ಹೊತ್ತಿಗೆ ವರ್ಷದ ಕೊನೆ ಆಗುತ್ತದೆ. ಆದ್ದರಿಂದ ವರ್ಷದ ಪ್ರಾರಂಭದಲ್ಲಿ ಸಕಾಲಕ್ಕೆ ಹಣ ಒದಗಿಸಿದ್ದರೂ ಕಂಟ್ರಾಕ್ಟರುಗಳು ಬಾವಿ ಕೆಲಸ ತೆಗೆದುಕೊಳ್ಳುವುದು ನಿಧಾನ ಮಾಡಿ ಕೆಲಸ ಜಾಗ್ರತೆ ಆಗುವುದಿಲ್ಲ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 8,000 ಬಾವಿಗಳನ್ನು ಒದಗಿಸಬೇಕೆಂದು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. 8,000 ಕುಡಿಯುವ ನೀರಿನ ಬಾವಿಗಳಲ್ಲಿ ಈಗಾಗಲೇ 6,000 ಬಾವಿಗಳು ತೆಗೆಯಲ್ಪಟ್ಟಿವೆ. ಇನ್ನು ಸುಮಾರು 2,000 ಬಾವಿಗಳು ಆಗಬೇಕಾಗಿವೆ. ಅವುಗಳ ಕೆಲಸ ಕೂಡ ಜಾಗ್ರತೆ ಆಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀ ಮಂಜಪ್ಪನವರೂ ಕೂಡ ಹೇಳಿದ್ದಾರೆ. ಕುಡಿಯುವ ನೀರಿನ ಬಾವಿಗಳ ವಿಷಯದಲ್ಲಿ ಗ್ರಾಮಾಂತರಗಳಲ್ಲಿ ಎಲ್ಲೆಲ್ಲಿ ಮುಖ್ಯವಾಗಿ ಆಗಬೇಕೋ ಅಲ್ಲೆಲ್ಲಾ ಮಾಡಿಸಬೇಕೆಂದು ಉದ್ದೇಶವಿದೆ. ಮಾಡಿಸುವುದಕ್ಕೆ ಸಿದ್ಧವಾಗಿದ್ದೇವೆ. ಏನಾದರೂ ಕೆಲವು ಜಿಲ್ಲೆಗಳಲ್ಲಿ ಹಣ ಸಾಲದೆ ಬಾವಿಗಳನ್ನು ತೆಗೆಯಲಿಲ್ಲ ಎಂದು ಹೇಳಿ ಡೆಪ್ಯೂಟಿ ಕಮಿಷನರಿಗೆ ಮತ್ತು ಸರ್ಕಾರದವರಿಗೆ ತಿಳಿಸಿದ ಪಕ್ಷದಲ್ಲಿ ಅಂಥಾ ಜಿಲ್ಲೆಗಳಿಗೆ ನಾವು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರು ಯಾರೂ ಕೂಡ ಕುಡಿಯುವ ನೀರಿನಬಾವಿಗಳಿಗೆ ಸರ್ಕಾರ ಏನೂ ಹಣ ಒದಗಿಸಿಲ್ಲ ಎಂದು ಯಾವ ಭಯವನ್ನೂ ಪಡಬೇಕಾಗಿಲ್ಲ. ಮತ್ತು ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂ ನಲ್ಲಿ ಈಗಾಗಲೇ ಇಂಡಿಯಾ ಸರ್ಕಾರದವರು ಕೊಟ್ಟಿರತಕ್ಕ ಹಣ ಲ್ಯಾಪ್ಸ್ ಆಗುತ್ತದೆ. ಎಂದು ಕೆಲವರು ಶಂಕೆ ಪಟ್ಟರು. ನಾವು ಆ ಅಭಿಪ್ರಾಯವನ್ನು ತಿಳಿದೇ ಸಮಂಚಿತವಾಗಿಯೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಅದಕ್ಕೆ ಬೇಕಾದ ಮೆಷಿನರಿಯನ್ನು ಮಾರ್ಚಿ ಆಖೈರಿನಲ್ಲೇ ಕೊಂಡುಕೊಳ್ಳಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆಜ್ಞೆ ಕೊಟ್ಟಿದ್ದೇವೆ. ಈಗಾಗಲೇ ಅನೇಕ ಮೆಷಿನರಿಗಳನ್ನು ಎಂದರೆ ಪಂಪ್ ಸೆಟ್ಸ್, ಮೋಟಾರು ಮುಂತಾದವುಗಳನ್ನು ಕೊಂಡುಕೊಳ್ಳಲಿಕ್ಕೆ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಮತ್ತು ಹಣ ಲ್ಯಾಪ್ಸ್ ಆಗುವುದಕ್ಕೆ ಕೂಡ ಅವಕಾಶವಿಲ್ಲ. ಆದ್ದರಿಂದ ನೀರಿನ ವ್ಯವಸ್ಥೆ ವಿಷಯದಲ್ಲಿ ಸರ್ಕಾರದವರು ಬಹಳವಾಗಿ ಶ್ರದ್ಧೆವಹಿಸಿದ್ದಾರೆ ಯಾವ ವಿಧದಲ್ಲೂ ಕೂಡ ಕುಡಿಯುವ ನೀರಿನ ಬಾವಿಗಳನ್ನು ತೆಗೆಯುವುದಕ್ಕೆ ಹಿಂತೆಗೆಯುತ್ತಿಲ್ಲ ಎಂಬುದನ್ನು ತಿಳಿಸಲು ಬಯಸುತ್ತೇನೆ. ಚಾಮರಾಜನಗರ ತಾಲ್ಲೂಕಿನಲ್ಲೂ ಕೂಡ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಐದು ಸಾವಿರ ಜನಸಂಖ್ಯೆಯಿರತಕ್ಕ ಕೆಲವು ಗ್ರಾಮಗಳನ್ನು ಸೇರಿಸಿ ಕಳುಹಿಸಬೇಕೆಂದು ಡೆಪ್ಯುಟಿ ಕಮೀಷನರಿಗೆ ಬರೆದಿದ್ದೇವೆ. ಇನ್ನೂ ಯಾವುದಾದರೂ ಗ್ರಾಮಗಳಿಗೆ ಅತ್ಯವಶ್ಯಕವಾಗಿದೆ ಎಂದರೆ ಅದನ್ನೂ ಕೂಡ ಆಲೋಚನೆ ಮಾಡಿ ಎಂದು ತಿಳಿಸುತ್ತೇನೆ.

ರೂರಲ್ ಕಮ್ಯುನಿಕೇಷನ್ ವಿಷಯದಲ್ಲೂ ಕೂಡ ಸರ್ಕಾರದವರು ಚಾಲ್ತಿ ಸಾಲಿನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಅನೇಕ ಮಾನ್ಯ ಸದಸ್ಯರು ಮತ್ತು ಇನ್ನೂ ಕೆಲವು ಖಾಸಗಿ ದೊಡ್ಡ ಮನುಷ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ ಐ.ಪಿ.ಸಿ ರಸ್ತೆಗಳು ಮತ್ತಿತರ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳು ರಿಪೇರಿ ಆಗದೆ ದುರವಸ್ಥೆಯಲ್ಲಿವೆ ಅವುಗಳನ್ನು ಸರಿಯಾಗಿ ಮೈಂಟೇನ್ ಮಾಡಿಕೊಂಡು ಬರಬೇಕು ಎಂಬ ಅಭಿಪ್ರಾಯದಿಂದಲೇ ಸರ್ಕಾರದವರು ಈ ಹಿಂದೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಗ್ರಾಂಟು ಮತ್ತು ಲೋನ್ ರೂಪದಲ್ಲಿ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ಮತ್ತು ಈಗ ಕೊಟ್ಟಿರತಕ್ಕ ಹಣ ಸಾಲದು ಎಂದು ಹೇಳಿ ಈ ಸಾರಿ 14 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದೇವೆ. ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಕೂಡ ಒಂದು ಲಕ್ಷ 75 ಸಾವಿರ ರೂಪಾಯಿಗಳು ಬರುತ್ತದೆ. ಎರಡು ಜಿಲ್ಲೆಗಳಿಗೆ ಮಾತ್ರ ಒಂದು ಲಕ್ಷ 50 ಸಾವಿರ ರೂಪಾಯಿಗಳು ಬರುತ್ತದೆ.

ಉಳಿದ ಎಲ್ಲಾ ಜಿಲ್ಲೆಗಳಿಗೂ 1,75,000 ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಕೆಲವು ಮಾನ್ಯ ಸದಸ್ಯರು 31ನೆಯ ತಾರೀಖಿನೊಳಗಾಗಿ ಈ ಹಣ ಖರ್ಚಾಗದಿದ್ದರೂ ಲಾಪ್ಸ್ ಆಗದಂತೆ non-lapsable grant ಆಗಿ ಅದನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ. ಆದರೆ ಹೀಗೆ ಮಾಡುವುದಕ್ಕೆ ಅಕೌಂಟೆಂಟ್ ಜನರಲ್ ಒಪ್ಪಿಗೆ ಕೊಡುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲೆಲ್ಲಿ ಸೇತುವೆಗಳು ಕಲ್ವರ್ಟ್‌ಗಳು ಮಾಡಬೇಕಾಗಿವೆಯೋ ಅವುಗಳನ್ನು ಜಾಗ್ರತೆಮಾಡಿ ಮುಗಿಸಬೇಕೆಂದು ನಿರ್ದಿಷ್ಟ ಸೂಚನೆಗಳನ್ನು ಕೊಟ್ಟಿದ್ದೇವೆ. ಅವರೂ ಮಾಡುತ್ತೇವೆಂದು ಭರವಸೆಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಮುಖ್ಯ ಮಂತ್ರಿಗಳು 20 ಲಕ್ಷ ರೂಪಾಯಿಗಳೆಂದು ಹೇಳಿದರು. ನೀವು 14 ಲಕ್ಷವೆಂದು ಹೇಳಿದಿರಲ್ಲಾ.

ಶ್ರೀ ಟಿ. ಚನ್ನಯ್ಯ.—ನಾನು ಹೇಳಿದ್ದು ಈ ಸಾರಿಗೆ. ಮೊನ್ನೆ 14 ಲಕ್ಷ ರೂಪಾಯಿಗಳನ್ನು ಈ ಮಾನ್ಯ ಸಭೆಯ ಒಪ್ಪಿಗೆ ಪಡೆದು ಕೊಟ್ಟಿದ್ದೇವೆ.

ಆಮೇಲೆ Rural Sanitation ವಿಚಾರದಲ್ಲಿ ಪ್ರತಿಯೊಂದು ಕಡೆಯಲ್ಲೂ ಗ್ರಾಮಾಭಿವೃದ್ಧಿ ಕಾರ್ಯಗಳು ಹಿಂದೆ ಬಿದ್ದಿವೆಯೆಂದು ಹೆಲ್ತ್ ಇಲಾಖೆಯವರೂ, ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳೂ ಎಲ್ಲಾ ಕಡೆಗೂ ಹೋಗಿ ಸಲಹೆ ಕೊಡುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ N.E.S. ಬ್ಲಾಕುಗಳಲ್ಲಿ intensive ಆಗಿ ಕೆಲಸ ಮಾಡುವುದಕ್ಕೆ ಏರ್ಪಾಡು ಮಾಡಲಾಗಿದೆ. ಎರಡು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಕುಡಿಯುವ ನೀರಿಗಾಗಿ 14 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆದ್ದರಿಂದ ರೂರಲ್ ಸ್ಯಾನಿಟೇಷನ್ ಮತ್ತು ನೀರು ಸರಬರಾಯಿ ಹಾಗೂ communicationಗಳ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಭರವಸೆ ಕೊಡುತ್ತೇನೆ.

Amelioration grants ವಿಚಾರದಲ್ಲಿಯೂ ಹಿಂದೆ ಎಷ್ಟು ಹಣ ಕೊಟ್ಟಿತ್ತೋ ಈಗಲೂ ಅಷ್ಟೇ ಕೊಟ್ಟಿದೆ. ಕಡಮೆಮಾಡಿಲ್ಲ. ಪಾಲಿಸಿ ಕಮಿಟಿಯವರು ಯಾವರೀತಿ ಹೇಳುತ್ತಾರೆಯೋ ಅದೇ ರೀತಿ ಮಾಡುತ್ತಿದೆಯೇ ಹೊರತು ಬೇರೆ ರೀತಿಯಲ್ಲಿ ಮಾಡಿಲ್ಲ. ಅಲ್ಲದೆ ನಿಮ್ನ ತರಗತಿಯವರಿಗೆ ಮಾತ್ರವೇ ನಾವು ಖರ್ಚು ಮಾಡುತ್ತಿದ್ದೇವೆ.

1952-53ನೆಯ ಇಸವಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಪಂಚಾಯ್ತಿಗಳ ಆಕ್ಟ್ ಜಾರಿಯಾಯಿತು. ಆದರೆ ನಾನಾ ಕಾರಣಗಳಿಂದ ಅದರಂತೆ ವ್ಯವಸ್ಥೆ ಮಾಡಲಿಲ್ಲ. ಕೆಲವು ತಿಂಗಳ ಹಿಂದೆ ತಾಲ್ಲೂಕ್ ಆಡ್ವೈಸರಿ ಕಮಿಟಿಗಳನ್ನು ನಿರ್ಮಿಸಲಾಗಿದೆ. ಅವರು ಸೂಕ್ತ ಸಲಹೆಗಳನ್ನು ಕೊಟ್ಟು ಹೆಚ್ಚಿನ ಕಾರ್ಯಕ್ರಮಗಳು ನಡೆಯುವಂತಾಗಲೆಂಬ ಸದುದ್ದೇಶದಿಂದಲೇ ಮಾಡಿದ್ದೇವೆ. ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಅವರು

ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಸರ್ಕಾರದವರು ಒದಗಿಸಿರುವ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆಯೇ ಹೊರತು ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡಕೂಡದೆಂದು ಹೇಳಿ ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಹೆಚ್ಚಿಗೆ ಕೆಲಸಗಳಾಗಬೇಕೆಂಬುದೇ ಸರ್ಕಾರದವರ ಆಶಯವಾಗಿದೆ. ಮಾನ್ಯ ಸದಸ್ಯರು ಕೆಲವರು, ಕೆಲವು ಸ್ಥಳಗಳಲ್ಲಿ ರಸ್ತೆಗಳನ್ನು ಮಾಡಿಲ್ಲವೆಂದು ಹೇಳಿದರು. ಅದರ ವಿಷಯದಲ್ಲಿ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಐ. ವಿ. ಸಿ. ರಸ್ತೆಗಳಲ್ಲಿ ಕೆಲವು ಜಿಲ್ಲಾ ಬೋರ್ಡಿಗೆ ಸೇರಿದುವಾಗಿವೆ. ಅವರೇ ಅನೇಕ ಮೈಲಿಗಳ ರಸ್ತೆ ಮಾಡಿಸಬೇಕಾಗಿದೆ. ಆದರೆ ಹಣದ ಅಭಾವದ ದೆಶೆಯಿಂದ ಅವು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಗ್ರಾಂಟ್ ಕೂಡ ಕೊಡಲಾಗಿದೆ. ಆದರೆ, maintenance ವಿಚಾರ ಮಾತ್ರ ಪೂರಾ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆ. ಸರ್ಕಾರದವರ ಜವಾಬ್ದಾರಿ ಈ ವಿಷಯದಲ್ಲಿ ಏನೂ ಇಲ್ಲ: ಆದರೂ ಕೂಡ ಡಿಸ್ಟ್ರಿಕ್ಟ್ ಬೋರ್ಡಿನವರ ಹಣಕಾಸಿನ ಅಭಾವದ ದೃಷ್ಟಿಯಿಂದ ಅವಕ್ಕೆ ಸಾಕಷ್ಟು ಹಣ ಒದಗಿಸಿದ್ದಾರೆ. ಆದ್ದರಿಂದ ಈಗಿರತಕ್ಕ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಜಿಲ್ಲಾ ಬೋರ್ಡುಗಳ ಮುಖಾಂತರ ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಾರೆಂದು ನಾನು ಹೇಳುತ್ತೇನೆ.

5 P.M.

Sri T. MARIAPPA.—What is the provision for Local Development Works this year?

ಶ್ರೀ ಟಿ. ಚನ್ನಯ್ಯ.—Local Development Works ಎಂದು ಒಂದು 'ಹೆಡ್'' ಇತ್ತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆ ರೀತಿ ಏನೂ ಇಲ್ಲ.

ಆಮೇಲೆ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳನ್ನು ರಚನೆ ಮಾಡುವ ವಿಚಾರವನ್ನು ಪ್ರಸ್ತಾಪಿಸಿ, ನಾವು ನಮ್ಮ ಮನಸ್ಸಿಗೆ ಬಂದಹಾಗೆ ಈ ಸಮಿತಿಗಳನ್ನು ಮಾಡಿದ್ದೇವೆಂದು ಹೇಳಿದರು. ಖಂಡಿತವಾಗಿ ಹೇಳುತ್ತೇನೆ, ಯಾವ ಅಭಿಮಾನ ಅಥವಾ ರಾಜಕೀಯ ದೃಷ್ಟಿಯನ್ನಾಗಲಿ ಇಟ್ಟುಕೊಂಡು ನಾವು ಮಾಡಿಲ್ಲ. The Committees are purely advisory bodies.

Sri A. BHEEMAPPA NAIK.—But on the advice of some, you have done it.

Sri T. CHANNIAH.—On the advice of responsible elderly persons and also on the recommendation of the Deputy Commissioners, these Committees have been formed.

ಆದುದರಿಂದ ಯಾವ ಸಂಬಂಧ ಅಥವಾ ಅಭಿಮಾನವನ್ನೂ ಇಟ್ಟುಕೊಂಡು ಮಾಡಿಲ್ಲ. ಈ ರೀತಿಯ ಸಮಿತಿಗಳನ್ನು ಮಾಡುವುದರಿಂದ ಯಾವ ಉಪಯೋಗವೂ ಇಲ್ಲವೆಂದು ಹೇಳಿದರು. ಹಣಕಾಸಿನ ಹೊರೆ ಹೊತ್ತು ಕೆಲಸ ಮಾಡುವ ಸಂಭವವಿಲ್ಲದೇಯಿರುವುದರಿಂದ ಅವರೇನೂ ಕಷ್ಟಪಡಬೇಕಾಗಿಲ್ಲ. ಆದುದರಿಂದ ಈ ಡಿಮ್ಯಾಂಡಿಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—The question is:

> "That a sum not exceeding Rs. 97,20,700 be granted to the Government to defray the charges which will come in course of payment during the year ending 31st day of March 1957 in respect of 'Rural Development'."

The motion was adopted.

Mr. DEPUTY SPEAKER.—The half-an-hour debate which is scheduled for today will be taken up on some other day.

The House will now rise and meet at 8-30 A.M. tomorrow.

The House adjourned at Three Minutes past Five of the Clock to meet again on Saturday, the 24th March 1956 at Thirty Minutes past Eight of the Clock.

WD 2896—GPB—550—11-7-56